# ಸಮಾಜವಿಜ್ಞಾನ II

# SOCIAL SCIENCE II

## ತರಗತಿ IX

## STANDARD IX

ಭಾಗ - 2

ಕೇರಳ ಸರಕಾರ

ಶಿಕ್ಷಣ ಇಲಾಖೆ

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT), ಕೇರಳ
2016

KT-537-1/Soc. Sci. II-9 (K) Vol-2

## ರಾಷ್ಟ್ರಗೀತೆ

ಜನಗಣಮನ ಅಧಿನಾಯಕ ಜಯ ಹೇ
ಭಾರತ ಭಾಗ್ಯವಿಧಾತಾ,
ಪಂಜಾಬ ಸಿಂಧು ಗುಜರಾತ ಮರಾಠಾ
ದ್ರಾವಿಡ ಉತ್ಕಲ ವಂಗ,
ವಿಂಧ್ಯಹಿಮಾಚಲ ಯಮುನಾ ಗಂಗಾ,
ಉಚ್ಛಲ ಜಲಧಿತರಂಗ,
ತವಶುಭ ನಾಮೇ ಜಾಗೇ,
ತವಶುಭ ಆಶಿಶ ಮಾಗೇ,
ಗಾಹೇ ತವ ಜಯ ಗಾಥಾ
ಜನಗಣಮಂಗಲದಾಯಕ ಜಯ ಹೇ
ಭಾರತ ಭಾಗ್ಯ ವಿಧಾತಾ,
ಜಯಹೇ, ಜಯಹೇ, ಜಯಹೇ,
ಜಯ ಜಯ ಜಯ ಜಯಹೇ!

## ಪ್ರತಿಜ್ಞೆ

ಭಾರತವು ನನ್ನ ದೇಶ, ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆಪಡುತ್ತೇನೆ.

ನಾನು ನನ್ನ ಹೆತ್ತವರನ್ನು ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ.

ನಾನು ನನ್ನ ದೇಶ ಮತ್ತು ನನ್ನ ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

**State Council of Educational Research and Training (SCERT)**
Poojappura, Thiruvananthapuram 695 012, Kerala
*Website* : www.scertkerala.gov.in, *e-mail* : scertkerala@gmail.com
Phone : 0471 - 2341883, Fax : 0471 - 2341869
Typesetting and Layout : SCERT
Printed at : KBPS, Kakkanad, Kochi-30
© Department of Education, Government of Kerala

ಪ್ರೀತಿಯ ಮಕ್ಕಳೇ,

ನಾವು ವಾಸಿಸುವ ಭೂಮಿಯ ವೈವಿಧ್ಯಗಳ ಒಂದು ವರ್ಣದೃಶ್ಯವು ಐದರಿಂದ ಎಂಟರ ವರೆಗಿನ ತರಗತಿಗಳಲ್ಲಿ ಭೂಮಿಶಾಸ್ತ್ರಕ್ಕೆ ಸಂಬಂಧಿಸಿದ ಅಧ್ಯಾಯಗಳನ್ನು ಹಾದುಹೋಗಿರುವಾಗ ನಿಮಗೆ ಲಭಿಸಿರಬಹುದು. ಈ ವೈವಿಧ್ಯಗಳು ಯಾಕೆ ಎಂಬ ಅನ್ವೇಷಣೆಯನ್ನು ಒಂಬತ್ತು, ಹತ್ತನೇ ತರಗತಿಗಳ ಭೂಗೋಳಶಾಸ್ತ್ರ ವಿಷಯಕ್ಕೆ ಸಂಬಂಧಿಸಿದ ಅಧ್ಯಾಯಗಳಲ್ಲಿ ಕಾಣಬಹುದು. ಇಂತಹ ಅನ್ವೇಷಣೆಗಳು ಹೆಚ್ಚಿನ ತಿಳುವಳಿಕೆಗಳ ಕಡೆಗೆ, ಸಂಶೋಧನೆಗಳ ಕಡೆಗೆ ಹಾಗೂ 'ನಮ್ಮ ಭೂಮಿಯನ್ನು ಸಂರಕ್ಷಿಸೋಣ' ಎಂಬ ಪ್ರತಿಜ್ಞೆಯ ಕಡೆಗೆ ನಿಮ್ಮನ್ನು ಮುನ್ನಡೆಸುತ್ತದೆ. ನಿತ್ಯಜೀವನ ಹಾಗೂ ಅರ್ಥಶಾಸ್ತ್ರಗಳೊಳಗಿನ ಸಂಬಂಧದ ಕುರಿತಾದ ತಿಳುವಳಿಕೆಯು ಆಧುನಿಕ ಕಾಲದಲ್ಲಿ ಜೀವಿಸಲು ನಿಮ್ಮನ್ನು ಸಮರ್ಥರನ್ನಾಗಿಸಬಹುದು. ಇದಕ್ಕಾಗಿ ಅರ್ಥಶಾಸ್ತ್ರದ ವಿವಿಧ ಆಶಯಗಳನ್ನು ಪಠ್ಯಪುಸ್ತಕದಲ್ಲಿ ಸೇರಿಸಲಾಗಿದೆ. ವಿಮರ್ಶಾತ್ಮಕ ಚಿಂತನೆ, ನಿರಂತರ ಅನ್ವೇಷಣೆ ಹಾಗೂ ಕಲಿಕಾ ಚಟುವಟಿಕೆಗಳು ಜ್ಞಾನದ ಪುಟವನ್ನು ತೆರೆಯಲು ನಿಮಗೆ ಸಹಾಯಕವಾಗಬಹುದು. ನಾಳಿನ ಉತ್ತಮ ಪೌರನಾಗಿ ಬದಲಾಗಲು ಈ ಪಠ್ಯಪುಸ್ತಕವು ನಿಮಗೆ ದಾರಿದೀಪವಾಗಲಿ.

ಪ್ರೀತಿಯ ಶುಭಹಾರೈಕೆಯೊಂದಿಗೆ,

**ಡಾ. ಪಿ.ಎ. ಫಾತಿಮ**
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ.

## TEXT BOOK DEVELOPMENT COMMITTEE


**Vergese Pothan**
HSST, St. John's HSS, Mattam, Mavelikkara
**Noushad P.P.**
HSA, GHS, Kannadi, Palakkad
**Kripalaj K.**
HSA, VIMHSS, Vadavannur, Palakkad
**Shashidharan K.**
HSA, GHS, Malampuzha, Palakkad
**Jobi Manual**
HSA, Nirmala HS, Thariyod, Wayanad.
**Dr. Priyesh C.A.**
Asst. Proff. Department of Economics, University college, Thiruvananthapuram.

**Unnikrishnan U.**
HSST,Govt. HSS, Venjaramood, Thiruvananthapuram
**Dr. Jomon Mathew**
Asst. Proffessor, Dept. of Economics, University College, Thiruvanthapuram.
**Nishanth Mohan M.**
HSST, Govt. Tami HSS, Chala, Thiruvananthapuram.
**Vijayakumar C.R.**
HSST, Govt HSS, Mithrummala.
**Yousuf Chandrankandi**
HSST, Govt. HSS, Pallikunnu, Kannur.
**Shoojamon S.**
HSA, PNMNGHSS, Kunthallur, Chriyankeezh.


## EXPERTS


**Dr. Martin Patric**
Associate Proffessor (Rtd.)
Department of Economics,
Maharajas College, Ernakulam.

**I.P. Joseph**
Asst. Proffessor (Rtd.), SCERT

**Muralidharan S.**
Associate Proffessor (Rtd.),
Department of Economics, Maharajas College, Ernakulam.

**Manoj K.V.**
Research Officer, SCERT.


## ACADEMIC CO-ORDINATER


**Chithramadhavan**
Research Officer, SCERT


## TRANSLATERS


**Sanjeeva M.**
HSA, GHSS, Paivalike
**Ganeshkumar S.**
HSA, SGKHS, Kudlu
**Shivaprakash M.K.**
HSA, MSCHSS, Nirchal

**Sandeep B.S.**
HSA, GHSS, Bandadka
**Aravinda Y.**
HSA, SAPHSS, Agalpady
**Narayana D.**
Teacher Educator, DIET, Kasaragod.


## LANGUAGE EXPERTS


**Prof. Shreenatha**
Associate Prof. of Kannada(Rtd.), Govt. College, Kasaragod.

**Dr. P. Shrikrishna Bhat,**
Kannada Prof(Rtd.), Govt. College, Kasaragod


## CORDINATOR OF TRANSLATION


**Dr. Faizal Mavulladathil,** Research Officer, SCERT, Thiruvananthapuram

# ಅನುಕ್ರಮಣಿಕೆ


6 ಆರ್ಥಿಕ ಬೆಳವಣಿಗೆ ಮತ್ತು ಆರ್ಥಿಕ ಅಭಿವೃದ್ಧಿ 95

7 ಸುರಕ್ಷಿತವಾದ ಭವಿಷ್ಯಕ್ಕಾಗಿ 107

8 ಜನಸಂಖ್ಯೆ, ವಲಸೆ, ವಾಸಸ್ಥಳಗಳು 123

9 ಆರ್ಥಿಕ ವ್ಯವಸ್ಥೆಗಳು ಮತ್ತು ಆರ್ಥಿಕ ಧೋರಣೆಗಳು 143




## ಈ ಪುಸ್ತಕದಲ್ಲಿ ಕಲಿಕಾಸೌಕರ್ಯಕ್ಕಾಗಿ ಕೆಲವು ಚಿಹ್ನೆಗಳನ್ನು ಉಪಯೋಗಿಸಲಾಗಿದೆ.


ಹೆಚ್ಚಿನ ಓದಿಗಾಗಿ - ಮೌಲ್ಯನಿರ್ಣಯಕ್ಕೆ ಒಳಪಡಿಸಬೇಕಾಗಿಲ್ಲ


ಕಲಿಕಾಭಿವೃದ್ಧಿ ನಿರ್ಣಯಿಸಲಿರುವ ಪ್ರಶ್ನೆಗಳು


ಚಟುವಟಿಕೆಗಳು


ಪ್ರಧಾನ ಕಲಿಕಾ ಸಾಧನೆಗಳಲ್ಲಿ ಒಳಪಡುವವುಗಳು


ಮೌಲ್ಯನಿರ್ಣಯ ಮಾಡುವ


ಮುಂದುವರಿದ ಚಟುವಟಿಕೆಗಳು



# 6

# ಆರ್ಥಿಕ ಬೆಳವಣಿಗೆ ಮತ್ತು ಆರ್ಥಿಕ ಅಭಿವೃದ್ಧಿ

ಆರ್ಥಿಕ ವ್ಯವಸ್ಥೆಯ ಕುರಿತು ನಾವು ಈ ಹಿಂದೆ ಚರ್ಚಿಸಿರುವೆವಲ್ಲವೇ. ಆರ್ಥಿಕ ವ್ಯವಸ್ಥೆಯಲ್ಲಿ ಉಂಟಾಗುವ ಬದಲಾವಣೆಗಳನ್ನು ಗಮನಿಸಿದ್ದೀರಾ? ದೇಶದ ಕೃಷಿ ಸಂಬಂಧವಾದ ಉತ್ಪಾದನೆ ಹೆಚ್ಚಾಗಿದೆ ಎಂಬುದೊಂದು ಗಮನಾರ್ಹವಾದ ಬದಲಾವಣೆ. ಅದೇ ರೀತಿ ಬೇರೆ ಬೇರೆ ಬದಲಾವಣೆಗಳನ್ನು ನಾವು ಕಾಣಬಹುದು.

- ಕಟ್ಟಡ ನಿರ್ಮಾಣ ಕ್ಷೇತ್ರ ಬೆಳೆಯುತ್ತಿದೆ.
- ಕೈಗಾರಿಕಾ ಉತ್ಪಾದನೆಯಲ್ಲಿ ಹೆಚ್ಚಳ ಉಂಟಾಗುತ್ತಿದೆ.
- 


ಇಲ್ಲಿ ಸೂಚಿಸಿದ ಬದಲಾವಣೆಗಳನ್ನು ಸಾಮಾನ್ಯವಾಗಿ ಆರ್ಥಿಕ ಬೆಳವಣಿಗೆ ಎಂದು ಕರೆಯಲಾಗುತ್ತದೆ.

## ಆರ್ಥಿಕ ಬೆಳವಣಿಗೆ (Economic growth)

ಒಂದು ಆರ್ಥಿಕ ವ್ಯವಸ್ಥೆಯಲ್ಲಿ ವಸ್ತುಗಳ ಮತ್ತು ಸೇವೆಗಳ ಉತ್ಪಾದನೆಯಲ್ಲಿ ಉಂಟಾಗುವ ಹೆಚ್ಚಳವನ್ನು ಆರ್ಥಿಕ ಬೆಳವಣಿಗೆ ಎನ್ನುತ್ತಾರೆ. ವಸ್ತುಗಳ ಹಾಗೂ ಸೇವೆಗಳ ಪ್ರಮಾಣ ಹೆಚ್ಚುತ್ತಿದೆ ಎಂದರೆ ದೇಶದ ರಾಷ್ಟ್ರೀಯ ಆದಾಯವು ಹೆಚ್ಚುತ್ತಿದೆ ಎಂದರ್ಥ. ದೇಶದ ಒಟ್ಟು ಉತ್ಪಾದನೆಯನ್ನು ಹಿಂದಿನ ವರ್ಷಕ್ಕೆ ಹೋಲಿಸಿದಾಗ ಉತ್ಪಾದನೆಯ ಪ್ರಮಾಣದಲ್ಲಿ ಉಂಟಾಗುವ ಹೆಚ್ಚಳವನ್ನು ಆರ್ಥಿಕ ಬೆಳವಣಿಗೆ ಎನ್ನುತ್ತಾರೆ.



ಆರ್ಥಿಕ ಬೆಳವಣಿಗೆಗೆ ಒಂದು ಉದಾಹರಣೆಯನ್ನು ಗಮನಿಸಿರಿ. 2013-14ನೇ ವರ್ಷದಲ್ಲಿ ಒಂದು ಪ್ರದೇಶದಲ್ಲಿ 100 ಕ್ವಿಂಟಾಲ್ ಭತ್ತವನ್ನು ಉತ್ಪಾದಿಸಲಾಗಿದೆಯೆಂದು ಭಾವಿಸಿರಿ. 2014-15ನೇ ಆರ್ಥಿಕ ವರ್ಷದಲ್ಲಿ ಉತ್ಪಾದಿಸಿದ ಭತ್ತದ ಪ್ರಮಾಣ 110 ಕ್ವಿಂಟಾಲ್ ಆಗಿ ಹೆಚ್ಚಾಯಿತು. ಹಿಂದಿನ ವರ್ಷಕ್ಕೆ ಹೋಲಿಸಿದರೆ 2014-15ರ ಉತ್ಪಾದನೆಯಲ್ಲಿ 10 ಕ್ವಿಂಟಾಲ್ ಹೆಚ್ಚಳ ಉಂಟಾಯಿತೆಂದು ಹೇಳಬಹುದು. ಇದು ಆರ್ಥಿಕ ಬೆಳವಣಿಗೆಯನ್ನು ಸೂಚಿಸುತ್ತದೆ. ಆರ್ಥಿಕ ಬೆಳವಣಿಗೆ ಉಂಟಾಗುವಾಗ ಜನರ ಆವಶ್ಯಕತೆಗಳನ್ನು ಪೂರೈಸುವ ಸಾಮರ್ಥ್ಯವೂ ದೇಶಕ್ಕೆ ಹೆಚ್ಚಾಗುತ್ತದೆ. ಆರ್ಥಿಕ ಬೆಳವಣಿಗೆ ಹೇಗೆ ಉಂಟಾಗುತ್ತದೆ ಎಂಬುದನ್ನು ಕೆಳಗೆ ನೀಡಿದ ಪದಸೂರ್ಯದಿಂದ ಕಂಡುಹಿಡಿಯೋಣ.




ಸಾಮಾನ್ಯವಾಗಿ ಉತ್ಪಾದನ ರಂಗದಲ್ಲಿ ಪ್ರಗತಿ ಉಂಟಾಗುವುದರೊಂದಿಗೆ ಒಂದು ದೇಶದಲ್ಲಿ ಉದ್ಯೋಗಾವಕಾಶಗಳು ಸೃಷ್ಟಿಸಲ್ಪಡುತ್ತವೆಯೆಂದು ತಿಳಿಯಬಹುದು. ಆ ಉದ್ಯೋಗಗಳಿಂದಾಗಿ ದೊರೆಯುವ ಆದಾಯವು ಕಾರ್ಮಿಕರಲ್ಲಿ ವಸ್ತುಗಳನ್ನು ಖರೀದಿಸುವ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಉದ್ಯೋಗಕ್ಕೆ ಸೇರುವುದರಿಂದಾಗಿ ಜನರ ಜೀವನಮಟ್ಟ ಉತ್ತಮಗೊಳ್ಳುತ್ತದೆ.



ಆರ್ಥಿಕ ಬೆಳವಣಿಗೆಯಿಂದಾಗಿ ಒಂದು ಅರ್ಥ ವ್ಯವಸ್ಥೆಯಲ್ಲಿ ಯಾವೆಲ್ಲ ಬದಲಾವಣೆಗಳುಂಟಾಗುತ್ತವೆ?

## ಆರ್ಥಿಕ ಬೆಳವಣಿಗೆಯ ದರ (Economic growth rate)

ಆರ್ಥಿಕ ಬೆಳವಣಿಗೆಯ ಬಗ್ಗೆ ನಾವು ಅರ್ಥೈಸಿಕೊಂಡೆವಲ್ಲವೇ. ಆರ್ಥಿಕ ಬೆಳವಣಿಗೆಯನ್ನು ಹೇಗೆ ಲೆಕ್ಕ ಹಾಕುವುದೆಂದು ತಿಳಿಯೋಣ. ಇದಕ್ಕಾಗಿ ಆರ್ಥಿಕ ಬೆಳವಣಿಗೆಯ ದರ ಎಂಬ ಮಾನವನ್ನು ಉಪಯೋಗಿಸುತ್ತಾರೆ. ರಾಷ್ಟ್ರೀಯ ಆದಾಯದಲ್ಲುಂಟಾಗುವ ಹೆಚ್ಚಳದ ಆಧಾರದಲ್ಲಿ ಆರ್ಥಿಕ ಬೆಳವಣಿಗೆಯನ್ನು ಗಣನೆ ಮಾಡುತ್ತಾರೆ. ಕಳೆದ ವರ್ಷಕ್ಕೆ ಹೋಲಿಸುವಾಗ ಈ ವರ್ಷದ ರಾಷ್ಟ್ರೀಯ ಆದಾಯದಲ್ಲಿ ಉಂಟಾದ ಹೆಚ್ಚಳದ ದರವೇ ಆರ್ಥಿಕ ಬೆಳವಣಿಗೆಯ ದರವಾಗಿದೆ.

## ಆರ್ಥಿಕ ಅಭಿವೃದ್ಧಿ(Economic development)

ಆರ್ಥಿಕ ಬೆಳವಣಿಗೆಯಿಂದಾಗಿ ಜನರ ಜೀವನಮಟ್ಟ ಸುಧಾರಿಸಿದೆಯೆಂದು ಹೇಳಲು ಸಾಧ್ಯವಿಲ್ಲ. ಜೀವನಮಟ್ಟ ಸುಧಾರಿಸಬೇಕಾದರೆ ಉತ್ತಮ ರಾಷ್ಟ್ರೀಯ ಆದಾಯದ ಜೊತೆಗೆ ಜೀವನದ ಸನ್ನಿವೇಶಗಳೂ ಬದಲಾಗಬೇಕು. ಅಂತಹ ಸನ್ನಿವೇಶಗಳು ಯಾವುವು ಎಂದು ಚಿಂತಿಸಿರಿ.

- ಎಲ್ಲರಿಗೂ ಪೋಷಕಾಹಾರದ ಲಭ್ಯತೆ.
- ಎಲ್ಲರಿಗೂ ಸುಧಾರಿತ ಆರೋಗ್ಯ ರಕ್ಷಣಾ ವ್ಯವಸ್ಥೆಗಳು.
- ಎಲ್ಲರಿಗೂ ಶಿಕ್ಷಣ ಸೌಲಭ್ಯಗಳು.
- ಎಲ್ಲರಿಗೂ ಶುದ್ಧ ನೀರಿನ ಲಭ್ಯತೆ.
- 

ಈ ರೀತಿಯ ಉತ್ತಮ ಜೀವನ ಸೌಲಭ್ಯಗಳು ಎಲ್ಲರಿಗೂ ದೊರೆತಾಗ ಒಂದು ದೇಶದ ಜನರ ಜೀವನಮಟ್ಟವು ಸುಧಾರಿಸುತ್ತದೆ. ಆರ್ಥಿಕ ಬೆಳವಣಿಗೆಯ ಜೊತೆಗೆ ಜೀವನ ಮಟ್ಟವೂ ಉತ್ತಮವಾದಾಗ ಆರ್ಥಿಕ ಅಭಿವೃದ್ಧಿಯುಂಟಾಗುತ್ತದೆ. ದೇಶದ ಆರ್ಥಿಕತೆಯು ಬೆಳವಣಿಗೆ ಹೊಂದುವುದರೊಂದಿಗೆ ಎಲ್ಲರಿಗೂ ಅದರ ಪ್ರಯೋಜನಗಳನ್ನು ಅನುಭವಿಸಲು ಸಾಧ್ಯವಾದಾಗ ಆ ದೇಶದ ಆರ್ಥಿಕತೆಯು ಅಭಿವೃದ್ಧಿ ಹೊಂದಿದೆ ಎಂದು ಹೇಳಬಹುದು.

ಆರ್ಥಿಕ ಅಭಿವೃದ್ಧಿ = ಆರ್ಥಿಕ ಬೆಳವಣಿಗೆ + ಜೀವನಮಟ್ಟದಲ್ಲುಂಟಾದ ಹೆಚ್ಚಳ

ಆರ್ಥಿಕ ಬೆಳವಣಿಗೆ, ಆರ್ಥಿಕ ಅಭಿವೃದ್ಧಿ ಎಂಬವುಗಳಿಗೆ ಸಂಬಂಧಿಸಿ ಕೆಲವು ಹೇಳಿಕೆಗಳನ್ನು ಕೆಳಗೆ ನೀಡಲಾಗಿದೆ. ಅವುಗಳನ್ನು ಆರ್ಥಿಕ ಬೆಳವಣಿಗೆ ಮತ್ತು ಆರ್ಥಿಕ ಅಭಿವೃದ್ಧಿಗಳೆಂದು ವರ್ಗೀಕರಿಸಿ ಪಟ್ಟಿ ಮಾಡಿರಿ.



- *ರಾಷ್ಟ್ರೀಯ ಆದಾಯದಲ್ಲಿ ಹೆಚ್ಚಳವುಂಟಾಯಿತು.*
- *ಗೋಧಿ ಉತ್ಪಾದನೆಯು 150 ಕೋಟಿ ಟನ್ ಆಗಿ ಹೆಚ್ಚಾಯಿತು.*
- *ರಾಷ್ಟ್ರೀಯ ಹೆದ್ದಾರಿಗಳನ್ನು ಚತುಷ್ಪಥವಾಗಿ ಬದಲಾಯಿಸಲಾಯಿತು.*
- *ಕಾರ್ಮಿಕರಿಗೆ ಪರಿಣಿತ ತರಬೇತಿ ನೀಡಲಾಯಿತು.*
- *ಆರೋಗ್ಯ ಕ್ಷೇತ್ರದಲ್ಲಿ ಅತ್ಯಾಧುನಿಕ ಸೌಕರ್ಯಗಳನ್ನು ಮಾಡಲಾಯಿತು.*
- *ಶಿಕ್ಷಣ ಸಂಸ್ಥೆಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಹೆಚ್ಚಿಸಲಾಯಿತು.*

ಆರ್ಥಿಕ ಬೆಳವಣಿಗೆ ಮತ್ತು ಅಭಿವೃದ್ಧಿಗಳು ಪರಸ್ಪರ ಸಂಬಂಧವುಳ್ಳವುಗಳಾಗಿದ್ದರೂ ಕೆಲವು ವ್ಯತ್ಯಾಸಗಳಿವೆಯೆಂದು ತಿಳಿಯಿತಲ್ಲವೇ. ಅದರಲ್ಲಿ ಕೆಲವು ವ್ಯತ್ಯಾಸಗಳನ್ನು ಕೆಳಗೆ ನೀಡಿದ ಪಟ್ಟಿಯಲ್ಲಿ ಕ್ರೋಡೀಕರಿಸಲಾಗಿದೆ.

| ಆರ್ಥಿಕ ಬೆಳವಣಿಗೆ | ಆರ್ಥಿಕ ಅಭಿವೃದ್ಧಿ |
|---|---|
| ◆ ಉತ್ಪಾದನೆ ಮತ್ತು ಆದಾಯದಲ್ಲಿ ಉಂಟಾಗುವ ಹೆಚ್ಚಳ | ◆ ಜನರ ಜೀವನಮಟ್ಟದಲ್ಲಿ ಉಂಟಾಗುವ ಹೆಚ್ಚಳ |
| ◆ ರಾಷ್ಟ್ರೀಯ ಆದಾಯದಲ್ಲಾಗುವ ಹೆಚ್ಚಳವೇ ಅಳತೆಯ ಮಾನವಾಗಿದೆ. | ◆ ಭೌತಿಕ ಜೀವನಮಟ್ಟ ಸೂಚ್ಯಂಕ, ಮಾನವ ಅಭಿವೃದ್ಧಿ ಸೂಚ್ಯಂಕಗಳೇ ಅಳತೆಯ ಮಾನವಾಗಿವೆ. |
| ◆ ಆರ್ಥಿಕ ಬೆಳವಣಿಗೆಯನ್ನು ಸಂಖ್ಯಾ ರೂಪದಲ್ಲಿ ಸೂಚಿಸಲಾಗುತ್ತದೆ. | ◆ ಗುಣಾತ್ಮಕ ಬದಲಾವಣೆಯನ್ನು ಸೂಚಿಸಲಾಗುತ್ತದೆ. |
| ◆ ಆರ್ಥಿಕ ಘಟಕಗಳಿಗೆ ಮಾತ್ರ ಒತ್ತು ನೀಡಲಾಗುತ್ತದೆ. | ◆ ಆರ್ಥಿಕ ಮತ್ತು ಸಾಮಾಜಿಕ ಘಟಕಗಳಿಗೆ ಒತ್ತು ನೀಡಲಾಗುತ್ತದೆ. |
| ◆ ಬೆಳವಣಿಗೆಯು ಹ್ರಸ್ವ ಕಾಲದಲ್ಲಿ ಉಂಟಾಗುವುದಾಗಿದೆ. | ◆ ಅಭಿವೃದ್ಧಿಯು ದೀರ್ಘಕಾಲದಲ್ಲಿ ಉಂಟಾಗುವುದಾಗಿದೆ. |

## ಅಭಿವೃದ್ಧಿ ಸೂಚ್ಯಂಕಗಳು(Development Indices)

ಪ್ರಪಂಚದ ದೇಶಗಳನ್ನು ಅಭಿವೃದ್ಧಿಹೊಂದಿದ ದೇಶಗಳೆಂದು ಹಾಗೂ ಅಭಿವೃದ್ಧಿ ಹೊಂದುತ್ತಿರುವ ದೇಶಗಳೆಂದು ವಿಂಗಡಿಸಲಾಗುತ್ತದೆ. ಯಾವ ಆಧಾರದಲ್ಲಿ ಈ ವರ್ಗೀಕರಣವನ್ನು ಮಾಡುತ್ತಾರೆ? ಒಂದು ದೇಶವು ಅಭಿವೃದ್ಧಿ ಹೊಂದಿದೆಯೆಂದು ಹೇಗೆ ಪರಿಗಣಿಸುತ್ತಾರೆ? ಆರ್ಥಿಕ ಅಭಿವೃದ್ಧಿಯನ್ನು ತಿಳಿಯಲು ಸಾಮಾನ್ಯವಾಗಿ ಅಂಗೀಕರಿಸಿದ ಕೆಲವು ಸೂಚ್ಯಂಕಗಳಿವೆ. ಪ್ರಧಾನ ಅಭಿವೃದ್ಧಿ ಸೂಚ್ಯಂಕಗಳನ್ನು ಕೆಳಗೆ ನೀಡಿದ ಚಾರ್ಟ್‌ನಿಂದ ಕಂಡುಹಿಡಿಯೋಣ.

**ಅಭಿವೃದ್ಧಿ ಸೂಚ್ಯಂಕಗಳು**

- ತಲಾ ಆದಾಯ
- ಭೌತಿಕ ಜೀವನಮಟ್ಟ ಸೂಚ್ಯಂಕ
- ಮಾನವ ಅಭಿವೃದ್ಧಿ ಸೂಚ್ಯಂಕ
- ಮಾನವ ಸಂತಸ ಸೂಚ್ಯಂಕ

### ತಲಾ ಆದಾಯ (Per capita Income)

ತಲಾ ಆದಾಯವು ಅಭಿವೃದ್ಧಿ ಸೂಚ್ಯಂಕಗಳಲ್ಲಿ ಅತಿ ಸರಳ ಹಾಗೂ ಹಿಂದಿನ ಕಾಲದಲ್ಲಿ ಹೆಚ್ಚು ಪ್ರಾಧಾನ್ಯ ನೀಡಿ ಪರಿಗಣಿಸಿದ ಸೂಚ್ಯಂಕವಾಗಿದೆ. ಇದೊಂದು ಪರಂಪರಾಗತ ಅಭಿವೃದ್ಧಿ ಸೂಚ್ಯಂಕವಾಗಿದೆ. ರಾಷ್ಟ್ರೀಯ ಆದಾಯವನ್ನು ಜನಸಂಖ್ಯೆಯಿಂದ ಭಾಗಿಸಿದಾಗ ಸಿಗುವ ಸಂಖ್ಯೆಯೇ ತಲಾ ಆದಾಯ.

ಈ ಸೂಚ್ಯಂಕದ ಪ್ರಕಾರ ಒಂದು ದೇಶವು ಆರ್ಥಿಕ ಅಭಿವೃದ್ಧಿ ಹೊಂದಿದೆಯೇ ಎಂದು ಕಂಡುಹಿಡಿಯಲು ಎರಡು ಅಂಶಗಳನ್ನು ಗಮನಿಸಬೇಕು.

- ◆ ರಾಷ್ಟ್ರೀಯ ಆದಾಯದ ಬೆಳವಣಿಗೆಯ ದರ
- ◆ ಜನಸಂಖ್ಯಾ ಹೆಚ್ಚಳದ ದರ

ರಾಷ್ಟ್ರೀಯ ಆದಾಯದ ಬೆಳವಣಿಗೆಯ ದರವು ಜನಸಂಖ್ಯಾ ಹೆಚ್ಚಳದ ದರಕ್ಕಿಂತ ಹೆಚ್ಚಾದರೆ ಮಾತ್ರ ತಲಾ ಆದಾಯ ಹೆಚ್ಚಾಗುತ್ತದೆ. ತಲಾ ಆದಾಯದ ಹೆಚ್ಚಳವು ಅಭಿವೃದ್ಧಿಯ ದ್ಯೋತಕವಾಗಿದೆ. ಒಂದು ದೇಶದ ಆರ್ಥಿಕ ಬೆಳವಣಿಗೆಯನ್ನು ಹಿಂದಿನ ವರ್ಷಗಳೊಂದಿಗೆ ತುಲನೆ ಮಾಡಲು ಮತ್ತು ಬೇರೆ ಬೇರೆ ದೇಶಗಳ ಆರ್ಥಿಕ ಬೆಳವಣಿಗೆಯನ್ನು ಪರಸ್ಪರ ಹೋಲಿಸಲು ತಲಾ ಆದಾಯವು ಪ್ರಯೋಜನಕಾರಿಯಾಗಿದೆ.

ಒಂದು ಅಭಿವೃದ್ಧಿ ಸೂಚ್ಯಂಕವೆಂಬ ನೆಲೆಯಲ್ಲಿ ತಲಾ ಆದಾಯಕ್ಕೆ ಅನೇಕ ನ್ಯೂನತೆಗಳು (Limitation) ಇವೆ.

- ತಲಾ ಆದಾಯವು ಒಂದು ಸರಾಸರಿ ಆದಾಯವಾಗಿದೆ. ಉದಾಹರಣೆಗೆ ಒಂದು ದೇಶದ ತಲಾ ಆದಾಯವು 40,000 ರೂಪಾಯಿಗಳಾಗಿವೆಯೆಂದು ಭಾವಿಸಿರಿ. ಇದರರ್ಥ ಆ ದೇಶದ ಪ್ರತಿಯೊಬ್ಬ ವ್ಯಕ್ತಿಗೆ ಇಷ್ಟು ಆದಾಯ ದೊರೆಯುತ್ತದೆ ಎಂದಲ್ಲ. ಕೋಟಿಗಟ್ಟಲೆ ಆದಾಯಗಳಿಸುವವರೂ ಅತ್ಯಂತ ಕಡಿಮೆ ಆದಾಯಗಳಿಸುವವರೂ ಈ ಲೆಕ್ಕಕ್ಕೊಳಪಡುತ್ತಾರೆ. ಆದ್ದರಿಂದ ಇದು ಕೇವಲ ಸಂಖ್ಯಾತ್ಮಕ ರೂಪಮಾತ್ರವಾಗಿದೆ.
- ತಲಾ ಆದಾಯದ ಆಧಾರದಲ್ಲಿ ಆರ್ಥಿಕ ಅಭಿವೃದ್ಧಿಯನ್ನು ಲೆಕ್ಕ ಮಾಡುವಾಗ ಬಡವ - ಶ್ರೀಮಂತ ಎಂಬ ವಿಭಾಗಗಳು ಅಸ್ತಿತ್ವದಲ್ಲಿದ್ದಾಗ ಜನರ ಜೀವನಮಟ್ಟವು ಸುಧಾರಿಸಿದೆಯೆಂದು ಹೇಳಲು ಸಾಧ್ಯವಿಲ್ಲ.
- ಜೀವನಮಟ್ಟವನ್ನು ಸುಧಾರಿಸುವ ಘಟಕಗಳಾದ ಶಿಕ್ಷಣ, ಪೋಷಕಾಹಾರದ ಲಭ್ಯತೆ, ಆರೋಗ್ಯ ಸಂರಕ್ಷಣೆ ಮುಂತಾದವು ತಲಾ ಆದಾಯವೆಂಬ ಅಭಿವೃದ್ಧಿ ಸೂಚ್ಯಂಕದ ಜೊತೆಯಲ್ಲಿ ಸೇರಿರುವುದಿಲ್ಲ.
- ಆರ್ಥಿಕ ಬೆಳವಣಿಗೆಯ ಹೊರತಾಗಿ ಅದಕ್ಕೆ ಸಮಾನವಾದ ವಿತರಣೆ ಹಾಗೂ ಆ ಮೂಲಕ ಉಂಟಾಗುವ ಸಾರ್ವಜನಿಕ ಕ್ಷೇಮವನ್ನು ಈ ಅಭಿವೃದ್ಧಿ ಸೂಚ್ಯಂಕದಲ್ಲಿ ಪರಿಗಣಿಸುವುದಿಲ್ಲ.

## ಭೌತಿಕ ಜೀವನ ಗುಣಮಟ್ಟದ ಸೂಚ್ಯಂಕ (Physical Quality of Life Index - PQLI)

ಒಂದು ಅಭಿವೃದ್ಧಿ ಸೂಚ್ಯಂಕವೆಂಬ ದೃಷ್ಟಿಯಲ್ಲಿ ತಲಾ ಆದಾಯಕ್ಕಿಂತ ಸ್ವಲ್ಪ ವೈಜ್ಞಾನಿಕವಾದ ಇನ್ನೊಂದು ಸೂಚ್ಯಂಕದ ಅನಿವಾರ್ಯತೆ ಕಂಡುಬಂತು. ಇದರ ಫಲವಾಗಿ 1979ರಲ್ಲಿ ಭೌತಿಕ ಜೀವನ ಗುಣಮಟ್ಟದ ಸೂಚ್ಯಂಕವು ಜಾರಿಗೆ ಬಂತು.

ತಲಾ ಆದಾಯವೆಂಬ ಏಕೈಕ ಅಳತೆಮಾನದ ಬದಲು ಭೌತಿಕ ಜೀವನ ಗುಣಮಟ್ಟ ಸೂಚ್ಯಂಕದಲ್ಲಿ ಇನ್ನೂ ಮೂರು ಘಟಕಗಳನ್ನು ಆಧಾರವಾಗಿ ಪರಿಗಣಿಸಲಾಗುತ್ತದೆ. ಅವುಗಳು:

- ನಿರೀಕ್ಷಿತ ಆಯಸ್ಸು
- ಶಿಶು ಮರಣ ಪ್ರಮಾಣ
- ಸಾಕ್ಷರತಾ ಮಟ್ಟ

ಭೌತಿಕ ಜೀವನ ಗುಣಮಟ್ಟದ ಸೂಚ್ಯಂಕವನ್ನು ಆರ್ಥಿಕ ಅಭಿವೃದ್ಧಿಯಿಂದ ಭಿನ್ನವಾದ ದೃಷ್ಟಿಕೋನದಲ್ಲಿ ಕಾಣಲಾಗುತ್ತದೆ.

ಉದಾಹರಣೆಗೆ,

- ಚಿಕಿತ್ಸಾ ಸೌಕರ್ಯಗಳು ಅಧಿಕವಾದಾಗ ಜೀವನಮಟ್ಟವು ಉತ್ತಮಗೊಳ್ಳುತ್ತದೆ ಮತ್ತು ಆರ್ಥಿಕ ಅಭಿವೃದ್ಧಿಯುಂಟಾಗುತ್ತದೆ.
- ಹೊಸ ಶಿಕ್ಷಣ ಸೌಕರ್ಯಗಳು ಬಂದಾಗ ಶಿಕ್ಷಣ ಗುಣಮಟ್ಟ ಹಾಗೂ ಜನರ ಜೀವನ ಗುಣಮಟ್ಟ ಉತ್ತಮಗೊಳ್ಳುತ್ತದೆ.

ಭೌತಿಕ ಜೀವನ ಗುಣಮಟ್ಟದ ಸೂಚ್ಯಂಕವು ತಲಾ ಆದಾಯಕ್ಕಿಂತಲೂ ಉತ್ತಮ ಅಭಿವೃದ್ಧಿ ಸೂಚ್ಯಂಕವಾಗಿದೆ. ಆದರೂ ಈ ಸೂಚ್ಯಂಕವು ತಲಾ ಆದಾಯವನ್ನು ಕಡೆಗಣಿಸುತ್ತದೆಯೆಂಬುದು ಅದರ ಪ್ರಧಾನ ಕೊರತೆಯಾಗಿದೆ.

### ಮಾನವ ಅಭಿವೃದ್ಧಿ ಸೂಚ್ಯಂಕ (Human Development Index)

ಇದು ಮಾನವ ಅಭಿವೃದ್ಧಿಯನ್ನು ಮಾನದಂಡವನ್ನಾಗಿಸಿದ ಆರ್ಥಿಕ ಅಭಿವೃದ್ಧಿ ಸೂಚ್ಯಂಕವಾಗಿದೆ. ಯುಕ್ತರಾಷ್ಟ್ರ ಸಂಘದ ಅಭಿವೃದ್ಧಿ ಕಾರ್ಯಕ್ರಮ ಸಮಿತಿಯು (ಯು.ಎನ್.ಡಿ.ಪಿ.) ಮಾನವ ಅಭಿವೃದ್ಧಿ ಎಂಬ ಆಶಯದ ಬಗ್ಗೆ ಹೇಳಿರುವುದನ್ನು ಗಮನಿಸಿರಿ:

"ಮಾನವ ಅಭಿವೃದ್ಧಿ ಎಂಬುದು ಮಾನವ ಸಂಪನ್ಮೂಲದ ಸಾಮರ್ಥ್ಯವನ್ನು ಉತ್ತಮಗೊಳಿಸುವುದಕ್ಕಾಗಿ ಜನರಿಗೆ ಸಿಗುವ ಅವಕಾಶವನ್ನು ವಿಪುಲಗೊಳಿಸುವ ಪ್ರಕ್ರಿಯೆಯಾಗಿದೆ".

ಮಾನವ ಅಭಿವೃದ್ಧಿಯನ್ನು ಸಾಧಿಸುವ ಅನೇಕ ಘಟಕಗಳಿವೆ. ಕೆಲವು ಉದಾಹರಣೆಗಳನ್ನು ನೋಡಿರಿ.

- ಉತ್ತಮ ವಿದ್ಯಾಭ್ಯಾಸ ಸೌಲಭ್ಯಗಳು.
- ಉತ್ತಮ ಆರೋಗ್ಯ ಸಂರಕ್ಷಣಾ ಸೌಲಭ್ಯಗಳು.
- ಹೆಚ್ಚಿನ ತರಬೇತಿ.

ಮೇಲೆ ಹೇಳಿದ ಎಲ್ಲ ಅಂಶಗಳೂ ಮಾನವ ಅಭಿವೃದ್ಧಿಯತ್ತ ಕೊಂಡೊಯ್ಯುವವುಗಳಾಗಿವೆ. ಈ ರೀತಿಯಲ್ಲಿ ಮಾನವ ಅಭಿವೃದ್ಧಿ ಉಂಟಾದರೆ ಅದು ಆರ್ಥಿಕ ಅಭಿವೃದ್ಧಿಗೆ ಹೇಗೆ ಸಹಾಯಕವಾಗುತ್ತದೆ ಎಂಬುದಕ್ಕಿರುವ ಒಂದು ಸಂದರ್ಭವನ್ನು ನೋಡೋಣ:

ಉತ್ತಮ ಶಿಕ್ಷಣ ಸೌಕರ್ಯಗಳು ಉಂಟಾಗುತ್ತವೆ.

↓

ಹೆಚ್ಚಿನ ಜನರಿಗೆ ಶಿಕ್ಷಣ ದೊರೆಯುತ್ತದೆ.

↓

ಉತ್ತಮ ಶಿಕ್ಷಣ ಲಭಿಸಿದವರಿಗೆ ಒಳ್ಳೆಯ ಉದ್ಯೋಗಾವಕಾಶಗಳು ದೊರೆಯುತ್ತವೆ.

↓

ಉದ್ಯೋಗ ದೊರೆಯುವಾಗ ಆದಾಯ ಮತ್ತು ವಸ್ತುಗಳನ್ನು ಖರೀದಿಸುವ ಸಾಮರ್ಥ್ಯ ಹೆಚ್ಚುತ್ತದೆ.

↓

ಉತ್ತಮ ಜೀವನ ಸೌಕರ್ಯಗಳನ್ನು ಪಡೆಯಲು ಸಾಧ್ಯವಾಗುತ್ತದೆ.



ಕೆಳಗೆ ಕೊಟ್ಟಿರುವ ಇನ್ನೊಂದು ಸಂದರ್ಭವನ್ನು ಪೂರ್ತಿಗೊಳಿಸಿರಿ.

ನೂತನ ಆಸ್ಪತ್ರೆಗಳು ಸ್ಥಾಪಿಸಲ್ಪಡುತ್ತವೆ.

↓

— — — — — — — — — — — — — — — — —

↓

— — — — — — — — — — — — — — — — —

↓

— — — — — — — — — — — — — — — — —

↓

ಮಾನವ ಅಭಿವೃದ್ಧಿ ಸೂಚ್ಯಂಕವನ್ನು ತಯಾರಿಸುವಾಗ ಮೂರು ಮುಖ್ಯ ಘಟಕಗಳನ್ನು ಪರಿಗಣಿಸಲಾಗುತ್ತದೆ. ಅವುಗಳನ್ನು ಕೆಳಗೆ ನೀಡಲಾಗಿದೆ.

- ತಲಾ ಆದಾಯ
- ಸಾಕ್ಷರತೆ ಮತ್ತು ಒಟ್ಟು ಶಾಲಾ ಪ್ರವೇಶಾತಿ ದರ
- ನಿರೀಕ್ಷಿತ ಆಯಸ್ಸು

ಮಾನವ ಅಭಿವೃದ್ಧಿ ಸೂಚ್ಯಂಕದ ದರವು ಸೊನ್ನೆ ಮತ್ತು ಒಂದರ ಮಧ್ಯೆಯಿರುತ್ತದೆ. ಸೊನ್ನೆಯು ಅಭಿವೃದ್ಧಿಯೇ ಆಗದಿರುವುದನ್ನು ಸೂಚಿಸಿದರೆ, ಒಂದು ಅತಿ ಹೆಚ್ಚಿನ ಅಭಿವೃದ್ಧಿಯನ್ನು ಸೂಚಿಸುತ್ತದೆ. ಸೂಚ್ಯಂಕದಲ್ಲಿರುವ ದರದ ಆಧಾರದಲ್ಲಿ ಜಾಗತಿಕ ರಾಷ್ಟ್ರಗಳನ್ನು ಮೂರು ವಿಭಾಗಗಳಾಗಿ ವಿಂಗಡಿಸಲಾಗಿದೆ. ಕೆಳಗೆ ನೀಡಿರುವ ಪಟ್ಟಿಯನ್ನು ಗಮನಿಸಿರಿ.

| ಎಚ್.ಡಿ.ಐ. ದರ | ವಿಭಾಗ |
|---|---|
| 0.8ರಿಂದ 1.0 ವರೆಗೆ | ಉನ್ನತ ಮಾನವ ಅಭಿವೃದ್ಧಿ |
| 0.5 ರಿಂದ 0.79 ವರೆಗೆ | ಮಧ್ಯಮ ಮಾನವ ಅಭಿವೃದ್ಧಿ |
| 0.49 ಮತ್ತು ಅದಕ್ಕಿಂತ ಕಡಿಮೆ | ಕಡಿಮೆ ಮಾನವ ಅಭಿವೃದ್ಧಿ |

ಯುಕ್ತ ರಾಷ್ಟ್ರ ಸಂಘದ ಅಭಿವೃದ್ಧಿ ಕಾರ್ಯಕ್ರಮ (ಯು.ಎನ್.ಡಿ.ಪಿ.)ವು ಹೀಗೆ ಜಾಗತಿಕ ರಾಷ್ಟ್ರಗಳನ್ನು ವರ್ಗೀಕರಿಸಿ ಪಟ್ಟಿ ತಯಾರಿಸಿ ಪ್ರಕಟಿಸುತ್ತದೆ. 1990ರಿಂದ ಪ್ರತಿ ವರ್ಷವೂ ಯು.ಎನ್.ಡಿ.ಪಿ. ಮಾನವ ಅಭಿವೃದ್ಧಿಯ ವರದಿಯನ್ನು ಪ್ರಕಟಿಸುತ್ತಿದೆ.



ಕೆಲವು ದೇಶಗಳ 2014ರ ಮಾನವ ಅಭಿವೃದ್ಧಿ ಸೂಚ್ಯಂಕದ ದರವನ್ನು ಕೆಳಗೆ ನೀಡಲಾಗಿದೆ. ಈ ದೇಶಗಳನ್ನು ಮಾನವ ಅಭಿವೃದ್ಧಿಯ ಆಧಾರದಲ್ಲಿ ಮೂರು ವಿಭಾಗಗಳಾಗಿ ವರ್ಗೀಕರಿಸಿ ಪಟ್ಟಿ ಮಾಡಿರಿ.

- *ಭಾರತ* - *0.586*
- *ಜಪಾನ್* - *0.891*
- *ಮಾಲಿ* - *0.407*
- *ಶ್ರೀಲಂಕಾ* - *0.751*
- *ನೋರ್ವೆ* - *0.944*
- *ಹೈಟಿ* - *0.471*

ಮಾನವ ಅಭಿವೃದ್ಧಿ ಸೂಚ್ಯಂಕಕ್ಕೆ ಪೂರಕವಾಗಿ ಯುಕ್ತರಾಷ್ಟ್ರ ಸಂಘವು ಅಭಿವೃದ್ಧಿಪಡಿಸಿದ ಇನ್ನೊಂದು ಸೂಚ್ಯಂಕವೇ ಮಾನವ ಬಡತನ ಸೂಚ್ಯಂಕ (Human poverty Index). 1997ರಲ್ಲಿ ಇದರ ಮೊದಲ ವರದಿಯನ್ನು ಪ್ರಕಟಿಸಲಾಯಿತು. ಮೂರು ಘಟಕಗಳನ್ನು ಆಧಾರವಾಗಿರಿಸಿ ಬಡತನ ಸೂಚ್ಯಂಕವನ್ನು ತಯಾರಿಸಲಾಗುತ್ತದೆ. ಸುದೀರ್ಘ ಹಾಗೂ ಆರೋಗ್ಯಕರವಾಗಿರುವ ಜೀವನ, ಜ್ಞಾನ ಮತ್ತು ಗುಣಮಟ್ಟದ ಜೀವನವೇ ಈ ಮೂರು ಘಟಕಗಳಾಗಿವೆ.

### ಮಾನವ ಸಂತಸ ಸೂಚ್ಯಂಕ (Happiness Index)

ಮೇಲೆ ತಿಳಿಸಿದ ಅಭಿವೃದ್ಧಿ ಸೂಚ್ಯಂಕಗಳಲ್ಲದೆ ಯುಕ್ತರಾಷ್ಟ್ರ ಸಂಘವು ಅಂಗೀಕರಿಸಿದ ಹೊಸತಾದ ಸೂಚ್ಯಂಕವೇ ಮಾನವ ಸಂತಸ ಸೂಚ್ಯಂಕವಾಗಿದೆ. ಭೂತಾನ್ ಅಭಿವೃದ್ಧಿಪಡಿಸಿದ ಈ ಸೂಚ್ಯಂಕಕ್ಕೆ ಯುಕ್ತರಾಷ್ಟ್ರ ಸಂಘವು ಅಂಗೀಕಾರ ನೀಡಿತು.

ಮಾನವ ಸಂತಸ ಸೂಚ್ಯಂಕವನ್ನು ಕಂಡುಹಿಡಿಯಲು ಒಂಭತ್ತು ಸೂಚಕಗಳನ್ನು ಪರಿಗಣಿಸಲಾಗುತ್ತದೆ. ಅವುಗಳು:

- ಆರೋಗ್ಯ
- ಜೀವನಮಟ್ಟ
- ಪ್ರಕೃತಿ ಮತ್ತು ಜೈವವೈವಿಧ್ಯಗಳ ಸಂರಕ್ಷಣೆ
- ಸಾಮಾಜಿಕ ಜೀವನ ಮತ್ತು ನೆರೆಹೊರೆಯ ಸಂಬಂಧ
- ಭ್ರಷ್ಟಾಚಾರ ರಹಿತ ಆಡಳಿತ
- ಸಾಂಸ್ಕೃತಿಕ ವೈವಿಧ್ಯ
- ಶಿಕ್ಷಣ
- ಸಮಯದ ಸದುಪಯೋಗ
- ಮಾನಸಿಕ ಆರೋಗ್ಯ

2015ರ ಮಾನವ ಸಂತಸ ಸೂಚ್ಯಂಕದ ಪ್ರಕಾರ ಪ್ರಪಂಚದ ರಾಷ್ಟ್ರಗಳಲ್ಲಿ ಭಾರತವು 117ನೇ ಸ್ಥಾನದಲ್ಲಿದೆ. ಐಸ್‌ಲ್ಯಾಂಡ್, ಡೆನ್ಮಾರ್ಕ್, ನೋರ್ವೆ ಎಂಬೀ ದೇಶಗಳು ಮೊದಲ ಮೂರು ಸ್ಥಾನಗಳಲ್ಲಿವೆ.

## ಭಾರತದಲ್ಲಿ ಅಭಿವೃದ್ಧಿಯು ಎದುರಿಸುತ್ತಿರುವ ಸವಾಲುಗಳು

ಭಾರತದಲ್ಲಿ ಅಭಿವೃದ್ಧಿಯು ಅನೇಕ ಸವಾಲುಗಳನ್ನು ಎದುರಿಸುತ್ತಿದೆ. ಬಡತನವು (Poverty) ಅದರಲ್ಲಿ ಅತ್ಯಂತ ಪ್ರಧಾನವಾದುದಾಗಿದೆ.ಯೋಜನಾ ಆಯೋಗಕ್ಕೆ ಬೇಕಾಗಿ ರಂಗರಾಜನ್ ಸಮಿತಿಯು ತಯಾರಿಸಿದ ಅಂಕಿ-ಅಂಶಗಳ ಪ್ರಕಾರ ಭಾರತದಲ್ಲಿ 2011-12ರಲ್ಲಿ 29.5% ಜನರು ಬಡವರಾಗಿದ್ದಾರೆ. ನಿರಕ್ಷರತೆ, ಪೋಷಕಾಹಾರದ ಕೊರತೆ, ತೀವ್ರ ಆರ್ಥಿಕ ಅಸಮಾನತೆಗಳು, ಉಪವಾಸದಿಂದ ಮರಣ, ನಿರುದ್ಯೋಗ ಎಂಬೀ ಸಮಸ್ಯೆಗಳು ಅಭಿವೃದ್ಧಿಹೊಂದುತ್ತಿರುವ - ಅಭಿವೃದ್ಧಿಹೊಂದಿದ ದೇಶಗಳಲ್ಲಿ ಅಸ್ತಿತ್ವದಲ್ಲಿವೆ.

ನಿರುದ್ಯೋಗವು ಭಾರತ ಎದುರಿಸುತ್ತಿರುವ ಮತ್ತೊಂದು ಸಮಸ್ಯೆಯಾಗಿದೆ. ಕಳೆದ 20ವರ್ಷಗಳಲ್ಲಿ ಕಂಡುಬರುವ ನಮ್ಮ ಆರ್ಥಿಕ ಬೆಳವಣಿಗೆಯು ಶೇಕಡಾ 8ರಿಂದ 9ರ ವರೆಗೆ ಇದ್ದರೂ ಉದ್ಯೋಗದ (Employment) ಬೆಳವಣಿಗೆಯ ದರವು ಶೇಕಡಾ ಒಂದು ಅಥವಾ ಅದಕ್ಕಿಂತಲೂ ಕಡಿಮೆಯಾಗಿದೆ. ಅಂದರೆ ಆರ್ಥಿಕ ಬೆಳವಣಿಗೆಯು ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದಿಲ್ಲ ಎಂದರ್ಥ. ವಿದ್ಯಾವಂತರಾದ ಯುವತಿ-ಯುವಕರಿಗೆ ಅರ್ಹವಾದ ಮತ್ತು ಗೌರವಯುತವಾದ ಜೀವನಕ್ಕಿರುವ ಉದ್ಯೋಗ ಲಭಿಸದಿರುವುದು ಅವರ ಜೀವನವನ್ನು ಕಷ್ಟದಲ್ಲಿರುವಂತೆಯೂ ದುಃಖದಲ್ಲಿರುವಂತೆಯೂ ಮಾಡುತ್ತದೆ.



**ಭಾರತದಲ್ಲಿ ಬಡತನ**

ಭಾರತದಲ್ಲಿ ನಾವು ಕೆಲೋರಿಗಳ ಆಧಾರದಲ್ಲಿ ಬಡತನವನ್ನು ಲೆಕ್ಕಹಾಕುತ್ತೇವೆ. ಗ್ರಾಮೀಣ ಪ್ರದೇಶದಲ್ಲಿ ಪ್ರತಿ ದಿನ 2400 ಕೆಲೋರಿಗಳಷ್ಟು ಚೈತನ್ಯವನ್ನು ಶರೀರಕ್ಕೆ ನೀಡಲು ಸಾಧ್ಯವಾಗುವಂತಹ ಆಹಾರ ಲಭಿಸುವಷ್ಟು ಆದಾಯ ಇಲ್ಲದಿದ್ದರೆ ಒಬ್ಬ ವ್ಯಕ್ತಿ ಬಡತನದಲ್ಲಿದ್ದಾನೆಂದು ಅರ್ಥ. ನಗರ ಪ್ರದೇಶದಲ್ಲಾದರೆ ಇದು 2100 ಕೆಲೋರಿಯಷ್ಟಾಗಿದೆ. ಭಾರತದ ಉತ್ತರಪ್ರದೇಶ, ಬಿಹಾರ, ಉತ್ತರಾಖಂಡ್, ಛತ್ತೀಸ್‌ಗಡ್, ಒಡಿಶ್ಯಾ ಎಂಬೀ ರಾಜ್ಯಗಳ ಶೇಕಡಾ 35ಕ್ಕಿಂತ ಹೆಚ್ಚು ಜನರು ಬಡತನದಲ್ಲಿದ್ದಾರೆ.

ಅಸಮಾನತೆಯು (Inequality) ನಮ್ಮ ಅಭಿವೃದ್ಧಿಯು ಎದುರಿಸುತ್ತಿರುವ ಮತ್ತೊಂದು ಸಮಸ್ಯೆಯಾಗಿದೆ. ಅಸಮಾನತೆಯು ಮೂರು ವಿಧಗಳಲ್ಲಿವೆ.

- ಆರ್ಥಿಕ ಅಸಮಾನತೆ
- ಆದಾಯದ ಅಸಮಾನತೆ
- ಭೂಪ್ರದೇಶಗಳೊಳಗಿನ ಅಸಮಾನತೆ

ಈ ಮೂರು ರೀತಿಗಳಲ್ಲಿರುವ ಅಸಮಾನತೆಗಳು ಭಾರತದಲ್ಲಿ ಅತ್ಯಂತ ಭೀಕರವಾಗಿವೆ. ದೇಶದ ಒಟ್ಟು ಸಂಪತ್ತಿನಲ್ಲಿ ಹಾಗೂ ಒಂದು ದೇಶದಲ್ಲಿ ಉತ್ಪಾದಿಸಲ್ಪಡುವ ಆದಾಯದಲ್ಲಿ ಪ್ರತಿಯೊಂದು ಜನವಿಭಾಗಕ್ಕಿರುವ ಪಾಲಿನ ಆಧಾರದಲ್ಲಿ ನಾವು ಆರ್ಥಿಕ - ಆದಾಯಗಳ ಅಸಮಾನತೆಯನ್ನು ಲೆಕ್ಕಹಾಕುತ್ತೇವೆ.

ಮೂರನೆಯದಾಗಿ ನಾವು ಸೂಚಿಸಿದ ಅಸಮಾನತೆಯೇ ಭೂಪ್ರದೇಶಗಳೊಳಗಿನ ಅಸಮಾನತೆಯಾಗಿದೆ. ಉದಾಹರಣೆಗೆ ಮಹಾನಗರಗಳ ಹೆಚ್ಚಿನ ಜನರಿಗೆ ಉದ್ಯೋಗ, ಉತ್ತಮ ಆಸ್ಪತ್ರೆಗಳು, ರಸ್ತೆ, ಶುದ್ಧವಾದ ಕುಡಿಯುವ ನೀರಿನ ಸೌಕರ್ಯ, ಸಾರಿಗೆ ಸೌಕರ್ಯ, ಶಾಲೆಗಳು, ಕಾಲೇಜುಗಳು, ಕೈಗಾರಿಕಾ ತರಬೇತಿ ಕೇಂದ್ರ ಎಂಬಿವುಗಳು ಲಭಿಸುತ್ತವೆ. ಆದರೆ ಬಿಹಾರ, ಉತ್ತರಪ್ರದೇಶ, ಒಡಿಶ್ಯಾ ರಾಜ್ಯಗಳ ಕೆಲವು ಪ್ರದೇಶಗಳಲ್ಲಿ ಇಂತಹ ಸೌಲಭ್ಯಗಳು ಅಪರ್ಯಾಪ್ತವಾಗಿವೆ. ಅಲ್ಲಿ ಉಪವಾಸದಿಂದ ಮರಣ ಹೊಂದುವುದು, ನಿರುದ್ಯೋಗ, ಸಾರಿಗೆ ಮತ್ತು ವಾರ್ತಾವಿನಿಮಯ ಸೌಕರ್ಯಗಳ ಅಭಾವ ಎಂಬಿವುಗಳು ಹೆಚ್ಚಾಗಿ ಕಂಡುಬರುತ್ತವೆ. ಹೀಗೆ ಕೆಲವು ಪ್ರದೇಶಗಳು ಅಭಿವೃದ್ಧಿಯಲ್ಲಿ ಮುಂದುವರಿದಿರುವುದನ್ನು ಹಾಗೂ ಇನ್ನು ಕೆಲವು ಪ್ರದೇಶಗಳು ಹಿಂದುಳಿದಿರುವುದನ್ನು ಕಾಣುತ್ತೇವೆ. ಇದುವೇ ಪ್ರಾದೇಶಿಕ ಅಸಮಾನತೆಯಾಗಿದೆ.

## ಪ್ರಗತಿಶೀಲ ಅಭಿವೃದ್ಧಿ (Sustainable Development)







ಯಾವುದೇ ಒಂದು ಆರ್ಥಿಕ ವ್ಯವಸ್ಥೆಯ ಮುಖ್ಯ ಉದ್ದೇಶ ಆರ್ಥಿಕ ಅಭಿವೃದ್ಧಿಯಾಗಿದೆಯೆಂದು ಅರ್ಥವಾಯಿತಲ್ಲವೇ. ಆರ್ಥಿಕ ಅಭಿವೃದ್ಧಿಯಿಂದಾಗಿ ಅನೇಕ ಬದಲಾವಣೆಗಳು ನಮ್ಮ ಸುತ್ತಲೂ ಉಂಟಾಗುತ್ತವೆ. ಉದಾಹರಣೆಗೆ,

- ಉತ್ತಮ ಸಾರಿಗೆ ಸೌಕರ್ಯಗಳು ಉಂಟಾಗುತ್ತವೆ.
- ನಗರೀಕರಣ ತ್ವರಿತಗೊಳ್ಳುತ್ತದೆ.
- ಕೈಗಾರಿಕಾ ತರಬೇತಿ ಕೇಂದ್ರಗಳ ಸಂಖ್ಯೆ ಹೆಚ್ಚಾಗುತ್ತದೆ.
- 

ಈ ರೀತಿಯ ಬದಲಾವಣೆಗಳು ಮಾನವ ಜೀವನದ ಗುಣಮಟ್ಟವನ್ನು ಹಾಗೂ ದೇಶದ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುತ್ತವೆ ಎಂಬುದರಲ್ಲಿ ಸಂಶಯವಿಲ್ಲ. ಆದರೆ ಮನುಷ್ಯನ ಅನಿಯಂತ್ರಿತವಾದ ದಾಹವು ಕೊನೆಗೊಳ್ಳುವುದಿಲ್ಲ. ಅದು ಸಂಪನ್ಮೂಲಗಳ ಅಮಿತವಾದ ಉಪಯೋಗ ಮತ್ತು ಪ್ರಕೃತಿಯನ್ನು ನಾಶಮಾಡುವುದರತ್ತ ಮನುಷ್ಯನನ್ನು ತಲುಪಿಸುತ್ತದೆ. ನಗರೀಕರಣ ಹಾಗೂ ಕೃಷಿಯು ವಾಣಿಜ್ಯೀಕರಣದಿಂದಾಗಿ ಉಂಟಾಗುವ ಕೆಲವು ಬದಲಾವಣೆಗಳ ಚಿತ್ರಗಳನ್ನು ಗಮನಿಸಿರಿ.



ಈ ಚಿತ್ರಗಳ ಆಧಾರದಲ್ಲಿ ಮನುಷ್ಯನ ಅಭಿವೃದ್ಧಿಯ ದಾಹ ಪ್ರಕೃತಿಯಲ್ಲಿ ಯಾವೆಲ್ಲ ಪರಿಣಾಮಗಳನ್ನುಂಟುಮಾಡುತ್ತದೆ ಎಂದು ಕಂಡುಹಿಡಿಯಿರಿ.

ಅಮಿತವಾದ ಆರ್ಥಿಕ ಬೆಳವಣಿಗೆಯನ್ನು ಉದ್ದೇಶವಾಗಿರಿಸಿಕೊಂಡು ಮನುಷ್ಯ ನಡೆಸುವ ಚಟುವಟಿಕೆಗಳು ಹೆಚ್ಚಾಗಿ ಪ್ರಾಕೃತಿಕ ಸಂಪನ್ಮೂಲಗಳ ನಾಶಕ್ಕೆ ಮತ್ತು ಪರಿಸರ ನಾಶಕ್ಕೆ ಕಾರಣವಾಗುತ್ತವೆ. ನಮ್ಮ ಊರಿನಲ್ಲಿ ಪ್ರತಿದಿನ ಕಟ್ಟಲ್ಪಡುವ ಕಟ್ಟಡ ಮತ್ತು ರಸ್ತೆಗಳಿಗಾಗಿ ಶಿಲೆಕಲ್ಲು ಹಾಗೂ ಗುಡ್ಡಗಳನ್ನು ಮಿತಿಮೀರಿ ಖನನ ಮಾಡುವುದು ಮನುಷ್ಯನ ಜೀವನಕ್ಕೆ ಹಾಗೂ ಪ್ರಾದೇಶಿಕ ಹವಾಮಾನದ ಏರುಪೇರಿಗೆ ಕಾರಣವಾಗುತ್ತದೆ. ಈ ರೀತಿಯ ಸಮಸ್ಯೆಗಳು ದೇಶದ ಆರ್ಥಿಕ ಬೆಳವಣಿಗೆಯನ್ನು ಹೆಚ್ಚಿಸುವುದಾದರೂ ಒಂದು ವಿಭಾಗದ ಜನರ ಜೀವನದಲ್ಲಿ ಸಮಸ್ಯೆಗಳನ್ನುಂಟುಮಾಡುತ್ತವೆ.

ನಮಗೆ ಬೇಕಾದುದು ಮಾನವ ಸ್ನೇಹಿ ಹಾಗೂ ಪರಿಸರಕ್ಕೆ ಹಾನಿಯಾಗದ ಒಂದು ಅಭಿವೃದ್ಧಿ ನೀತಿಯಾಗಿದೆ ಅಥವಾ ಪ್ರಗತಿಶೀಲ ಅಭಿವೃದ್ಧಿಯಾಗಿದೆ.

ಯುಕ್ತರಾಷ್ಟ್ರ ಸಂಘವು ನೇಮಿಸಿದ ಬ್ರಂಟ್‌ಲೇಂಡ್ ಕಮಿಷನ್ ಪ್ರಗತಿಶೀಲ ಅಭಿವೃದ್ಧಿಯನ್ನು ಈ ರೀತಿಯಾಗಿ ನಿರ್ವಚಿಸಿದೆ:

"ಮುಂದಿನ ಪೀಳಿಗೆಯವರಿಗೆ ಅವರ ಆವಶ್ಯಕತೆಗಳನ್ನು ನೆರವೇರಿಸುವ ಸಾಮರ್ಥ್ಯದಲ್ಲಿ ಕೊರತೆಯಾಗದಂತೆ ಇಂದಿನ ಪೀಳಿಗೆಯು ತಮ್ಮ ಆವಶ್ಯಕತೆಗಳನ್ನು ನೆರವೇರಿಸುವುದೇ ಪ್ರಗತಿಶೀಲ ಅಭಿವೃದ್ಧಿಯಾಗಿದೆ."

ಇದು ಪ್ರಾಕೃತಿಕ ಸಂಪನ್ಮೂಲಗಳನ್ನು ಬಳಸುವಾಗ ಸಾಮಾಜಿಕ ನೀತಿಯನ್ನು ಖಾತರಿಪಡಿಸುವ ದೃಷ್ಟಿಕೋನವಾಗಿದೆ.

ಪ್ರಾಕೃತಿಕ ಸಂಪನ್ಮೂಲಗಳು ಒಂದು ತಲೆಮಾರಿಗೆ ಮಾತ್ರ ಅನುಭವಿಸಲು ಇರುವುದಲ್ಲ.

ಮುಂದಿನ ತಲೆಮಾರಿಗೂ ಕೂಡ ಅವಕಾಶವಿರುವುದಾಗಿದೆ ಎಂಬ ದೃಷ್ಟಿಕೋನವು ಪ್ರಗತಿಶೀಲ ಅಭಿವೃದ್ಧಿಯ ತಿರುಳಾಗಿದೆ. ಪ್ರಗತಿಶೀಲ ಅಭಿವೃದ್ಧಿಗೆ ಮೂರು ಮುಖ್ಯ ಉದ್ದೇಶಗಳಿವೆ.

- ಪರಿಸರ ಉದ್ದೇಶಗಳು
- ಆರ್ಥಿಕ ಉದ್ದೇಶಗಳು
- ಸಾಮಾಜಿಕ ಉದ್ದೇಶಗಳು

ನಿಮ್ಮ ಸುತ್ತಮುತ್ತಲಿನ ಪ್ರಕೃತಿಯನ್ನು ಗಮನಿಸಿರಿ. ಪ್ರಗತಿಶೀಲ ಅಭಿವೃದ್ಧಿಗೆ ಮಾರಕವಾಗುವ ಘಟನೆಗಳು ಯಾವುವೆಂದು ಕಂಡುಹಿಡಿಯಿರಿ. ಕೆಳಗೆ ನೀಡಿರುವ ಪಟ್ಟಿಯನ್ನು ವಿಸ್ತರಿಸಿರಿ.

- ಅವೈಜ್ಞಾನಿಕ ರೀತಿಯಲ್ಲಿ ಬಯಲನ್ನು ಮಣ್ಣಿನಿಂದ ತುಂಬಿಸುವಿಕೆ.
- ಅನಿಯಂತ್ರಿತವಾಗಿ ರಾಸಾಯನಿಕ ಕೀಟನಾಶಕಗಳ ಪ್ರಯೋಗ.
- ಶುದ್ಧಜಲ ಮಲಿನೀಕರಣ ಮತ್ತು ಪೋಲುಮಾಡುವುದು.
- 
- 

ಮೇಲೆ ಸೂಚಿಸಿದ ಕ್ರಮಗಳು ಪ್ರಗತಿಶೀಲ ಅಭಿವೃದ್ಧಿಗೆ ಅಡ್ಡಿಯಾಗುತ್ತವೆ. ಪ್ರಾಕೃತಿಕ ಸಂಪನ್ಮೂಲಗಳು ಮುಂದಿನ ತಲೆಮಾರಿಗೂ ಲಭಿಸುವ ರೀತಿಯಲ್ಲಿ ಆರ್ಥಿಕ ಅಭಿವೃದ್ಧಿ, ಪ್ರಗತಿಶೀಲ ಅಭಿವೃದ್ಧಿ ಎಂಬವುಗಳನ್ನು ಕಾರ್ಯಗತಗೊಳಿಸಲು ಅಗತ್ಯವಾದ ಸಲಹೆಗಳನ್ನು ಮುಂದಿರಿಸುವಿರಾ?

- ಮಳೆನೀರನ್ನು ಸಂಗ್ರಹಿಸುವುದು.
- 
- 
- 



## ಪ್ರಧಾನ ಕಲಿಕಾ ಸಾಧನೆಗಳಲ್ಲಿ ಒಳಪಡುವವುಗಳು

- ಆರ್ಥಿಕ ಬೆಳವಣಿಗೆ ಮತ್ತು ಅಭಿವೃದ್ಧಿಯ ವಿಶೇಷತೆಗಳನ್ನು ಮಂಡಿಸುವರು.
- ಅಭಿವೃದ್ಧಿ ಸೂಚ್ಯಂಕಗಳ ಫ್ಲೋಚಾರ್ಟ್ ತಯಾರಿಸಿ ಮಂಡಿಸುವರು.
- ಭೌತಿಕ ಜೀವನ ಗುಣಮಟ್ಟ ಸೂಚ್ಯಂಕದ ವಿಶೇಷತೆಗಳನ್ನು ಮಂಡಿಸುವರು.
- ಮಾನವ ಅಭಿವೃದ್ಧಿ ಸೂಚ್ಯಂಕದ ವಿಶೇಷತೆಗಳನ್ನು ಕಂಡುಹಿಡಿದು ಮಂಡಿಸುವರು.
- ಅಭಿವೃದ್ಧಿಯು ಎದುರಿಸುವ ಸವಾಲುಗಳ ಪಟ್ಟಿ ತಯಾರಿಸಿ ಮಂಡಿಸುವರು
- ಪ್ರಗತಿಶೀಲ ಅಭಿವೃದ್ಧಿಯ ಪ್ರಾಧಾನ್ಯವನ್ನು ವಿಶದೀಕರಿಸುವರು.



## ಮೌಲ್ಯನಿರ್ಣಯ ಮಾಡುವ

- ಆರ್ಥಿಕ ಬೆಳವಣಿಗೆ ಮತ್ತು ಅಭಿವೃದ್ಧಿಗಳೊಳಗಿರುವ ವ್ಯತ್ಯಾಸಗಳನ್ನು ಬರೆಯಿರಿ.
- ಆರ್ಥಿಕ ಬೆಳವಣಿಗೆಯ ಸೂಚ್ಯಂಕ ಎಂಬ ನೆಲೆಯಲ್ಲಿ ತಲಾ ಆದಾಯದ ಕೊರತೆಗಳನ್ನು ವಿಶದೀಕರಿಸಿರಿ.
- ಮಾನವ ಅಭಿವೃದ್ಧಿ ಸೂಚ್ಯಂಕವನ್ನು ನಿರ್ಣಯಿಸುವಲ್ಲಿ ಪರಿಗಣಿಸುವ ಘಟಕಗಳನ್ನು ಬರೆಯಿರಿ.
- ಪ್ರಗತಿಶೀಲ ಅಭಿವೃದ್ಧಿ ಎಂದರೇನು? ಪ್ರಗತಿಶೀಲ ಅಭಿವೃದ್ಧಿಯನ್ನು ಕಾರ್ಯಗತಗೊಳಿಸಲು ಅಗತ್ಯವಾದ ಸೂಚನೆಗಳನ್ನು ಬರೆಯಿರಿ.
- ಆಧುನಿಕ ಅಭಿವೃದ್ಧಿ ಪ್ರಕ್ರಿಯೆಯು ಎದುರಿಸುವ ಸವಾಲುಗಳನ್ನು ವಿಶದೀಕರಿಸಿರಿ.



## ಮುಂದುವರಿದ ಚಟುವಟಿಕೆಗಳು

- ಭಾರತದ ಪ್ರಗತಿಶೀಲ ಅಭಿವೃದ್ಧಿಗೆ ತಡೆಯಾಗಿ ನಿಲ್ಲುವ ಚಟುವಟಿಕೆಗಳನ್ನು ಪತ್ರಿಕಾ ಮಾಧ್ಯಮಗಳು ಅಂತರ್ಜಾಲ (ಇಂಟರ್‌ನೆಟ್) ಎಂಬಿವುಗಳ ಸಹಾಯದಿಂದ ಕಂಡುಹಿಡಿದು ವರದಿ ತಯಾರಿಸಿರಿ.
- ನಿಮ್ಮ ಪ್ರದೇಶದ ಆರ್ಥಿಕ ಅಭಿವೃದ್ಧಿಗೆ ತಡೆಯೊಡ್ಡುವ ಘಟಕಗಳನ್ನು ಕಂಡುಹಿಡಿದು ಪರಿಹಾರೋಪಾಯಗಳನ್ನು ಸೂಚಿಸಿರಿ.
- ಮಾನವ ಅಭಿವೃದ್ಧಿ ಸೂಚ್ಯಂಕಕ್ಕೆ ಸಂಬಂಧಿಸಿದ ಅನೇಕ ವಿಚಾರಗಳನ್ನು ಪತ್ರಿಕೆಗಳು, ಅಂತರ್ಜಾಲ ಮುಂತಾದುವುಗಳಲ್ಲಿ ನೀವು ಗಮನಿಸಿರಬಹುದು. ಲಭ್ಯವಾದ ಮಾಹಿತಿಗಳನ್ನು ಉಪಯೋಗಿಸಿ ಭಾರತದ ಮಾನವ ಅಭಿವೃದ್ಧಿ ಸೂಚ್ಯಂಕ ದರ, ವಿವಿಧ ವರ್ಷಗಳಲ್ಲಿ ಪಡೆದ ಸ್ಥಾನ, ಕಳೆದ ಐದು ವರ್ಷಗಳಲ್ಲಿ ಉಂಟಾದ ಬದಲಾವಣೆಗಳು ಎಂಬಿವುಗಳನ್ನು ಸಂಗ್ರಹಿಸಿರಿ.



7

# ಸುರಕ್ಷಿತವಾದ ಭವಿಷ್ಯಕ್ಕಾಗಿ

'ಎಂಥ ಮಳೆ! ಸಂಜೆ ಆರಂಭವಾದ ಈ ಮಳೆ ಬೆಳಗ್ಗಿನವರೆಗೂ ಸುರಿಯುತ್ತಲೇ ಇತ್ತು. ಕಾರ್ಮೋಡಗಳು, ಗುಂಪು ಗುಂಪಾಗಿ ಆಕಾಶದಲ್ಲಿ ಒತ್ತೊತ್ತಾಗಿ ಚಲಿಸಿದುವು. ಗುಡ್ಡ ಮತ್ತು ವನಗಳಲ್ಲಿ ಕಗ್ಗತ್ತಲು ಕವಿಯಿತು.'

ಬ್ರಹ್ಮಗಿರಿಯ ತುತ್ತತುದಿಯಲ್ಲಿ ಕಾವಲುಗಾರರಂತಿದ್ದ ವಿರಳವಾದ ಮರಗಳು ರಾಕ್ಷಸಾಕಾರ ತಾಳಿದಂತೆ ಕಂಡು ಬಂದವು. ಗಾಳಿಯು ಬಂಧವಿಮುಕ್ತವಾಯಿತು. ಅವು ಕಾರ್ಮೋಡವನ್ನು ಹೊಡೆದೋಡಿಸಿ ಚದುರಿಸಿದ್ದುವು. ಬೀಸಿ ಎಸೆಯಲ್ಪಟ್ಟ ಹರಳುಕಲ್ಲುಗಳಂತೆ ಮಂಜಿನ ತುಂಡುಗಳು ಎಸೆಯಲ್ಪಟ್ಟವು.

ಹೂಬಿಟ್ಟ ಸೌತೆ, ಚೀನಿ, ಕುಂಬಳ ಬಳ್ಳಿಗಳು ನಾಶವಾದುವು....

ಇದು ವಯನಾಡಿನ ಸ್ಥಿತಿಯಾಗಿದೆ. ತರಕಾರಿಗಳು ಬೆಳೆಯಲಾರಂಭಿಸಿದಾಗ ಮಳೆಯ ಆರಂಭ! ಆಲಿಕಲ್ಲು ಬಿದ್ದು ಸರ್ವನಾಶ. ಅಲ್ಲದಿದ್ದರೆ ಬಲವಾದ ಗಾಳಿ! ಯಾವುದೂ ಉಳಿಯದು.

ಕಾಡುಗಳೆಡೆಯಿಂದ ಹರಿಯುವ ಕೆಸರು ನೀರು ಮಳೆಗಾಲದ ಆರಂಭದಲ್ಲಿ ಹಿತ್ತಲು ಬಯಲುಗಳ ಮೂಲಕ ಹರಿದು, ಬಾವಲಿ ಎಂಬ ಸ್ಥಳವನ್ನು ಹಾದು ಮುಂದಕ್ಕೆ ಸಾಗುತ್ತದೆ.'

**ನೆಲ್ಲ್, ಪಿ. ವತ್ಸಲ**

ಇದು ವಯನಾಡಿನ ಪರಿಸರದ ಕುರಿತು ಪ್ರಸಿದ್ಧ ಕಾದಂಬರಿಕಾರರಾದ ಪಿ. ವತ್ಸಲ ನೀಡಿರುವ ವಿವರಣೆಯಾಗಿದೆ.

ಹೊಸ ಮಣ್ಣನ್ನು ಹುಡುಕಿಕೊಂಡು ಹೋದ ಹಿಂದಿನ ತಲೆಮಾರಿನ ಶ್ರಮದ ಹಾಗೂ ತ್ಯಾಗದ ಕಥೆಗಳನ್ನು ಹೇಳುವ ಕಾಸರಗೋಡಿನ ಪೂರ್ವದ ಪ್ರದೇಶಗಳಾದ ಎಲ್ಲುಕೊಚ್ಚಿ, ರಾಜಪುರ, ರಾಣಿಪುರ, ಕಣ್ಣೂರಿನ ಗುಡ್ಡಪ್ರದೇಶಗಳಾದ ಇರಿಟ್ಟಿ, ಪೆರಾವೂರ್, ಆರಳಂ ಮತ್ತು ಇಡುಕ್ಕಿಯ ಕಟ್ಟಪ್ಪನ, ನೆಡುಂಕಂಡಂ, ಉಡುಂಬಚೇಲ ಮೊದಲಾದೆಡೆಗಳಲ್ಲಿ ಸಾಧಾರಣ ಒಂದೇ ರೀತಿಯ ಶೈತ್ಯ ಹಾಗೂ ಮಂಜು ಮುಸುಕಿದ ಹವಾಮಾನವಿದೆ. ಈ ವಲಯದಲ್ಲಿ ಚಾಸೊಪ್ಪು ಮತ್ತು ಸಾಂಬಾರ ಪದಾರ್ಥಗಳನ್ನು ವ್ಯಾಪಕವಾಗಿ ಕೃಷಿ ಮಾಡುತ್ತಾರೆ.

ಹವಾಮಾನ, ಭೂಪ್ರಕೃತಿ, ಮಣ್ಣು, ಕೃಷಿ, ಸಸ್ಯಜೀವಜಾಲ ಮೊದಲಾದವು ಮಾತ್ರವಲ್ಲ ಮನುಷ್ಯನೂ ಪರಿಸರದ ಭಾಗವಾಗಿದ್ದಾನೆ.

ಪರಿಸರವು ಪ್ರಕೃತಿಯ ಜೈವಿಕ ಮತ್ತು ಅಜೈವಿಕವಾದ ಎಲ್ಲಾ ಘಟಕಗಳನ್ನೂ ಒಳಗೊಂಡಿದೆ ಎಂಬುದನ್ನು ನೀವು ಹಿಂದಿನ ತರಗತಿಗಳಲ್ಲಿ ಕಲಿತಿರುವಿರಿ.

ಮೇಲೆ ಹೇಳಿರುವ ಪ್ರದೇಶಗಳ ಜನಜೀವನದಲ್ಲಿ ಪರಿಸರವು ಯಾವ ರೀತಿಯ ಪ್ರಭಾವವನ್ನು ಬೀರಿದೆ?

- ಶೈತ್ಯ ಹವಾಮಾನವು ಅನುಭವಕ್ಕೆ ಬರುತ್ತದೆ.
- ಯಾವೆಲ್ಲ ಬೆಳೆಗಳನ್ನು ಕೃಷಿ ಮಾಡಬಹುದೆಂದು ನಿಶ್ಚೈಸುವುದು.

ಕಾಡುಮೇಡುಗಳಲ್ಲಿ ವನ್ಯಜೀವಿಗಳ ಆಕ್ರಮಣ ಹಾಗೂ ಮಲೇರಿಯಾ ಮೊದಲಾದ ರೋಗಗಳನ್ನು ಎದುರಿಸಿ ಮಣ್ಣಿನಲ್ಲಿ ಬಂಗಾರ ಬೆಳೆಸಿದ ಜನ ಸಮೂಹವೊಂದರ ಕಥೆಯು ನಮ್ಮಲ್ಲಿ ಸ್ಫೂರ್ತಿಯನ್ನುಂಟುಮಾಡುತ್ತದೆ. ಮನುಷ್ಯನು ಪರಿಸರದೊಂದಿಗೆ ಹೊಂದಿಕೊಂಡು ಜೀವಿಸುವುದಕ್ಕಾಗಿ ತನ್ನ ಸುತ್ತುಮುತ್ತಲು ನಡೆಸಿದ ಚಟುವಟಿಕೆಗಳು ಯಾವುವು?

- ದುರ್ಗಮವಾದ ಭೂಪ್ರಕೃತಿಯಲ್ಲಿ ರಸ್ತೆಗಳನ್ನು ನಿರ್ಮಿಸಿದನು.
- ಗುಡ್ಡದ ಇಳಿಜಾರನ್ನು ಸಮತಟ್ಟು ಮಾಡಿ ಕೃಷಿಮಾಡಿದನು.
- ಸಾಧ್ಯವಿರುವಲ್ಲಿ ಮನೆಗಳನ್ನು ನಿರ್ಮಿಸಿದನು.



## ಪರಿಸರದ ವೈವಿಧ್ಯಗಳು

ಭೂಮಿಯ ಎಲ್ಲಾ ಕಡೆಯಲ್ಲಿಯೂ ಪರಿಸರವು ಒಂದೇ ರೀತಿಯಾಗಿದೆಯೆ? ಕೆಳಗೆ ಕೊಟ್ಟಿರುವ ಚಿತ್ರಗಳನ್ನು ಪರಿಶೀಲಿಸಿರಿ.

ದೂಳೆಬ್ಬಿಸಿತ್ತಾ ನಿರಂತರವಾಗಿ ಬೀಸುವ ಮರುಭೂಮಿಗಳ ಹೊಗೆ ಗಾಳಿಯಲ್ಲಿ ಜನಜೀವನ ಹೇಗಿರಬಹುದು? ಅರೇಬಿಯನ್ ಮರುಭೂಮಿಗಳ ಜನರು ವಸ್ತ್ರ ಧರಿಸುವ ರೀತಿಗೆ ಆ ಪ್ರದೇಶದ ಹವಾಮಾನದೊಂದಿಗೆ ತುಂಬಾ ಸಂಬಂಧವಿದೆ. ನೀರಿನ ಲಭ್ಯತೆ ಕಡಿಮೆಯಾಗಿರುವುದರಿಂದ ಇಲ್ಲಿ ಕೃಷಿ ಕಡಿಮೆ. ಆದರೂ ಇಲ್ಲಿ ಇಂದು ಜನಸಾಂದ್ರತೆ ಹೆಚ್ಚು. ಧಾರಾಳವಾದ ಪೆಟ್ರೋಲಿಯಂ ನಿಕ್ಷೇಪಗಳಿರುವುದು ಇದಕ್ಕೆ ಕಾರಣ.



ಚಿತ್ರ 7.1

ಸಮುದ್ರ ಮಟ್ಟದಿಂದ ಕೆಳಗಿರುವ ಪ್ರದೇಶಗಳ ಕುರಿತು ಕೇಳಿದ್ದೀರಾ? ನಮ್ಮ ಕುಟ್ಟನಾಡು (ಚಿತ್ರ 7.2) ಇದಕ್ಕೆ ಉದಾಹರಣೆಯಾಗಿದೆ. ಕುಟ್ಟನಾಡಿನ ಹಾಗಿರುವ ಭೂಪ್ರಕೃತಿಯು ಜಗತ್ತಿನಲ್ಲೇ ಅತ್ಯಪೂರ್ವವಾಗಿದೆ. ಹಿನ್ನೀರುಗಳು ಮತ್ತು ಇತರ ಜಲಾಶಯಗಳ ಮಧ್ಯದಲ್ಲಿ ಜೀವಿಸುವ ಇಲ್ಲಿನ ಜನರು ಅತ್ಯಂತ ಶ್ರಮದಿಂದ ಕೆಸರನ್ನು ಬಾಚಿ ತೆಗೆದು ಎತ್ತರಿಸಿ ನೆಲಭಾಗಗಳನ್ನು ನಿರ್ಮಿಸಿದ್ದಾರೆ. ಭತ್ತ, ತೆಂಗು ಕೃಷಿಗಳು ಹಾಗೂ ಬಾತುಕೋಳಿ ಸಾಕಣೆಗಳಿಂದ ಒಂದು ವಿಶೇಷ ಜೀವನಕ್ರಮವನ್ನು ಇಲ್ಲಿನ ಜನರು ಸ್ವೀಕರಿಸಿದ್ದಾರೆ. ಇಲ್ಲಿನ ಭೌಗೋಳಿಕ ಸನ್ನಿವೇಶಗಳೊಂದಿಗೆ ಹೊಂದಿಕೊಂಡ ಇವರ ಜೀವನದಲ್ಲಿ ಇಂದು ಪ್ರವಾಸೋದ್ಯಮಕ್ಕೆ ಪ್ರಾಧಾನ್ಯ ಲಭಿಸಿದೆ.



ಚಿತ್ರ 7.2



ಚಿತ್ರ 7.3

ಮಂಜಿನಿಂದಾವೃತವಾದ ಸೈಬೀರಿಯದ (ಚಿತ್ರ 7.3) ಚಿತ್ರವನ್ನು ಗಮನಿಸಿರಿ. ಮಿತವಾದ ಸಂಪನ್ಮೂಲಗಳು, ಕಠಿಣವಾದ ಹವಾಮಾನ ಇಲ್ಲಿ ಜನಜೀವನಕ್ಕೆ ಅಡ್ಡಿಯಾಗಿದೆ. ಆದರೆ ಅಲ್ಲಿಯೂ ಜನರು ವಾಸಿಸುತ್ತಾರೆ. ಪ್ರತಿಯೊಂದು ಪ್ರದೇಶದ ಸನ್ನಿವೇಶಕ್ಕನುಸರಿಸಿ ಮನುಷ್ಯನು ತನ್ನ ಜೀವನ ವಿಧಾನವನ್ನು ರೂಪಿಸಿಕೊಳ್ಳುತ್ತಾನೆಂದು ಈ ಉದಾಹರಣೆಗಳಿಂದ ನಿಮಗೆ ಅರ್ಥವಾಗಿರಬಹುದು.

ಆದರೆ ಅಪರಿಮಿತವಾದ ಸಂಪತ್ತಿನ ಶೋಷಣೆ ಹಾಗೂ ಅವೈಜ್ಞಾನಿಕವಾದ ಹಸ್ತಕ್ಷೇಪವು ಪ್ರಾಕೃತಿಕ ಅಸಮತೋಲನಕ್ಕೆ ಕಾರಣವಾಗಬಹುದು.



*ಮೇಲೆ ಹೇಳಿದ ಪರಿಸರದ ವಿವಿಧ ಉಪಯೋಗಗಳಿಗೆ ಸಂಬಂಧಿಸಿದ ಕೆಲವು ಪ್ರಶ್ನೆಗಳನ್ನು ಕೆಳಗೆ ಕೊಡಲಾಗಿದೆ. ಇದಕ್ಕೆ ಸಂಬಂಧಿಸಿ ನಿಮ್ಮ ನಿಗಮನಗಳನ್ನು ದಾಖಲಿಸಿರಿ. ಅಪರಿಮಿತ ಶೋಷಣೆಯಿಂದ ಅರೇಬಿಯನ್ ವಲಯದ ಪೆಟ್ರೋಲಿಯಂ ಮುಗಿದುಹೋದರೆ?*

*ಕುಟ್ಟನಾಡು ಪರಿಸರದ ಸೂಕ್ಷ್ಮವಾದ ಸಮತೋಲನವು ಅಪರಿಮಿತವಾದ ಮಲಿನೀಕರಣದಿಂದ ಇಂದು ಅವನತಿಯ ಹಂತದಲ್ಲಿದೆ. ಇದರಿಂದ ಏನೆಲ್ಲ ತೊಂದರೆಗಳುಂಟಾಗಬಹುದು?*

*ಸೈಬೀರಿಯಾ ವಲಯದಲ್ಲಿ ಜೀವನಕ್ಕಾಗಿ ಜನರು ಸ್ವೀಕರಿಸಿದ ಮಾರ್ಗಗಳು ಯಾವುವು?*

## ಪರಿಸರ ಸಂರಕ್ಷಣೆ ಏನು? ಯಾಕೆ?

ಭೂಮಿಯಲ್ಲಿನ ಅನೇಕ ಜೀವಜಾಲಗಳಲ್ಲಿ ಮನುಷ್ಯನೂ ಒಬ್ಬನಾಗಿದ್ದಾನೆ. ತನ್ನ ಅಸ್ತಿತ್ವಕ್ಕಾಗಿ ಇತರ ಜೀವಜಾಲಗಳನ್ನು ಇಷ್ಟು ಆಶ್ರಯಿಸುವ ಬೇರೊಂದು ಜೀವಿಯೂ ಭೂಮಿಯಲ್ಲಿಲ್ಲ. ಪ್ರಕೃತಿಯಲ್ಲಿರುವ ಸಸ್ಯಜೀವಜಾಲಗಳು ನಮಗೆ ಆಹಾರ, ವಸ್ತ್ರ, ವಸತಿ, ಔಷಧ, ಇಂಧನ ಎಂಬಿವುಗಳನ್ನು ನೀಡುತ್ತವೆ. ಜೀವಿಗಳ ಅಸ್ತಿತ್ವಕ್ಕೆ ಗಾಳಿ, ನೀರು ಎಂಬಿವುಗಳ ಹಾಗೆ ಮಣ್ಣು ಕೂಡ ಪ್ರಧಾನವಾದುದಾಗಿದೆ. ಆವಾಸ ವ್ಯವಸ್ಥೆ, ಆಹಾರ ಸಂಕೋಲೆ ಎಂಬಿವುಗಳ ಕುರಿತು ನೀವು ತಿಳಿದುಕೊಂಡಿದ್ದೀರಿ. ನಿರಂತರವಾಗಿ ನಡೆಯುವ ಪ್ರಕೃತಿಯ ವಿಕಾಸ ಪ್ರಕ್ರಿಯೆಯಲ್ಲಿ ಮನುಷ್ಯನು ಕೊನೆಯ ಕೊಂಡಿಯಾಗಿದ್ದಾನೆ. ತನ್ನ ಅಸ್ತಿತ್ವಕ್ಕೆ ಮಾತ್ರ ಪ್ರಾಧಾನ್ಯವನ್ನೀಯುವ ಮನುಷ್ಯನು ಪ್ರಕೃತಿಯಲ್ಲಿ ನಡೆಸುವ ಶೋಷಣೆಯಿಂದ ದುಷ್ಪರಿಣಾಮಗಳುಂಟಾಗುತ್ತವೆ. ಪ್ರಕೃತಿಯ ಸಮತೋಲನಕ್ಕೆ ಕೆಡುಕು ಉಂಟಾಗದಂತೆ ಪ್ರಕೃತಿಯೊಂದಿಗೆ ವ್ಯವಹರಿಸಬೇಕೆಂಬುದು ಪರಿಸರ ಸಂರಕ್ಷಣೆಯ ಪ್ರಧಾನ ಉದ್ದೇಶವಾಗಿದೆ. ಮಾನವರಾಶಿಯು ಮಾತ್ರವಲ್ಲ ಸಕಲ ಜೀವಜಾಲಗಳ ಆರೋಗ್ಯಪೂರ್ಣವಾದ ಅಸ್ತಿತ್ವಕ್ಕೆ ಪರಿಸರ ಮತ್ತು ಅದರ ವೈವಿಧ್ಯವನ್ನು ಸಂರಕ್ಷಿಸಲೇಬೇಕು.




### ಹೊಡೆತ ಮತ್ತು ಸಾಂತ್ವನ

ವಿಸ್ಮಯಕರವಾದ ಋತುಭೇದಗಳ ಜೈತ್ರಯಾತ್ರೆ. ಗುಡುಗು, ಮಿಂಚುಗಳೊಂದಿಗೆ ಮಳೆಗಾಲ, ಕೆಲವು ಸ್ಥಳಗಳಲ್ಲಿ ಹಿಮಪಾತ..... ಎಡೆಬಿಡದೆ ಗಾಳಿ ಬೀಸುವ ಸ್ಥಳಗಳು – ತಂಗಾಳಿಯಿಂದ ಮೊದಲ್ಗೊಂಡು ಎಲ್ಲವನ್ನೂ ಧೂಳೀಪಟಗೊಳಿಸುವ ಸುಳಿಗಾಳಿಯ ವರೆಗೆ. ಮಲೆನಾಡುಗಳಲ್ಲಿ ಮಳೆಗಾಲದಲ್ಲಿ ಭೂಕುಸಿತ ಉಂಟಾಗುತ್ತದೆ. ತಗ್ಗು ಪ್ರದೇಶಗಳಲ್ಲಿ ನೆರೆ. ಪ್ರಾಕೃತಿಕ ವಿಕೋಪಗಳು ಕೆಲವೊಮ್ಮೆ ವಿನಾಶಕಾರಿಯಾಗಿರುತ್ತವೆ.

ಜೀವಕ್ಕೆ, ಸೊತ್ತಿಗೆ, ಪರಿಸರಕ್ಕೆ ಅಪಾಯಕಾರಿಯಾಗುವ ಪ್ರಾಕೃತಿಕ ವಿದ್ಯಮಾನಗಳನ್ನು ಪ್ರಾಕೃತಿಕ ವಿಕೋಪ ಎಂದು ಕರೆಯುತ್ತಾರೆ (Natural hazards)..
ಕೆಲವು ಪ್ರಾಕೃತಿಕ ವಿದ್ಯಮಾನಗಳ ಹೆಸರನ್ನು ಬೋರ್ಡಿನಲ್ಲಿ ಕೊಡಲಾಗಿದೆ. ಇವುಗಳಲ್ಲಿ ಪ್ರಾಕೃತಿಕ ವಿಕೋಪಗಳು ಯಾವುವೆಲ್ಲ ಎಂದು ಕಂಡುಹಿಡಿಯಿರಿ.

### ಪ್ರಾಕೃತಿಕ ವಿಕೋಪಗಳು ದುರಂತಗಳಾಗುವಾಗ


ಚಿತ್ರ (7.4)ವನ್ನು ನಿರೀಕ್ಷಿಸಿರಿ.

ಬಿರುಸಾದ ಮಳೆಗೆ ಭೂಕುಸಿತ ಸಾಧ್ಯತೆಯಿರುವ ಎರಡು ಪ್ರದೇಶಗಳನ್ನು ನೀವು ಕಾಣುತ್ತೀರಿ. ಭೂಕುಸಿತ ಉಂಟಾದರೆ ಇವುಗಳಲ್ಲಿ ಯಾವ ಪ್ರದೇಶದಲ್ಲಿ ಅದು ದುರಂತವಾಗಿ ಬದಲಾಗಲು ಸಾಧ್ಯತೆಯಿದೆ? ಯಾಕೆ?

ಪ್ರಾಕೃತಿಕ ವಿಕೋಪಗಳು ಹೆಚ್ಚಿನ ಸಂದರ್ಭಗಳಲ್ಲಿ ಮನುಷ್ಯರನ್ನು ಭಾಧಿಸುವುದಿಲ್ಲ. ಮನುಷ್ಯನು ಅಪಾಯಕಾರಿಯಾಗಿ ಬದಲಾಗುವಾಗ ಅವು ದುರಂತಗಳಾಗಿ ಬದಲಾಗುತ್ತವೆ.

ಅಂಟಾರ್ಟಿಕಾದಲ್ಲಿ ಒಂದು ಮಂಜಿನಗುಡ್ಡೆ ಕುಸಿದರೆ, ಜನವಾಸವಿಲ್ಲದ ಮರುಭೂಮಿಯಲ್ಲಿ ಭೂಕಂಪವುಂಟಾದರೆ ಅದು ಎಷ್ಟು ಕಠಿಣವಾಗಿದ್ದರೂ ಅದನ್ನು ದುರಂತವಾಗಿ ಪರಿಗಣಿಸುವುದಿಲ್ಲ. ಆದರೆ ಜನನಿಬಿಡವಾದ ತಗ್ಗು ಪ್ರದೇಶದಲ್ಲಿ ಅಂತಹ ಒಂದು ದುರ್ಘಟನೆ ಉಂಟಾದರೆ ಅದನ್ನು ದುರಂತ ಎಂದು ಪರಿಗಣಿಸಲಾಗುತ್ತದೆ.

ಪ್ರಕೃತಿದತ್ತವಾದ ಕಾರಣಗಳಿಂದ ಉಂಟಾಗುವ ದುರಂತಗಳೇ ಪ್ರಾಕೃತಿಕ ದುರಂತಗಳಾಗಿವೆ (Natural disasters).




ಚಿತ್ರ 7.4

### ಭಾರತದ ಪ್ರಾಕೃತಿಕ ದುರಂತಗಳು

ಭಾರತದಲ್ಲಿ ಎಲ್ಲ ವರ್ಷವೂ ಅನೇಕ ಜನರು ಪ್ರಾಕೃತಿಕ ದುರಂತಗಳಲ್ಲಿ ಸಿಲುಕಿ ಮರಣಹೊಂದುವುದು ಅಥವಾ ಗಂಭೀರವಾಗಿ ಗಾಯಗೊಳ್ಳುವುದನ್ನು ವರದಿಗಳು ತಿಳಿಸುತ್ತವೆ.

ಭಾರತದಲ್ಲಿ ಕಂಡುಬರುವ ಪ್ರಾಕೃತಿಕ ದುರಂತಗಳ ತಖ್ತೆಯನ್ನು ಕೆಳಗೆ ಕೊಡಲಾಗಿದೆ.

| | |
|---|---|
| ♦ ಸುಳಿಗಾಳಿ | ♦ ಗುಡುಗು ಮಿಂಚು |
| ♦ ಭೂಕಂಪ | ♦ ಸುನಾಮಿ |
| ♦ ಭೂಕುಸಿತ | ♦ ನೆರೆ |
| ♦ ಆಲಿಕಲ್ಲು ಮಳೆ | ♦ ಹಿಮಪಾತ |
| ♦ ಬರಗಾಲ | ♦ ಹಿಮಾಘಾತ |
| ♦ | |

ಆಕರ: ಭಾರತ ಸರಕಾರದ ಗೃಹಸಚಿವಾಲಯ

## ಕೇರಳದಲ್ಲಿ ಪ್ರಾಕೃತಿಕ ದುರಂತ ಸಾಧ್ಯತೆಗಳು

ಕೇರಳದ ಭೂಪ್ರಕೃತಿಯ ಕುರಿತು ಹಿಂದಿನ ತರಗತಿಗಳಲ್ಲಿ ಕಲಿತಿರುವುದು ನೆನಪಿದೆಯಲ್ಲವೇ. ಬಾಗಿ ನಿಂತಿರುವ ತೆಂಗಿನ ಮರಗಳು, ತೀರದಲ್ಲಿರುವ ವಿಶಾಲವಾದ ಹಿನ್ನೀರು..., ನಡುನಾಡಿನ ಸಮೃದ್ಧವಾದ ಹಸಿರು..., ಸ್ವಲ್ಪ ಪೂರ್ವಕ್ಕೆ ಸಾಗಿದಾಗ ಮಿತವಾದ ಶೈತ್ಯದ ಹವಾಮಾನವಿರುವ ಮಲೆನಾಡುಗಳು. ಕೇರಳದ ಈ ಪ್ರಕೃತಿ ಸೌಂದರ್ಯವು ಲೋಕಪ್ರಸಿದ್ಧವಾಗಿದೆ. ಆದರೆ ಪ್ರಕೃತಿಯ ಈ ಸೊಬಗು ಕೆಲವೊಮ್ಮೆ ರೌದ್ರವಾಗುವುದಿದೆ. ಆಗ ನಾಶನಷ್ಟಗಳುಂಟಾಗುತ್ತವೆ. ಕೇರಳವು ಪ್ರಾಕೃತಿಕ ದುರಂತಗಳುಂಟಾಗಲು ಸಾಧ್ಯತೆಯಿರುವ ಪ್ರಾಂತ್ಯವಾಗಿದೆ.



*ಕೇರಳದಲ್ಲಿ ವ್ಯಾಪಕವಾಗಿ ನಾಶವನ್ನುಂಟುಮಾಡುವ ಪ್ರಾಕೃತಿಕ ದುರಂತಗಳಾವುವು ಎಂಬುದನ್ನು ಅನ್ವೇಷಣೆಗಳ ಮೂಲಕ ಕಂಡುಕೊಳ್ಳಿರಿ.*

- *ಕೇರಳದಲ್ಲಿ ಅತ್ಯಂತ ವ್ಯಾಪಕವಾಗಿ ಸಂಭವಿಸುವ ಪ್ರಾಕೃತಿಕ ದುರಂತ ಯಾವುದು?*
- *ಕೇರಳದಲ್ಲಿ ಭೂಕುಸಿತ ಅತಿ ಹೆಚ್ಚು ಅನುಭವಕ್ಕೆ ಬರುವುದು ಯಾವ ಭೂಸ್ವರೂಪದಲ್ಲಿ? ಯಾಕೆ? ಕೆಳಗೆ ಕೊಟ್ಟಿರುವ ಸೂಚನೆಗಳ ಆಧಾರದಲ್ಲಿ ತರಗತಿಯಲ್ಲಿ ಚರ್ಚಿಸಿ ನಿಗಮನಗಳನ್ನು ದಾಖಲಿಸಿ.*
  - *ಭೂಸ್ವರೂಪ*
  - *ಮಳೆ*

### ಭೂಕುಸಿತದಿಂದ ಉಂಟಾಗುವ ದುರಂತ



ಚಿತ್ರ 7.5

ಭೂಕುಸಿತವು ಕೇರಳದಲ್ಲಿ ಅತಿ ಹೆಚ್ಚು ಭೀತಿಯನ್ನುಂಟುಮಾಡುವ ದುರಂತವಾಗಿದೆ. ಮಳೆಮೋಡಗಳು ಕೇರಳದ ಮೇಲೆ ಕೇಂದ್ರೀಕೃತವಾಗುವುದರೊಂದಿಗೆ ಪೂರ್ವದ ಮಲೆನಾಡುಗಳ ಕೆಲವು ಪ್ರದೇಶಗಳು ಭೂಕುಸಿತದ ಭೀತಿಯ ನೆರಳು ಕವಿಯುತ್ತವೆ. ಈ ಕಾಲದಲ್ಲಿ ನಡುನಾಡಿನ ಕೆಲವು ಪ್ರದೇಶಗಳಲ್ಲೂ ಭೂಕುಸಿತ ಸಂಭವಿಸುತ್ತದೆ.

ಕೊಟ್ಟಿರುವ ಚಿತ್ರ (ಚಿತ್ರ 7.5) ಗಮನಿಸಿರಿ.

ಇದು ಇತ್ತೀಚೆಗೆ ಕಲ್ಲಿಕೋಟೆ ಜಿಲ್ಲೆಯ ಪುಲ್ಲೂರಾಂಪಾರ ಎಂಬಲ್ಲಿ ಉಂಟಾದ ಭೂಕುಸಿತದ ಚಿತ್ರವಾಗಿದೆ.

ಯಾವೆಲ್ಲ ಮಾಹಿತಿಗಳನ್ನು ಈ ಚಿತ್ರದಿಂದ ನಿಮಗೆ ತಿಳಿಯಲು ಸಾಧ್ಯವಿದೆ?

- 
- 

“ಎಲ್ಲರೂ ಗಾಢ ನಿದ್ರೆಯಲ್ಲಿದ್ದರು. ಕಿವಿಗಡಚಿಕ್ಕುವ ಗುಡುಗಿನ ಶಬ್ದಕೇಳಿ ಎದ್ದೆನು. ಆಗ ಎಲ್ಲಾ ಮುಗಿದಿತ್ತು. ನಾನು ಮತ್ತು ಮನೆಯ ಒಂದು ಗೋಡೆ ಬಿಟ್ಟು ಬೇರೇನೂ ಉಳಿದಿರಲಿಲ್ಲ... ಬಂಧು ಬಳಗ ಸೇರಿದಂತೆ ಎಲ್ಲರೂ ಪ್ರವಾಹದಲ್ಲಿ ಕೊಚ್ಚಿ ಹೋದರು. ಎಂದೆಂದಿಗೂ ಆಯಿತು....”

ಭೂಕುಸಿತದ ದುರಂತಕ್ಕೆ ಸಿಲುಕಿದ ಒಬ್ಬರ ಅನುಭವವನ್ನು ನೀವು ಓದಿದಿರಿ. ಎಲ್ಲ ಭೂಕುಸಿತಗಳಿಗೂ ಇದರಂತೆ ಎಷ್ಟೋ ಜನರ ದುರಂತಗಳನ್ನು ಹೇಳಲಿರಬಹುದು.

ತಿರುವನಂತಪುರ ಜಿಲ್ಲೆಯಲ್ಲಿ ಅಂಬೂರಿ ಎಂಬಲ್ಲಿ ಉಂಟಾದ ಭೂಕುಸಿತವು ವಿಸ್ತಾರವಾದ ಪ್ರದೇಶದಲ್ಲಾಗಿತ್ತು. ಕಲ್ಲಿಕೋಟೆ ಜಿಲ್ಲೆಯ ಪುಲ್ಲುರಾಂಪಾರದಲ್ಲಿ ಭೂಕುಸಿತ ಉಂಟಾಯಿತು. ಏಳು ಜನರು ಅಲ್ಲಿ ಮರಣಹೊಂದಿದರು. ಅಂಬೂರಿನಲ್ಲಿ 39 ಜನರು ಮರಣಹೊಂದಿದರು. ಗುಡ್ಡಪ್ರದೇಶದಲ್ಲಿರುವ ಜನಸಾಂದ್ರತೆಯು ಅಪಾಯದ ತೀವ್ರತೆಯನ್ನು ಹೆಚ್ಚಿಸುವ ಘಟಕವಾಗಿದೆ.




ಸಾಮಾನ್ಯವಾಗಿ 20 ಡಿಗ್ರಿಯಿಂದ ಹೆಚ್ಚು ಇಳಿಜಾರಿರುವ ಪ್ರದೇಶಗಳಲ್ಲಿ ಭೂಕುಸಿತದ ಸಾಧ್ಯತೆಯಿರುವುದಾಗಿ ಭೂಮಿಶಾಸ್ತ್ರ ಅಧ್ಯಯನ ಕೇಂದ್ರವು ಕಂಡುಕೊಂಡಿದೆ.

### ಭೂಕುಸಿತ ಎಂದರೇನು?

ಇಳಿಜಾರು ಹೆಚ್ಚಿರುವ ಪ್ರದೇಶಗಳಲ್ಲಿ ಕಡಿಮೆ ಸಮಯದೊಳಗೆ ಪ್ರಬಲವಾದ ಮಳೆ ಸುರಿಯುವಾಗ ತುಂಬ ನೀರು ಮಣ್ಣಿನಲ್ಲಿ ಆಳಕ್ಕಿಳಿಯುತ್ತದೆ. ಇದು ಮಣ್ಣಿನ ಕಣಗಳ ಮೇಲೆ ಅಧಿಕ ಒತ್ತಡವನ್ನು ಹೇರುತ್ತದೆ. ಅಲುಗಾಡುತ್ತಿರುವ ಬಂಡೆ ಮತ್ತು ಅದರ ಅಡಿಯಲ್ಲಿರುವ ಮಣ್ಣು ನೀರಿನ ತಳ್ಳುವಿಕೆಯಿಂದಾಗಿ ಕೆಳಕ್ಕೆ ಸಾಗಲು ಕಾರಣವಾಗುತ್ತದೆ. ಗುರುತ್ವಾಕರ್ಷಣ ಶಕ್ತಿಯ ಪರಿಣಾಮದಿಂದ ಆ ಭಾಗ ಸಂಪೂರ್ಣವಾಗಿ ಅಥವಾ ಭಾಗಿಕವಾಗಿ ದೊಡ್ಡ ಶಬ್ದದೊಂದಿಗೆ ಕುಸಿಯಲು ಇದು ಕಾರಣವಾಗುತ್ತದೆ. ಇದುವೇ ಭೂಕುಸಿತವಾಗಿದೆ. ಮಣ್ಣಿನಲ್ಲಿ ಸಂಗ್ರಹಗೊಂಡ ನೀರು ನಂತರ ಝರಿಗಳಾಗಿ ಹರಿಯುತ್ತದೆ. ನೀರಿನ ಈ ಹರಿಯುವಿಕೆಯು ಹೆಚ್ಚಿನ ಸಂದರ್ಭಗಳಲ್ಲಿ ಕೆಲವು ದಿನಗಳಲ್ಲಿ ಬತ್ತಿಹೋಗುತ್ತದೆ. ಆದರೆ ಕೆಲವು ಸಂದರ್ಭಗಳಲ್ಲಿ ಇದು ಶಾಶ್ವತವಾದ ನೀರಿನ ಒರತೆಯಾಗಿ ಬದಲಾಗುತ್ತದೆ. ಗುಡ್ಡಪ್ರದೇಶದ ನೀರಿನ ಒರತೆಗಳಲ್ಲಿ ಹಲವು ಹೀಗೆ ರೂಪುಗೊಂಡವುಗಳಾಗಿವೆ. ನೀರಿನ ನಿರಂತರ ಹರಿಯುವಿಕೆಯ ಪರಿಣಾಮವಾಗಿ ಉಂಟಾಗುವ ಕಣಿವೆಗಳು ಕಾಲಕ್ರಮೇಣ

KT-537-3/Soc. Sci. II-9 (K) Vol-2




ಚಿತ್ರ 7.6

ದೊಡ್ಡದಾಗುತ್ತವೆ. ಈ ರೀತಿಯಲ್ಲಿ ಭೂಪ್ರದೇಶಗಳ ವಿಕಾಸ ಪ್ರಕ್ರಿಯೆಯ ಭಾಗವಾಗಿ ನೀರಿನ ಹರಿಯುವಿಕೆ ರೂಪುಗೊಳ್ಳುವುದೆಂದು ವಿಜ್ಞಾನ ಜಗತ್ತು ಊಹಿಸುತ್ತದೆ.

ಕೆಲವೊಮ್ಮೆ ಪ್ರಕೃತಿಯಲ್ಲಿ ಮನುಷ್ಯನ ಅವೈಜ್ಞಾನಿಕವಾದ ಹಸ್ತಕ್ಷೇಪವು ಭೂಕುಸಿತಕ್ಕೆ ಕಾರಣವೆಂದು ಬೊಟ್ಟುಮಾಡುತ್ತಾರೆ. ಚಿತ್ರ 7.6 ನ್ನು ಗಮನಿಸಿರಿ.

ಐವತ್ತು ವರ್ಷದಿಂದ ಒಂದು ಪ್ರದೇಶದಲ್ಲುಂಟಾದ ಬದಲಾವಣೆಗಳನ್ನು ಈ ಚಿತ್ರಗಳು ಸ್ಪಷ್ಟಪಡಿಸುತ್ತವೆ.



*ಯಾವೆಲ್ಲ ಬದಲಾವಣೆಗಳನ್ನು ಈ ಪ್ರದೇಶದಲ್ಲಿ ನಿಮಗೆ ಕಂಡುಕೊಳ್ಳಲು ಸಾಧ್ಯವಾಯಿತು?*

- *ಜನಸಂಖ್ಯೆ ಹೆಚ್ಚಿತು.*
- 
- 

ಅರಣ್ಯನಾಶ, ಗುಡ್ಡೆಯ ಇಳಿಜಾರುಗಳಲ್ಲಿ ನಮ್ಮ ಅವೈಜ್ಞಾನಿಕವಾದ ಚಟುವಟಿಕೆಗಳು ಇಳಿಜಾರನ್ನು ದುರ್ಬಲಗೊಳಿಸುತ್ತವೆ. ಗುಡ್ಡಪ್ರದೇಶಗಳಲ್ಲಿ ನಡೆಸುವ ಅವೈಜ್ಞಾನಿಕ ಚಟುವಟಿಕೆಗಳು ಯಾವುವು?

- ಗುಡ್ಡದ ಬದಿಯಿಂದ ಮಣ್ಣು ಅಗೆಯುವುದು.
- ಕಡಿದಾದ ಇಳಿಜಾರಿರುವ ಸ್ಥಳಗಳಲ್ಲಿ ಮಣ್ಣನ್ನು ಸಡಿಲುಗೊಳಿಸುವ ಬೆಳೆಗಳನ್ನು ಬೆಳೆಸುವುದು.
- ಇಳಿಜಾರು ಹೆಚ್ಚಿರುವ ಕಡೆಗಳಲ್ಲಿ ಮನೆಗಳು ಮತ್ತು ಇತರ ಕಟ್ಟಡ ನಿರ್ಮಾಣ.

ಮಾನವನ ಇಂತಹ ಚಟುವಟಿಕೆಗಳು ಭೂಕುಸಿತದ ಸಾಧ್ಯತೆಯನ್ನು ಹೆಚ್ಚಿಸುತ್ತವೆ.

ಸ್ಥಳದ ಕೊರತೆಯು ಕೇರಳವು ಎದುರಿಸುತ್ತಿರುವ ಒಂದು ಪ್ರಮುಖ ಸಮಸ್ಯೆಯಾಗಿದೆ. ಕೇರಳದ ಒಟ್ಟು ಭೂವಿಸ್ತಾರದ ಶೇಕಡಾ 30ಕ್ಕಿಂತ ಹೆಚ್ಚು ಭಾಗವು ಇಳಿಜಾರು ಪ್ರದೇಶಗಳನ್ನೊಳಗೊಂಡಿದೆ. ಆದಕಾರಣ ಭೂಮಿಯನ್ನು ವೈಜ್ಞಾನಿಕವಾಗಿಬಳಸಬೇಕಾಗಿದೆ.

### ವೈಜ್ಞಾನಿಕವಾದ ಭೂವಿನಿಯೋಗ ರೀತಿಗಳು

- ಗುಡ್ಡದ ಇಳಿಜಾರನ್ನು ಸಮತಟ್ಟುಗಳಾಗಿ ಮಾಡಿ ಇಳಿಜಾರಿನ್ನು ಕಡಿಮೆ ಮಾಡಬೇಕು.
- ಗುಡ್ಡಪ್ರದೇಶಗಳಲ್ಲಿ ನೀರಿನ ಸ್ವಾಭಾವಿಕ ಹರಿಯುವಿಕೆಗೆ ತಡೆಯುಂಟುಮಾಡಬಾರದು.
- ಇಳಿಜಾರು ಹೆಚ್ಚಿರುವ ಕಡೆಗಳಲ್ಲಿ ನಿರ್ಮಾಣ ಕಾರ್ಯಗಳನ್ನು ಮಾಡಬಾರದು.

*ಎಪ್ರಿಲ್ 25. ಭಾರತದ ಪ್ರಮಾಣ ಸಮಯ 11.41. ದೀರ್ಘವಾದ ಚಳಿಗಾಲದ ನಂತರ ಬೇಸಿಗೆಯ ಬಿರುಬಿಸಿಲಿಗೆ ಆಲಸ್ಯಬಿಟ್ಟು ಬಾಸ್ಮತಿ ಬಯಲುಗಳ, ಚಾಸೊಪ್ಪಿನ ತೋಟಗಳ ಹಾಗೂ ಬೀದಿಯಲ್ಲಿರುವ ಉದ್ದಿಮೆಗಳ ಕೆಲಸಗಳಲ್ಲಿ ಬಾರ್‌ಪಾಕ್ ಗ್ರಾಮದ ಹೆಚ್ಚಿನ ನಿವಾಸಿಗಳು ತೊಡಗಿಸಿಕೊಂಡಿದ್ದರು.*

*ಕ್ಷಣಮಾತ್ರದಲ್ಲಿ ಆ ಘಟನೆ ನಡೆಯಿತು!*

*ಭೂಮಿ ಅಲುಗಾಡಿತು. ಬಿರುಗಾಳಿಗೆ ಸಿಕ್ಕಿದ ದೋಣಿಗಳಂತೆ ಕಟ್ಟಡಗಳು ನೆಲಕ್ಕುರುಳಿದವು. ಅನಂತರ ಕಾಗದದ ಅರಮನೆಯ ಹಾಗೆ ನೆಲಕಚ್ಚಿದವು. ಸೇತುವೆಗಳು, ವಿದ್ಯುತ್ ಕಂಬಗಳು.. ಮೊದಲಾದವು ಕುಸಿದುಬಿದ್ದವು... ಶತಮಾನಗಳ ಹಿಂದೆ ಕಟ್ಟಲಾದ ಕಟ್ಟಡಗಳು ಕುಸಿದುಬಿದ್ದವು.*

ಭೂಕಂಪ ಮತ್ತು ಅದು ಉಂಟುಮಾಡಿದ ನಾಶನಷ್ಟಗಳ ಕುರಿತು ನೀವು ಓದಿದಿರಲ್ಲವೇ. ಈ ಘಟನೆ ನಡೆದು 24 ಘಂಟೆಗಳಲ್ಲಿ 40 ಬಾರಿ ನಿರಂತರವಾದ ಕಂಪನವುಂಟಾಯಿತು. ಆಗ ಕಾಠ್ಮಂಡು ಪಟ್ಟಣದಿಂದ 200 ಕಿ.ಮೀ. ಸುತ್ತಳತೆಯಲ್ಲಿ ದೊಡ್ಡ ನಾಶನಷ್ಟಗಳುಂಟಾದುವು. ಹತ್ತುಸಾವಿರಕ್ಕೂ ಮಿಕ್ಕಿ ಜನರು ಮರಣ ಹೊಂದಿದ ಆ ಭೂಕಂಪದ ನಾಭಿಯು $28^{0}$ 15’ಉತ್ತರ, $84^{0}$ 7’ ಪೂರ್ವ ಎಂಬೀ ಅಕ್ಷಾಂಶರೇಖಾಂಶಗಳು ಪರಸ್ಪರ ಛೇದಿಸುವ ಬಿಂದುವಿನಿಂದ 30 ಕಿ.ಮೀ. ಕೆಳಗಿದೆಯೆಂದು ಭೂವಿಜ್ಞಾನಿಗಳು ಕಂಡುಹಿಡಿದಿದ್ದಾರೆ.

*ಅಟ್ಲಸ್ ನೋಡಿ ಮೇಲೆ ಹೇಳಿದ ಭೂಕಂಪನಾಭಿಯ ಪ್ರದೇಶವನ್ನು ಕಂಡುಕೊಳ್ಳಿರಿ.*



ಭೂಕಂಪದಿಂದ ನಾಶನಷ್ಟಗಳುಂಟಾದ ನೇಪಾಳದ ದೃಶ್ಯವನ್ನು ಚಿತ್ರದಲ್ಲಿ (ಚಿತ್ರ 7.7) ಕಾಣಬಹುದು.

ನೇಪಾಳದ ಭೂಕಂಪದ ಕುರಿತು ಕೊಟ್ಟಿರುವ ಲಘು ವಿವರಣೆ ಓದಿದಿರಲ್ಲವೇ. ಪ್ರತಿಯೊಂದು ಭೂಕಂಪವೂ ಜನರ ದುರಂತ ಕಥೆಗಳನ್ನು ನಮ್ಮ ಮುಂದಿಡುತ್ತದೆ.




ಚಿತ್ರ 7.7

ಭೂಕಂಪ ಎಂದರೇನು? ಯಾವಾಗಲೂ ಭೂಕಂಪ ಉಂಟಾಗುವ ವಲಯಗಳು, ಅವು ಉಂಟಾಗಲಿರುವ ಕಾರಣಗಳು ಎಂಬಿವುಗಳನ್ನು ಹಿಂದಿನ ಅಧ್ಯಾಯದಲ್ಲಿ ಕಲಿತಿರುವುದನ್ನು ನೀವು ನೆನಪಿಸುವಿರಲ್ಲವೇ.

## ಭಾರತದಲ್ಲಿ ಭೂಕಂಪ ದುರಂತದ ತೀವ್ರತೆ

ಭಾರತದಲ್ಲಿ ಭೂಕಂಪ ದುರಂತದ ತೀವ್ರತೆಯ ಪ್ರಮಾಣವನ್ನು ತೋರಿಸುವ ಭೂಪಟವನ್ನು ಗಮನಿಸಿರಿ.




ಚಿತ್ರ 7.8 ಕೃಪೆ: NCERT ಪಾಠಪುಸ್ತಕ XI

*ಭೂಪಟವನ್ನು ನಿರೀಕ್ಷಿಸಿ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಹಿಡಿಯಿರಿ.*

- ಭೂಕಂಪ ದುರಂತ ತೀವ್ರತೆ ತುಂಬಾ ಹೆಚ್ಚಿರುವ ವಲಯದಲ್ಲಿರುವ ಪ್ರಾಂತ್ಯಗಳು/ಪ್ರದೇಶಗಳು ಯಾವುವು?
- ಕೇರಳದಲ್ಲಿ ಭೂಕಂಪ ದುರಂತ ತೀವ್ರತೆ ಎಷ್ಟರಮಟ್ಟಿಗಿದೆ?
- ಭೂಕಂಪ ದುರಂತ ತೀವ್ರತೆ ತುಂಬ ಕಡಿಮೆಯಾಗಿರುವ ಪ್ರಾಂತ್ಯಗಳು/ಪ್ರದೇಶಗಳು ಯಾವುವು?

## ಕೇರಳದಲ್ಲಿ ಭೂಕಂಪ ದುರಂತ ತೀವ್ರತೆ

ಕೇರಳವು ಭೂಕಂಪ ದುರಂತದಿಂದ ಮುಕ್ತವಲ್ಲ ಎಂಬುದನ್ನು ಭೂಪಟದಿಂದ ತಿಳಿಯಬಹುದು. ಇತ್ತೀಚೆಗೆ ಕೇರಳದಲ್ಲಿ ಭೂಕಂಪದಿಂದಾಗುವ ಅಪಾಯಗಳ ಸಾಧ್ಯತೆಯು ಹೆಚ್ಚುತ್ತಿರುವುದರ ಆಧಾರದಲ್ಲಿ ಕೇರಳವನ್ನು ಸಾಮಾನ್ಯ ಭೂಕಂಪ ದುರಂತ ತೀವ್ರತೆಯಿರುವ ವಲಯ ಎಂದು ಪರಿಗಣಿಸಲಾಗಿದೆ.

ನಾವು ಜಾಗರೂಕತೆಯಿಂದಿರಬೇಕು ಎಂದರ್ಥ. ಭೂಕಂಪ ಸಾಧ್ಯತೆಯಿರುವ ಕಡೆಗಳಲ್ಲಿ ದೊಡ್ಡ ಕಟ್ಟಡಗಳನ್ನು ನಿರ್ಮಿಸಬಾರದು.

## ಮುಂಜಾಗರೂಕತೆಗಳು

ಭೂಕಂಪವನ್ನು ತಡೆಯಲು ಸಾಧ್ಯವಿಲ್ಲ. ಆದರೆ ವೈಜ್ಞಾನಿಕ ಹಾಗೂ ಕ್ರಿಯಾತ್ಮಕ ಚಟುವಟಿಕೆಗಳ ಮೂಲಕ ನಾಶನಷ್ಟಗಳ ತೀವ್ರತೆಯನ್ನು ಕಡಿಮೆಗೊಳಿಸಲು ಸಾಧ್ಯವಿದೆ. (ಚಿತ್ರ 7.7) ನೋಡಿರಿ. ಕಟ್ಟಡಗಳಿಗೆ ಭೂಕಂಪದ ಆಘಾತವನ್ನು ತಡೆದುಕೊಳ್ಳಲು ಸಾಧ್ಯವಾಗದಿರುವುದೇ ನಾಶನಷ್ಟ ಹೆಚ್ಚಾಗಲು ಕಾರಣವಾಗಿದೆ. ಕುಸಿದು ಬಿದ್ದ ಕಟ್ಟಡಗಳೆಡೆಯಲ್ಲಿ ಸಿಲುಕಿ ಭೂಕಂಪದಲ್ಲಿ ಅತಿ ಹೆಚ್ಚು ಜನರು ಮರಣ ಹೊಂದುವುದು ಮತ್ತು ಗಾಯಗೊಳ್ಳುವುದಾಗಿದೆ. ಆದ್ದರಿಂದ,

- ಭೂಕಂಪವನ್ನು ಪ್ರತಿರೋಧಿಸಲು ಸಾಧ್ಯವಿರುವ ಕಟ್ಟಡ ನಿರ್ಮಾಣ ವಿಧಾನಗಳನ್ನು ಅನುಸರಿಸಬೇಕು.
- ತುಲನಾತ್ಮಕವಾಗಿ ಭಾರ ಕಡಿಮೆಯಾದ ಮೇಲ್ಛಾವಣಿ ಹೆಚ್ಚು ಸುರಕ್ಷಿತವಾದುದು.

## ನೆರೆಯ ಭೀತಿಯು...

ಸಹ್ಯಾದ್ರಿ ಪರ್ವತದ ಇಳಿಜಾರುಗಳಿಂದ ಉದ್ಭವಿಸುವ 44 ನದಿಗಳ ನಾಡು ಕೇರಳ. ಇವುಗಳಲ್ಲೆಲ್ಲ ಮಳೆಗಾಲದ ಹೆಚ್ಚಿನ ದಿನಗಳಲ್ಲಿ

### ಅಡಿ ತಪ್ಪದಿರಲು

ಲಾತೂರ್ ಭೂಕಂಪದಲ್ಲಿ ಅನೇಕ ಜನರು ಮರಣ ಹೊಂದಿದರು. ಹಲವಾರು ಜನರು ಗಂಭೀರ ಗಾಯಗೊಂಡರು. ಕುಸಿದು ಬಿದ್ದ ಕಟ್ಟಡಗಳ ಅಡಿಯಲ್ಲಿ ಸಿಲುಕಿ ಹೆಚ್ಚಿನವರು ಮರಣ ಹೊಂದಿದರು. ಆದರೆ ನಿರಂತರ ಭೂಕಂಪ ಉಂಟಾಗುವ ಜಪಾನ್‌ನಲ್ಲಿ ಕಟ್ಟಡಗಳು ಕುಸಿದು ಉಂಟಾಗುವ ಅವಘಡಗಳು ತುಲನಾತ್ಮಕವಾಗಿ ಕಡಿಮೆ. ಭೂಕಂಪನವನ್ನೆದುರಿಸಲು ಸಾಮರ್ಥ್ಯವುಳ್ಳ ಕಟ್ಟಡ ನಿರ್ಮಾಣ ವಿಧಾನವನ್ನು ಅವರು ಅವಲಂಬಿಸಿದ್ದಾರೆ.

ನಾವು ಮನೆಗಳನ್ನು ಅದರ ಅಂದ ಹೆಚ್ಚಿಸುವುದರ ಬದಲು ಅದರ ಭದ್ರತೆಯನ್ನು ಖಾತರಿಪಡಿಸಬೇಕಾಗಿದೆಯಲ್ಲವೆ?

### ನೆರೆ: ಐತಿಹಾಸಿಕ ಸಂಗತಿಗಳು

ಕೇರಳದಲ್ಲಿ ಉಂಟಾಯಿತೆಂದು ಹೇಳಲಾದ ನೆರೆ ಹಾವಳಿಯಲ್ಲಿ ಅತಿ ಪ್ರಾಚೀನವಾದುದು ಸಿ.ಇ. 371ರದ್ದು. ಸಿ.ಇ. 1341ರಲ್ಲಿ ಕೇರಳ ತೀರದಲ್ಲಿ ಉಂಟಾದ ಭೂಕಂಪಕ್ಕೆ ಸಂಬಂಧಿಸಿ ನೆರೆ ಉಂಟಾಯಿತು. ಇದರ ಕುರಿತು ಗ್ರೀಕ್ ಪಂಡಿತನಾದ ಪ್ಲಿನಿ(ಸೀನಿಯರ್) 'ನಾಚುರಲ್ ಹಿಸ್ಟರಿ' ಎಂಬ ತನ್ನ ಗ್ರಂಥದಲ್ಲಿ ದಾಖಲಿಸಿದ್ದಾನೆ. ಕೇರಳದಲ್ಲಿ ಇಂದು ಜೀವಿಸಿರುವವರಲ್ಲಿ ಅತಿ ಹಳೆಯ ತಲೆಮಾರಿನ ಜನರ ಮನಸ್ಸಿನಲ್ಲಿ ಅಳಿಯದೆ ನಿಂತಿರುವುದು 99ರ ನೆರೆಯಾಗಿದೆ. 99 ಎಂದರೆ ಕೊಲ್ಲ ವರ್ಷ 1099. ಇಂಗ್ಲಿಷ್ ಕ್ಯಾಲೆಂಡರ್ ಪ್ರಕಾರ ಸಿ.ಇ. 1924 ಆಗಿದೆ.



ನೆರೆಯುಂಟಾಗುತ್ತದೆ. ಮಳೆಗಾಲದಲ್ಲಿ ಧಾರಾಳ ನೀರು ಹರಿಯುವಾಗ ನದಿಗೆ ಆ ಎಲ್ಲ ನೀರನ್ನು ತುಂಬಿಕೊಳ್ಳಲು ಸಾಧ್ಯವಾಗದಿರಬಹುದು. ಅಂತಹ ಸ್ಥಿತಿಯಲ್ಲಿ ನದಿಯು ತುಂಬಿ ದಡಮೀರಿ ಹರಿಯುತ್ತದೆ. ಇದನ್ನೇ ನೆರೆ ಎನ್ನುತ್ತಾರೆ. ಹಿಮಾಲಯದ ನದಿಗಳಲ್ಲಿ, ಪ್ರತ್ಯೇಕವಾಗಿ ಬ್ರಹ್ಮಪುತ್ರ ನದಿಯ ತಪ್ಪಲುಗಳಲ್ಲಿ ನಿರಂತರವಾಗಿ ನೆರೆಯಂಟಾಗುತ್ತದೆ. ಈ ನದಿಯು ಹರಿಯುವ ಪ್ರದೇಶಗಳು ಭಾರೀ ಮಳೆ ಲಭಿಸುವ ಸ್ಥಳಗಳಾದುದರಿಂದ ನೆರೆಯುಂಟಾಗುವುದು ಸರ್ವ ಸಾಮಾನ್ಯವಾಗಿದೆ. ತಪ್ಪಲುಗಳಲ್ಲಿ ಮಾತ್ರವಲ್ಲ ಬೆಟ್ಟ ಪ್ರದೇಶಗಳಲ್ಲೂ ನೆರೆಯುಂಟಾಗುವುದಿದೆ. ಭಾರೀ ಮಳೆಯಿಂದಾಗಿ ನೀರಿನ ಮಟ್ಟ ಏರುವ ಪ್ರಕ್ರಿಯೆಯನ್ನು ತಕ್ಷಣದ ನೆರೆ (Flash Flood) ಎನ್ನುತ್ತಾರೆ. ಇತ್ತೀಚೆಗೆ ಉತ್ತರಾಖಂಡದಲ್ಲುಂಟಾದ ನೆರೆ ಇದಕ್ಕೆ ಉದಾಹರಣೆಯಾಗಿದೆ. ಮರುಭೂಮಿಗಳಲ್ಲೂ ವಿರಳವಾದ ಮಳೆಯಿಂದಾಗಿ ಇಂತಹ ಪ್ರಕ್ರಿಯೆಗಳುಂಟಾಗುವುದಿದೆ.

*ನೆರೆಗೆ ಸಂಬಂಧಿಸಿದ ವಾರ್ತೆಗಳನ್ನು ಹಾಗೂ ಚಿತ್ರಗಳನ್ನು ಸಂಗ್ರಹಿಸಿರಿ.*

### ನೆರೆಯು ಭೀತಿಯಾಗದಿರಲು

ನೆರೆಯಿಂದ ಉಂಟಾಗುವ ಹಾನಿಯನ್ನು ತಡೆಗಟ್ಟಲು ಕೆಳಗೆ ಹೇಳುವ ಮುಂಜಾಗರೂಕತೆಗಳನ್ನು ಸ್ವೀಕರಿಸಬೇಕು.

- ಹೊಳೆಯ ಬದಿಗಳಲ್ಲಿ ಮನೆ ಕಟ್ಟಬಾರದು.
- ಬಯಲುಗಳನ್ನು ಮಣ್ಣು ಹಾಕಿ ಸಮತಟ್ಟು ಮಾಡಬಾರದು, ಅವು ಮಳೆನೀರು ಇಂಗುವ ಸ್ಥಳಗಳಾಗಿವೆ.
- ನದೀ ತೀರಗಳಲ್ಲಿ ತಡೆಗೋಡೆಗಳನ್ನು ನಿರ್ಮಿಸಬೇಕು.

*ಪ್ರಾಕೃತಿಕ ದುರಂತಗಳನ್ನು ಕಡಿಮೆಮಾಡಲು ಸ್ವೀಕರಿಸಬೇಕಾದ ಕಾರ್ಯಗಳನ್ನು ವಿವರಿಸುವ ಪೋಸ್ಟರುಗಳನ್ನು ತಯಾರಿಸಿರಿ. ಅದನ್ನು ಸಾರ್ವಜನಿಕ ಸ್ಥಳದಲ್ಲಿ ಪ್ರದರ್ಶಿಸಿರಿ.*

### ದುರಂತ ನಿವಾರಣೆ - ಲಘೂಕರಣ ಚಟುವಟಿಕೆಗಳು

ಪ್ರಾಕೃತಿಕ ದುರಂತಗಳನ್ನು ತಡೆಯಲು ಸಾಧ್ಯವಿಲ್ಲ. ಆದರೆ ವಿವೇಕಯುತವಾದ ಸಂಪರ್ಕದಿಂದ ಹಾಗೂ ಸಮಯಕ್ಕೆ ತಕ್ಕುದಾದ ಮುಂಜಾಗರೂಕತಾ ಕ್ರಮಗಳಿಂದ ದುರಂತದಿಂದುಂಟಾಗುವ ತೀವ್ರತೆಯನ್ನು ಕಡಿಮೆಗೊಳಿಸಲು ಹಾಗೂ ಜನರನ್ನು ಸಾಧಾರಣ ಜನಜೀವನಕ್ಕೆ ಹಿಂತಿರುಗಿಸಲು ಸಾಧ್ಯ. ಇಂತಹ ಚಟುವಟಿಕೆಗಳನ್ನು ದುರಂತ ಲಘೂಕರಣ ಚಟುವಟಿಕೆಗಳೆಂದು ಹೇಳಬಹುದು.

## ಪ್ರಾಕೃತಿಕ ದುರಂತಗಳನ್ನು ಎದುರಿಸುವ

ವಿವಿಧ ಪ್ರಾಕೃತಿಕ ದುರಂತಗಳು ಉಂಟಾಗುವಾಗ ಸ್ವೀಕರಿಸಬೇಕಾದ ಕ್ರಮಗಳನ್ನು ಫ್ಲೋಚಾರ್ಟ್‌ನಲ್ಲಿ ನೀಡಲಾಗಿದೆ.

**ಸಾಮಾನ್ಯ ಕ್ರಮಗಳು**

- ಗಾಯಗೊಂಡವರಿಗೆ ಆದಷ್ಟು ಬೇಗನೆ ವೈದ್ಯಕೀಯ ಚಿಕಿತ್ಸೆ ನೀಡುವುದು.
- ಊಹಾಪೋಹಗಳಿಗೆ ಗಮನ ಕೊಡಬಾರದು, ಪ್ರಚಾರಮಾಡ ಬಾರದು.
- ಬೆಲೆ ಬಾಳುವ ವಸ್ತುಗಳನ್ನು ಮತ್ತು ದಾಖಲೆಗಳನ್ನು ಮಾತ್ರ ಜೊತೆಯಲ್ಲಿ ಇರಿಸಿಕೊಳ್ಳಬೇಕು.
- ಕುದಿಸಿ ತಣಿಸಿದ ನೀರನ್ನು ಮಾತ್ರ ಬಳಸುವುದು.
- ಅಗತ್ಯವಿರುವ ಔಷದಿಗಳನ್ನು ಜೊತೆಯಲ್ಲಿರಿಸಿಕೊಳ್ಳುವುದು.
- 

**ನೆರೆ**

- ನದಿ ತೀರದಲ್ಲಿ ವಾಸಿಸುವವರು ಆದಷ್ಟು ಬೇಗನೆ ಹತ್ತಿರದ ಎತ್ತರದ ಪ್ರದೇಶಕ್ಕೆ ಹೋಗಬೇಕು.
- ನದಿಯು ಉಕ್ಕಿ ಹರಿಯುವ ಸಂದರ್ಭದಲ್ಲಿ ನದಿಗೆ ಇಳಿಯಬಾರದು.
- ಮನೆಯ ಒಳಗಡೆ ನೀರು ಬರುವಂತಿದ್ದರೆ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಬೇಕು.

**ಭೂಕುಸಿತ**

- ಕಡಿದಾದ ಇಳಿಜಾರಿರುವ ಪ್ರದೇಶಗಳಿಂದ ದೂರ ವಾಸಿಸುವುದು.
- ಕಡಿದಾದ ಇಳಿಜಾರಾಗಿರುವ ಪ್ರದೇಶಗಳಲ್ಲಿ ವಾಸಿಸುವವರು ಮಳೆಗಾಲದಲ್ಲಿ ತುಂಬಾ ಜಾಗ್ರತೆ ವಹಿಸುವುದು.

**ಗುಡುಗು ಮಿಂಚು**

- ವಿದ್ಯುತ್ ಸಂಪರ್ಕ ಕಡಿತಗೊಳಿಸುವುದು.
- ಕಾಲನ್ನು ನೆಲಕ್ಕೆ ತಾಗಿಸದೆ ಮರದ ಮಂಚದ ಮೇಲೆ ಅಥವಾ ಹಲಗೆಯ ಮೇಲೆ ಕುಳಿತುಕೊಳ್ಳುವುದು.
- ತೆರೆದ ಸ್ಥಳದಲ್ಲಾದರೆ ಕುಕ್ಕುರು ಕಾಲಿನಲ್ಲಿ ಕುಳಿತುಕೊಳ್ಳಬೇಕು.
- ಒಂಟಿ ಮರದ ಸಮೀಪ ನಿಲ್ಲಬಾರದು.


**ಸುನಾಮಿ**

- ಸಮುದ್ರದಲ್ಲಿ ಸಾಮಾನ್ಯ ಸ್ಥಿತಿಗಿಂತ ವ್ಯತ್ಯಾಸ ಕಂಡು ಬಂದಲ್ಲಿ ಹಾಗೂ ಅದಕ್ಕೆ ಸಂಬಂಧಿಸಿ ಯಾವುದಾದರೂ ಮುನ್ಸೂಚನೆ ದೊರೆತಲ್ಲಿ ಆದಷ್ಟು ಬೇಗನೆ ಸಮುದ್ರ ತೀರದಿಂದ ಹಿಂತಿರುಗುವುದು.
- ಜೀವ ಸುರಕ್ಷಾ ಕವಚ (Life jacket), ಗಾಳಿ ತುಂಬಿಸಿದ ವಾಹನದ ಟ್ಯೂಬ್ ಎಂಬಿವುಗಳಲ್ಲಿ ಯಾವುದಾದರೊಂದನ್ನು ಜೊತೆಯಲ್ಲಿರಿಸಿಕೊಳ್ಳುವುದು.

**ಭೂಕಂಪ**

- ಕುಸಿದು ಬೀಳಲು ಸಾಧ್ಯತೆಯಿರುವ ಕಟ್ಟಡ ಮತ್ತು ಜಾಹೀರಾತು ಫಲಕಗಳ ಹತ್ತಿರ ನಿಲ್ಲಬಾರದು.
- ಪುನಃ ಭೂಕಂಪ ಸಾಧ್ಯತೆಯಿರುವುದರಿಂದ ಅಧಿಕೃತರಿಂದ ಸೂಚನೆ ದೊರೆಯುವ ತನಕ ತಮ್ಮ ಮನೆಗಳಿಗೆ ಹೋಗಬಾರದು.
- ತೆರೆದ ಸ್ಥಳಗಳು ಹೆಚ್ಚು ಸುರಕ್ಷಿವಾಗಿವೆ.
- ಲಿಫ್ಟ್ ಉಪಯೋಗಿಸಬಾರದು.
- ಗೋಡೆಯ ಮೂಲೆ ಭಾಗವು ಹೆಚ್ಚು ಸುರಕ್ಷಿತವಾಗಿದೆ.
- ಕಿಟಿಕಿಯ ಹತ್ತಿರ ನಿಲ್ಲಬಾರದು.

ದುರಂತ ನಿವಾರಣೆ ಕಾರ್ಯಗಳಿಗೆ ಪ್ರಧಾನವಾಗಿ ಮೂರು ಹಂತಗಳಿವೆ. ಅವುಗಳನ್ನು ಕೆಳಗಿನ ಫ್ಲೋಚಾರ್ಟಿನಲ್ಲಿ ವಿಷದೀಕರಿಸಲಾಗಿದೆ.




### ದುರಂತ ನಿವಾರಣೆ ಕಾರ್ಯಗಳಲ್ಲಿ ವಿದ್ಯಾರ್ಥಿಗಳ ಪಾತ್ರ

ನಿಮ್ಮ ಮನೆ ಅಥವಾ ಶಾಲೆಯ ಸಮೀಪದಲ್ಲಿ ದುರಂತ ಸಂಭವಿಸಿದರೆ ನೀವು ಹಿರಿಯರೊಂದಿಗೆ ರಕ್ಷಣಾಕಾರ್ಯದಲ್ಲಿ ಸಹಕರಿಸುವಿರಲ್ಲವೇ. ಊರಿಗೆ ಮತ್ತು ಸಮಾಜಕ್ಕೆ ಪ್ರಯೋಜನಕಾರಿಯಾದ ಹಲವಾರು ಕಾರ್ಯಗಳಲ್ಲಿ ನಿಮಗೆ ನೇತೃತ್ವ ವಹಿಸಬಹುದು. ಅವುಗಳಲ್ಲಿ ಕೆಲವು:


- ದುರಂತದ ಸಂದರ್ಭಗಳಲ್ಲಿ ಜನರು ಪಾಲಿಸಬೇಕಾದ ನಿಯಮಗಳನ್ನು ವಿವರಿಸುವ ಲಘು ಲೇಖನಗಳನ್ನು ಮತ್ತು ನೋಟೀಸುಗಳನ್ನು ತಯಾರಿಸಿ ವಿತರಿಸುವುದು ಮತ್ತು ಅದನ್ನು ಸಾರ್ವಜನಿಕ ಸ್ಥಳಗಳಲ್ಲಿ ಪ್ರದರ್ಶಿಸುವುದು.
- ವೈಜ್ಞಾನಿಕ ರೀತಿಯಲ್ಲಿ ಭೂವಿನಿಯೋಗದ ಕುರಿತು ಜಾಗೃತಿ ಮೂಡಿಸುವ ಕಾರ್ಯಗಳನ್ನು ಹಮ್ಮಿಕೊಳ್ಳುವುದು.
- 

### ಸುರಕ್ಷಿತ ಸ್ಥಳಗಳನ್ನು ಹುಡುಕೋಣ

ಒಂದು ಶಾಲೆಯಲ್ಲಿ ದುರಂತ ನಿವಾರಣಾ ಕಾರ್ಯಗಳ ಭಾಗವಾಗಿ ತಯಾರಿಸಿದ ಸುರಕ್ಷಿತ ವಲಯದ ನಕಾಶೆಯನ್ನು ಚಿತ್ರದಲ್ಲಿ (ಚಿತ್ರ 7.10) ನೀಡಲಾಗಿದೆ. ಭೂಕಂಪ, ಭೂಕುಸಿತ ಮುಂತಾದ ಪ್ರಾಕೃತಿಕ ದುರಂತಗಳು ಉಂಟಾಗುವ ಸಂದರ್ಭಗಳಲ್ಲಿ ಹೆಚ್ಚಿನ ದುರಂತ ಸಂಭವಿಸದೆ ಇರಲು ಸ್ವರಕ್ಷಣೆಯನ್ನು ಖಾತರಿಪಡಿಸುವುದು ಅಗತ್ಯವಾಗಿದೆ. ಅದಕ್ಕಾಗಿ ಶಾಲೆಯಲ್ಲಿ ಸುರಕ್ಷಿತವಾದ ಸ್ಥಳಗಳನ್ನು ಮೊದಲೇ ಗುರುತಿಸಿಡಬೇಕು.

ಕಟ್ಟಡಗಳಿಂದ ದೂರ ಇರುವ ಶಾಲೆಯ ಮೈದಾನದ ಮಧ್ಯಭಾಗವು ಹೆಚ್ಚು ಸುರಕ್ಷಿತವಾಗಿದೆ. ಕಟ್ಟಡಗಳು ಕುಸಿದರೆ ಅವುಗಳ ಅವಶೇಷಗಳು ಅಪ್ಪಳಿಸಲಾರದು ಎಂಬುದು ಇದಕ್ಕೆ ಕಾರಣವಾಗಿದೆ. ಅಪಾಯ ಸಂಭವಿಸಿದರೆ ಅಂಬ್ಯುಲೆನ್ಸ್ ಹಾಗೂ ಇತರ ರಕ್ಷಣಾವಾಹನಗಳಿಗೆ ಸಂಚರಿಸಲಿರುವ ರಸ್ತೆಯನ್ನು ಮೊದಲೇ ಕಂಡುಕೊಳ್ಳಬೇಕು.

ರಸ್ತೆಗೆ ತಡೆಯನ್ನುಂಟುಮಾಡುವ ಯಾವುದೂ ಅಲ್ಲಿರಬಾರದು. ಸುರಕ್ಷಿತವಾದ ಸ್ಥಳಗಳನ್ನು ಎಲ್ಲರಿಗೂ ತಿಳಿಯುವ ರೀತಿಯಲ್ಲಿ ಗುರುತಿಸಿರಬೇಕು. ಈ ರೀತಿಯ ದುರಂತ ಸಂದರ್ಭಗಳನ್ನು ಎದುರಿಸಲು ಆಗಾಗ 'ಮೋಕ್‌ಡ್ರಿಲ್' ನಡೆಸಬೇಕು.




ಚಿತ್ರ 7.10

## ದುರಂತ ನಿವಾರಣೆಗಾಗಿ ಸರಕಾರದ ಯೋಜನೆಗಳು

ಕೇರಳ ರಾಜ್ಯ ದುರಂತ ನಿವಾರಣಾ ಸಂಸ್ಥೆಯು (Kerala State Disaster Management Authority (KSDMA)) ಕೇರಳದಲ್ಲಿ ದುರಂತ ನಿವಾರಣೆಯ ಕಾರ್ಯಗಳನ್ನು ನಿರ್ವಹಿಸುವ ಜವಾಬ್ದಾರಿಯನ್ನು ಹೊಂದಿರುವ ಸಂಸ್ಥೆಯಾಗಿದೆ. ಸಂಸ್ಥೆಯ ಅಧೀನದಲ್ಲಿ ರಾಜ್ಯ ತುರ್ತು ದುರಂತ ಕಾರ್ಯನಿರ್ವಹಣ ಕೇಂದ್ರವು (State Emergency Operations Centre (SEOC)) ಎಲ್ಲ ಜಿಲ್ಲೆಗಳಲ್ಲಿಯೂ ದುರಂತ ನಿವಾರಣೆಯ ಉಸ್ತುವಾರಿಯನ್ನು ವಹಿಸುತ್ತದೆ. ತುರ್ತು ಸಂದರ್ಭದಲ್ಲಿ ರಾಜ್ಯದಾದ್ಯಂತ ಸ್ವೀಕರಿಸಬೇಕಾದ ಕಾರ್ಯಗಳು, ದುರಂತ ಸಾಧ್ಯತೆಯ ಮುನ್ನೆಚ್ಚರಿಕೆ ಮೊದಲಾದ ಮಾಹಿತಿಗಳನ್ನು ಜಿಲ್ಲೆಗಳಿಗೆ ನೀಡುತ್ತದೆ. ಜಿಲ್ಲಾ ತುರ್ತು ದುರಂತ ಕಾರ್ಯಗಳನ್ನು ನಿರ್ವಹಿಸುವ ಕೇಂದ್ರಗಳಿಗೆ (DEOC) ಆಯಾ ಪ್ರದೇಶದ ದುರಂತ ನಿವಾರಣಾ ಕಾರ್ಯದ ಹೊಣೆಗಾರಿಕೆ ಇದೆ. ಈ ಕೇಂದ್ರದ ಮೂಲಕ ಜನರಿಗೆ ಅಗತ್ಯವಿರುವ ಮುನ್ನೆಚ್ಚರಿಕೆಯ ಮಾಹಿತಿಗಳನ್ನು ನೀಡಲಾಗುತ್ತದೆ. ದುರಂತ ಸಂಭವಿಸಿದರೆ ಆರೋಗ್ಯ, ಶಾಂತಿಪಾಲನೆ, ಅಗ್ನಿಶಾಮಕ, ಲೋಕೋಪಯೋಗಿ ಮೊದಲಾದ ಸರಕಾರಿ ಇಲಾಖೆಗಳನ್ನು ಏಕೀಕರಿಸಿ ಪುನರ್ವಸತಿ ಕಾರ್ಯಗಳನ್ನು ಜಾರಿಗೊಳಿಸುವುದು ಈ ಕೇಂದ್ರಗಳ ಕರ್ತವ್ಯವಾಗಿದೆ. ಹೆಚ್ಚಿನ ಮಾಹಿತಿಗಾಗಿ www.sdma.kerala.gov.in ಸಂದರ್ಶಿಸಿರಿ.

### ಸುರಕ್ಷಿತವಾದ ಭವಿಷ್ಯಕ್ಕಾಗಿ

ನಾಲ್ಕೂವರೆ ಕೋಟಿ ವರ್ಷಗಳ ಇತಿಹಾಸವಿರುವ ಈ ಭೂಮಿಯಲ್ಲಿ ಮಾನವನು ಕೊನೆಗೆ ಅಸ್ತಿತ್ವಕ್ಕೆ ಬಂದ ಜೀವಿಯಾಗಿದ್ದಾನೆ . ಪ್ರಕೃತಿಯ ಶುದ್ಧ ವಾಯು, ಶುದ್ಧ

ನಮಗಿಂತ ಮೊದಲು ಈ ಭೂಮಿಯಲ್ಲಿ ಜೀವಿಸಿ ಅಳಿದುಹೋದ ಈ ಜೀವಜಾಲಗಳು ನಮಗಾಗಿ ಉಳಿಸಿರುವುದರಿಂದ ನೀರು, ಮಣ್ಣಿನ ಫಲವತ್ತತೆ, ಹಚ್ಚಹಸುರುಗಳನ್ನು ಅನುಭವಿಸಲು ನಮಗೆ ಸಾಧ್ಯವಾಗಿದೆ. ಅತಿಯಾಸೆಯಿಂದ ಇಡೀ ಭೂಮಿಯನ್ನು ತನ್ನ ಕೈವಶ ಮಾಡಲು ಪ್ರಯತ್ನಿಸಿದರೆ ಗಂಭೀರ ಪರಿಣಾಮವನ್ನು ಎದುರಿಸಬೇಕಾಗಿ ಬರಬಹುದು. ಈ ಭೂಮಿಯು ನಮಗೆ ಮಾತ್ರವಲ್ಲ ನಮ್ಮ ಮುಂದಿನ ತಲೆಮಾರಿನವರಿಗೆ ಮತ್ತು ಜೀವಜಾಲಗಳಿಗೆ ಈ ಪ್ರಾಕೃತಿಕ ಸಂಪತ್ತು ಗಳನ್ನು ಸಂರಕ್ಷಿಸುವುದು ನಮ್ಮ ಜವಾಬ್ದಾರಿಯಾಗಿದೆ.



## ಪ್ರಧಾನ ಕಲಿಕಾ ಸಾಧನೆಗಳಲ್ಲಿ ಒಳಪಡುವವುಗಳು

- ಪ್ರಕೃತಿಯ ಕುರಿತು ವಿವರಿಸಲು ಸಾಧ್ಯವಾಗುವುದು.
- ಪ್ರಕೃತಿಯ ವೈವಿಧ್ಯಗಳ ಕುರಿತು ಅರ್ಥೈಸಿ ವಿವರಿಸಲು ಸಾಧ್ಯವಾಗುವುದು.
- ಜೀವನದಲ್ಲಿ ಪ್ರಕೃತಿಯ ಪ್ರಭಾವವನ್ನು ತಿಳಿಯಲು ಸಾಧ್ಯವಾಗುವುದು.
- ಪ್ರಕೃತಿಯಲ್ಲಿ ಮನುಷ್ಯನು ಮಾಡುವ ಬದಲಾವಣೆಗಳನ್ನು ವಿಶ್ಲೇಷಣೆ ಮಾಡಲು ಸಾಧ್ಯವಾಗುವುದು.
- ಪ್ರಾಕೃತಿಕ ವಿದ್ಯಮಾನಗಳನ್ನು ತಿಳಿಯಲು ಹಾಗೂ ವಿವರಿಸಲು ಸಾಧ್ಯವಾಗುವುದು.
- ಪ್ರಾಕೃತಿಕ ವಿಕೋಪ ಹಾಗೂ ಪ್ರಾಕೃತಿಕ ದುರಂತಗಳನ್ನು ಪ್ರತ್ಯೇಕಿಸಲು ಮತ್ತು ಅವುಗಳನ್ನು ಸ್ಪಷ್ಟಪಡಿಸಲು ಸಾಧ್ಯವಾಗುವುದು.
- ಪ್ರಾಕೃತಿಕ ದುರಂತಗಳಿಗೆ ಕಾರಣವಾಗುವ ಮಾನವ ಚಟುವಟಿಕೆಗಳನ್ನು ವಿಶ್ಲೇಷಿಸಿ ವೈಜ್ಞಾನಿಕ ರೀತಿಯಲ್ಲಿ ಭೂಮಿಯ ಉಪಯೋಗದ ಕುರಿತು ವಿವರಿಸಲು ಸಾಧ್ಯವಾಗುವುದು.
- ಪ್ರಕೃತಿ ದುರಂತ ನಿವಾರಣಾ ಕಾರ್ಯಗಳ ಮುಖ್ಯ ಆಶಯಗಳನ್ನು ಸ್ಪಷ್ಟಪಡಿಸಲು ಸಾಧ್ಯವಾಗುವುದು.
- ವೈಜ್ಞಾನಿಕವಾಗಿ ಭೂಮಿಯ ಉಪಯೋಗ ರೀತಿಗಳನ್ನು ಅಳವಡಿಸಲು ಬೇಕಾಗುವ ಮನೋಭಾವ ಉಂಟಾಗುವುದು.
- ದುರಂತ ನಿವಾರಣಾ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವ ಮನೋಭಾವ ರೂಪುಗೊಳ್ಳುವುದು.



## ಮೌಲ್ಯನಿರ್ಣಯ ಮಾಡುವ

- ನೆರೆಯಂತಹ ಪ್ರಾಕೃತಿಕ ದುರಂತಗಳು ಉಂಟಾಗುವ ಸಂದರ್ಭದಲ್ಲಿ ಕೈಗೊಳ್ಳಬೇಕಾದ ಮುಂಜಾಗರೂಕತಾ ಕ್ರಮಗಳು ಯಾವುವು?
- ಪ್ರಾಕೃತಿಕ ದುರಂತಗಳು ಉಂಟಾಗುವ ಸಂದರ್ಭದಲ್ಲಿ ಸ್ವೀಕರಿಸಬೇಕಾದ ಸಾಮಾನ್ಯ ಕ್ರಮಗಳು ಯಾವುವು?




## ಮುಂದುವರಿದ ಚಟುವಟಿಕೆಗಳು

- ವೈಜ್ಞಾನಿಕವಾಗಿ ಭೂಮಿಯ ಉಪಯೋಗ ರೀತಿಗಳನ್ನು ವಿವರಿಸುವ ಚಾರ್ಟುಗಳು, ಲಘು ಟಿಪ್ಪಣಿ ಮುಂತಾದುವುಗಳನ್ನು ತಯಾರಿಸಿರಿ. ಅದನ್ನು ಸಾರ್ವಜನಿಕ ಸ್ಥಳಗಳಲ್ಲಿ ಪ್ರದರ್ಶಿಸಿರಿ.



8

# ಜನಸಂಖ್ಯೆ, ವಲಸೆ, ವಾಸಸ್ಥಳಗಳು




2011 ರ ಖಾನೇಷುಮಾರಿ ಪ್ರಕಾರ ಭಾರತದ ಜನಸಂಖ್ಯೆಯ ಕುರಿತು ಕೆಲವು ಮೂಲಭೂತ ವಿವರಣೆಗಳನ್ನು ಗಮನಿಸಿದ್ದಿರಲ್ಲವೇ. ಜನಸಂಖ್ಯೆ ಎಂದರೇನು? ಜನಸಂಖ್ಯೆಯ ಕುರಿತು ಕಲಿಯವುದರ ಅಗತ್ಯವೇನು? ಎಲ್ಲ ಪ್ರದೇಶಗಳಲ್ಲಿಯೂ ಜನಸಂಖ್ಯೆಯ ಹಂಚಿಕೆಯು ಒಂದೇ ರೀತಿಯಾಗಿದೆಯೇ? ಜನಸಂಖ್ಯೆಯ ಹಂಚಿಕೆಯ ಮೇಲೆ ಪ್ರಭಾವ ಬೀರುವ ಘಟಕಗಳು ಯಾವುವು? ಇದರಲ್ಲಿ ಭೌಗೋಳಿಕ ಘಟಕಗಳಿಗೆ ಎಷ್ಟರ ಮಟ್ಟಿಗೆ ಪ್ರಾಧಾನ್ಯವಿದೆ? ಜನಸಂಖ್ಯೆ ಹೆಚ್ಚಾಗಲು ಮತ್ತು ಕಡಿಮೆಯಾಗಲಿರುವ ಕಾರಣಗಳು ಹಾಗೂ ಅದರ ಪರಿಣಾಮಗಳು ಯಾವುದೆಲ್ಲ?

ಒಂದು ರಾಷ್ಟ್ರದ ಸಂಪನ್ಮೂಲಗಳ ಯೋಜನೆ ಹಾಗೂ ವಿನಿಯೋಗ ಮೊದಲಾದ ಕ್ಷೇತ್ರಗಳಲ್ಲಿ ಜನಸಂಖ್ಯೆಯ ಅಂಕಿಅಂಶಗಳು ಬಹಳ ಹೆಚ್ಚು ಪ್ರಾಧಾನ್ಯವನ್ನು ಪಡೆದಿವೆ. ಮೇಲೆ ಹೇಳಿದ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಹಿಡಿಯುವುದರ ಮೂಲಕ ಅದನ್ನು ಅರ್ಥೈಸಿಕೊಳ್ಳಬಹುದು. ಅದಕ್ಕಾಗಿ ನಾವು ಈ ಪಾಠಭಾಗದ ಮೂಲಕ ಸಾಗೋಣ.

ಒಂದು ಪ್ರದೇಶದಲ್ಲಿ ನಿಶ್ಚಿತ ಕಾಲಾವಧಿಯಲ್ಲಿ ವಾಸಿಸುವ ಜನರ ಒಟ್ಟು ಸಂಖ್ಯೆಯೇ ಅಲ್ಲಿಯ ಜನಸಂಖ್ಯೆಯಾಗಿದೆ (Population). ಒಂದು ಪ್ರದೇಶವನ್ನು ರಾಷ್ಟ್ರ ಎಂದು ಕರೆಯುವುದು ಅಲ್ಲಿನ ಜನರಿಂದಾಗಿಯಲ್ಲವೇ. ಅದು ಹೇಗೆಂದರೆ ಅಲ್ಲಿಯ ಸಂಪನ್ಮೂಲಗಳನ್ನು ಉತ್ಪಾದನೆಗಾಗಿ ವಿನಿಯೋಗಿಸುವವರು ಹಾಗೂ ರಾಷ್ಟ್ರದ ನೀತಿಯನ್ನು ರೂಪಿಸುವವರು ಜನರಾಗಿದ್ದಾರೆ. ಆದುದರಿಂದ ಮಾನವ ಸಂಪನ್ಮೂಲವನ್ನು ನಿಜವಾದ ಸಂಪತ್ತು ಎಂಬುದಾಗಿ ತಿಳಿಯಬಹುದು.

ಅಭಿವೃದ್ಧಿಯ ಆಧಾರವು ಮಾನವ ಕ್ಷೇಮವಾಗಿದೆ. ಇದಕ್ಕಾಗಿ ಆಹಾರ, ಬಟ್ಟೆ, ವಸತಿ, ಉದ್ಯೋಗ ಮತ್ತು ಮೂಲಭೂತ ಸೌಕರ್ಯಗಳು ಮೊದಲಾದುವುಗಳನ್ನು ಖಚಿತಪಡಿಸಬೇಕು. ರಾಷ್ಟ್ರದ ಜನಸಂಖ್ಯೆಯ ಕುರಿತು ಮಾಹಿತಿಗಳನ್ನು ಸಂಗ್ರಹಿಸಿ ವಿಶ್ಲೇಷಿಸಿದರೆ ಮಾತ್ರವೇ ಲಭ್ಯವಾಗುವ ಸಂಪನ್ಮೂಲಗಳನ್ನು ಯಥಾಪ್ರಕಾರ ವಿನಿಯೋಗಿಸಿ ಅಭಿವೃದ್ಧಿ ಕಾರ್ಯಗಳನ್ನು ದಕ್ಷತೆಯಿಂದ ಯೋಜಿಸಿಕೊಳ್ಳಬಹುದು.

*ಜನಸಂಖ್ಯೆಯ ಅಂಕಿಅಂಶಗಳ ವಿಶ್ಲೇಷಣೆಯು ಅಗತ್ಯವಾಗಿರುವ ವಲಯಗಳು ಯಾವುವು? ಬರೆಯಿರಿ.*

- ಆಹಾರ ಧಾನ್ಯಗಳ ಉತ್ಪಾದನೆಯನ್ನು ಮೊದಲೇ ನಿಶ್ಚಯಿಸಲು.
- ಉದ್ಯೋಗ ಅವಕಾಶಗಳನ್ನು ಲಭ್ಯವಾಗುವಂತೆ ಮಾಡಲು.
- 

*ಜನಸಂಖ್ಯೆಯು ಕ್ರಮಾನುಗತವಾಗಿ ಹೆಚ್ಚಾಗುವುದು ರಾಷ್ಟ್ರದ ಅಭಿವೃದ್ಧಿಗೆ ಪ್ರಯೋಜನಕಾರಿಯಾಗಿದೆಯೆ? ಯಾಕಾಗಿ?*


## ಜನಸಂಖ್ಯೆಯ ಹಂಚಿಕೆ

ಭಾರತದ ಜನಸಂಖ್ಯೆಯ ಹಂಚಿಕೆಯನ್ನು ತೋರಿಸುವ ಭೂಪಟವನ್ನು ಗಮನಿಸಿರಿ (ಚಿತ್ರ 8.1). ಜನಸಂಖ್ಯೆಯು ಹೆಚ್ಚು ಕೇಂದ್ರೀಕರಿಸಲ್ಪಟ್ಟಿರುವ ಪ್ರದೇಶಗಳನ್ನು ಮತ್ತು ಜನಸಂಖ್ಯೆಯು ಕಡಿಮೆ ಕಂಡುಬರುವ ಪ್ರದೇಶಗಳನ್ನು ಇದರಿಂದ ಗುರುತಿಸಲು ಸಾಧ್ಯವಾಗುವುದಲ್ಲವೆ?

- *ಅತಿ ಹೆಚ್ಚು ಜನಸಂಖ್ಯೆ ಇರುವ ರಾಜ್ಯಗಳು ಯಾವುವು?*
- *ಅತಿ ಕಡಿಮೆ ಜನಸಂಖ್ಯೆ ಇರುವ ರಾಜ್ಯಗಳು ಯಾವುವು?*

ಭಾರತದ ಜನಸಂಖ್ಯೆ ಹಂಚಿಕೆಯ ಭೂಪಟವನ್ನು ಅಟ್ಲಸ್‌ನಲ್ಲಿರುವ ಪ್ರಾಕೃತಿಕ ವಿಭಾಗಗಳನ್ನು ತೋರಿಸುವ ಭೂಪಟದೊಂದಿಗೆ ಹೋಲಿಸಿ ನೋಡಿರಿ.

- ಉತ್ತರದ ಮಹಾಬಯಲಿನಲ್ಲಿ ಜನಸಂಖ್ಯೆಯು ಹೆಚ್ಚಾಗಿ ಕೇಂದ್ರೀಕರಿಸಿರುವುದನ್ನು ಕಂಡಿರಲ್ಲವೆ? ಇದಕ್ಕೆ ಕಾರಣವೇನು?





ಚಿತ್ರ 8.1 ಭಾರತದ ಜನಸಂಖ್ಯೆ - 2011

- ಉಪದ್ವೀಪದ ಪೀಠಭೂಮಿಯಲ್ಲಿ ಸಾಮಾನ್ಯವಾಗಿ ಮಿತವಾದ ಜನಸಂಖ್ಯೆಯು ಕಂಡುಬರುತ್ತದೆ. ಮಹಾಬಯಲಿನ ಪ್ರದೇಶಗಳಂತೆ ವಿಸ್ತಾರವಾದ ಕೃಷಿ ಯೋಗ್ಯವಾದ ಪ್ರದೇಶಗಳು ಇಲ್ಲದಿರುವುದು ಹಾಗೂ ಸಂಚಾರಕ್ಕೆ ಯೋಗ್ಯವಲ್ಲದ ಭೂಪ್ರದೇಶಗಳು ಇರುವುದು ಇದಕ್ಕೆ ಕಾರಣವಾಗಿದೆ. ಆದರೆ ಉಪದ್ವೀಪದ ಪೀಠಭೂಮಿಗಳಲ್ಲಿ ಖನಿಜಗಳ ಖನನ, ಖನಿಜಾಧಾರಿತ ಕೈಗಾರಿಕೆಗಳು ಕಾರ್ಯ ನಿರ್ವಹಿಸುವುದರಿಂದ ಕೆಲವು ಪ್ರದೇಶಗಳಲ್ಲಿ ಹೆಚ್ಚು ಜನಸಂಖ್ಯೆಯು ಕಂಡುಬರುತ್ತದೆ. ಸಾರಿಗೆ ಮತ್ತು ವಾರ್ತಾ ವಿನಿಮಯ ಕ್ಷೇತ್ರಗಳಲ್ಲಿ ಉಂಟಾದ ಪ್ರಗತಿಯು ಇದರ ವೇಗವನ್ನು ಹೆಚ್ಚಿಸುತ್ತದೆ.

ಪರ್ವತ ಪ್ರದೇಶಗಳನ್ನು ಒಳಗೊಂಡಿರುವ ರಾಜ್ಯಗಳಲ್ಲಿ ಯಾವ ರೀತಿಯಲ್ಲಿ ಜನಸಂಖ್ಯೆಯಿದೆ? ಕಾರಣವೇನು?

ಜನಸಂಖ್ಯೆಯ ಹಂಚಿಕೆಯಲ್ಲಿ ಭೂಪ್ರಕೃತಿಯ ಪಾತ್ರವನ್ನು ತಿಳಿದಿರಲ್ಲವೇ. ಯಾವೆಲ್ಲ ಭೌಗೋಳಿಕ ಘಟಕಗಳು ಜನಸಂಖ್ಯೆಯ ಹಂಚಿಕೆಯ ಮೇಲೆ ಪ್ರಭಾವ ಬೀರುತ್ತವೆ ಎಂಬುದನ್ನು ನೋಡಿರಿ.




ಮೇಲೆ ಸೂಚಿಸಿದ ಪ್ರತಿಯೊಂದು ಘಟಕವೂ ಜನಸಂಖ್ಯೆಯ ಹಂಚಿಕೆಯ ಮೇಲೆ ಹೇಗೆ ಪ್ರಭಾವ ಬೀರುತ್ತದೆ ಎಂದು ಚರ್ಚಿಸಿ ಲಘು ಟಿಪ್ಪಣಿ ಬರೆಯಿರಿ.

ಭಾರತದ ಒಟ್ಟು ವಿಸ್ತೀರ್ಣವು 3.82 ದಶಲಕ್ಷ ಚ.ಕಿ.ಮೀ. ಆಗಿದೆ. ಅಂದರೆ ಜಗತ್ತಿನ ಒಟ್ಟು ಭೂವಿಸ್ತೀರ್ಣದ 2.5%. ಆದರೆ ಭಾರತವು ಜಾಗತಿಕ ಜನಸಂಖ್ಯೆಯ 17.5%ವನ್ನು ಹೊಂದಿದೆ. ಒಂದು ಚ.ಕಿ. ಮೀ. ಪ್ರದೇಶದಲ್ಲಿ ಸರಾಸರಿ 382ರಷ್ಟು ಜನರಿದ್ದಾರೆ ಎಂಬುದನ್ನು ಈ ಮೂಲಕ ಲೆಕ್ಕ ಹಾಕಬಹುದು. ಇದುವೇ ಭಾರತದ ಜನಸಾಂದ್ರತೆಯಾಗಿದೆ. ಪ್ರತಿಯೊಂದು ಚದರ ಕಿ. ಮೀ. ಪ್ರದೇಶದಲ್ಲಿ ವಾಸಿಸುವ ಜನರ ಸರಾಸರಿಯನ್ನು 'ಜನಸಾಂದ್ರತೆ' ಎಂದು ಕರೆಯುತ್ತಾರೆ (Density of population). ಒಂದು ಪ್ರದೇಶದ ಜನಸಂಖ್ಯೆಯನ್ನು ಭೂವಿಸ್ತಾರದಿಂದ ಭಾಗಿಸಿದಾಗ ಜನಸಾಂದ್ರತೆಯು ಲಭಿಸುತ್ತದೆ.

$$\text{ಜನಸಾಂದ್ರತೆ} = \frac{\text{ಒಟ್ಟು ಜನಸಂಖ್ಯೆ}}{\text{ಭೂವಿಸ್ತೀರ್ಣ}}$$


ಚೀನಾವು ಅತಿ ಹೆಚ್ಚು ಜನಸಂಖ್ಯೆ ಇರುವ ದೇಶವಾದರೂ ಅಲ್ಲಿನ ಜನಸಾಂದ್ರತೆಯು ಭಾರತಕ್ಕಿಂತ ಕಡಿಮೆಯಾಗಿದೆ. ಇದಕ್ಕೆ ಕಾರಣವೇನು?

ಜನಸಾಂದ್ರತೆಯಲ್ಲಿ ಬಾಂಗ್ಲಾದೇಶ, ಜಪಾನ್ ಎಂಬೀ ರಾಷ್ಟ್ರಗಳ ನಂತರದ 3ನೇ ಸ್ಥಾನವು ಭಾರತಕ್ಕಿದೆ. ಭಾರತದ ಜನಸಾಂದ್ರತೆಯಲ್ಲಿ ಸ್ಪಷ್ಟವಾದ ಪ್ರಾದೇಶಿಕ ವ್ಯತ್ಯಾಸಗಳು ಕಂಡುಬರುತ್ತವೆ. 2011 ಜನಗಣತಿಯ ಪ್ರಕಾರ ಅರುಣಾಚಲ ಪ್ರದೇಶದಲ್ಲಿ ಪ್ರತಿ ಚ.ಕಿ.ಮೀ.ಗೆ 17 ಮಂದಿ ಮಾತ್ರ ವಾಸಿಸುತ್ತಿದ್ದು ಜನಸಾಂದ್ರತೆಯಲ್ಲಿ ಅತ್ಯಂತ ಹಿಂದಿದೆ. ಚ.ಕಿ.ಮೀ. ಗೆ 11297

ಮಂದಿ ಇರುವ ದೆಹಲಿಯು ಅತ್ಯಂತ ಹೆಚ್ಚು ಜನಸಾಂದ್ರತೆಯನ್ನು ಹೊಂದಿದೆ. ಬಿಹಾರವು ಅತ್ಯಧಿಕ ಜನಸಾಂದ್ರತೆ ಇರುವ ರಾಜ್ಯವಾಗಿದೆ. (1102)

> ದೆಹಲಿಯಲ್ಲಿ ಅತಿ ಹೆಚ್ಚು ಜನಸಾಂದ್ರತೆಯಿರಲು ಕಾರಣವೇನು?

ಭೂಪಟ (ಚಿತ್ರ 8.2)ನ್ನು ನಿರೀಕ್ಷಿಸಿ ಭಾರತದ ವಿವಿಧ ರಾಜ್ಯಗಳ ಜನಸಾಂದ್ರತೆಯನ್ನು ತಿಳಿಯಿರಿ.




ಚಿತ್ರ 8.2 ಕೃಪೆ :ಭಾರತದ ಜನಸಂಖ್ಯೆ - 2011

ಭಾರತದ ರಾಜ್ಯಗಳನ್ನು ಜನಸಾಂದ್ರತೆಯ ಆಧಾರದಲ್ಲಿ ವರ್ಗೀಕರಿಸಿ ಕೆಳಗೆ ನೀಡಿದ ಮಾದರಿಯಲ್ಲಿ ಪಟ್ಟಿ ಮಾಡಿರಿ.

| ಜನಸಾಂದ್ರತೆ | ವಿಭಾಗಗಳು | ಪ್ರಾಂತ್ಯಗಳು |
|---|---|---|
| 100 ಕ್ಕಿಂತ ಕಡಿಮೆ | ಜನಸಾಂದ್ರತೆ ತುಂಬ ಕಡಿಮೆ | |
| 101 ರಿಂದ 260ರ ವರೆಗೆ | ಕಡಿಮೆ ಜನ ಸಾಂದ್ರತೆ | |
| 251ರಿಂದ 500ರ ವರೆಗೆ | ಮಿತವಾದ ಜನಸಾಂದ್ರತೆ | |
| 501 ರಿಂದ 1000ರದ ವರೆಗೆ | ಬಹಳ ಹೆಚ್ಚಿನ ಸಾಂದ್ರತೆ | |
| 1000 ದ ಮೇಲೆ | ಅತ್ಯಧಿಕ ಸಾಂದ್ರತೆ | |

ಭಾರತದ ರಾಜ್ಯಗಳಲ್ಲಿ ವಿಭಿನ್ನವಾಗಿರುವ ಜನಸಾಂದ್ರತೆಯನ್ನು ನೋಡಿದ್ದೀರಲ್ಲವೇ.

- 2011 ಜನಗಣತಿಯ ಪ್ರಕಾರ ಕೇರಳದಲ್ಲಿ ಜನಸಾಂದ್ರತೆ ಎಷ್ಟು?
- ಜನಸಾಂದ್ರತೆಯ ಆಧಾರದಲ್ಲಿ ಕೇರಳಕ್ಕೆ ಎಷ್ಟನೆಯ ಸ್ಥಾನವಿದೆ?

ಸಮತಲವಾದ ಭೂಪ್ರಕೃತಿ, ಮಿತವಾದ ಹವಾಮಾನ, ಕೃಷಿಗೆ ಯೋಗ್ಯವಾದ ಪೌಷ್ಟಿಕಾಂಶವಿರುವ ಮಣ್ಣು, ಶುದ್ಧಜಲ ಲಭ್ಯತೆ ಮೊದಲಾದ ಪ್ರಧಾನ ಭೌಗೋಳಿಕ ಘಟಕಗಳು ಕೆಲವು ಪ್ರದೇಶದಲ್ಲಿ ಹೆಚ್ಚಿನ ಜನಸಾಂದ್ರತೆಗೆ ಕಾರಣವಾಗಿವೆ. ಅಲ್ಲದೆ ಖನಿಜಗಳು ಲಭ್ಯವಾಗುವ ಪ್ರದೇಶದಲ್ಲಿ, ಕೈಗಾರಿಕಾ ವಲಯಗಳಲ್ಲಿ ಲಭಿಸುವ ಉದ್ಯೋಗಾವಕಾಶಗಳು, ನಗರ ಕೇಂದ್ರೀಕೃತವಾಗಿರುವ ಆಕರ್ಷಕವಾದ ಮೂಲಭೂತ ಸೌಕರ್ಯಗಳು, ಸೇವೆಗಳು ಎಂಬಿವು ಈ ರೀತಿಯ ಪ್ರದೇಶಗಳಲ್ಲಿ ಹೆಚ್ಚಿನ ಜನಸಾಂದ್ರತೆಗೆ ಕಾರಣವಾಗುತ್ತವೆ. ಜನಸಾಂದ್ರತೆಯ ಅಸಮನತೋಲನಕ್ಕಿರುವ ಕಾರಣಗಳು ಹಾಗೂ ಅದರಲ್ಲಿ ಭೌಗೋಳಿಕ ಘಟಕಗಳ ಪ್ರಾಧಾನ್ಯವನ್ನು ತಿಳಿದಿರಲ್ಲವೇ.

ಒಂದು ಪ್ರದೇಶದಲ್ಲಿರುವ ಜನಸಂಖ್ಯೆಯಲ್ಲಿ ಬದಲಾವಣೆಯುಂಟಾಗುವುದು ಹೇಗೆಂದು ನೋಡುವ.

## ಜನಸಂಖ್ಯಾ ಬೆಳವಣಿಗೆ

ನಿಶ್ಚಿತ ಕಾಲಾವಧಿಯಲ್ಲಿ ಒಂದು ಪ್ರದೇಶದಲ್ಲಿ ವಾಸಿಸುವ ಜನರ ಸಂಖ್ಯೆಯಲ್ಲಿ ಉಂಟಾಗುವ ಬದಲಾವಣೆಯೇ ಜನಸಂಖ್ಯಾ ಹೆಚ್ಚಳವಾಗಿದೆ. ಇದನ್ನು ಸಾಮಾನ್ಯವಾಗಿ ಶೇಕಡಾಮಾನದಲ್ಲಿ ಗಣನೆ ಮಾಡುತ್ತಾರೆ. ಭಾರತದಲ್ಲಿ ದಶಕದ ಬೆಳವಣಿಗೆಯು ಶೇಕಡಾ17.7 ಆಗಿದೆ.

ಅಂದರೆ ಜನಸಂಖ್ಯೆಯು 2011ರಲ್ಲಿ 2001ರಲ್ಲಿರುವ ಜನಸಂಖ್ಯೆಗಿಂತ 17.7% ದಷ್ಟು ಹೆಚ್ಚಾಗಿದೆ. ಈ ರೀತಿಯಲ್ಲಿ ಜನಸಂಖ್ಯೆಯಲ್ಲುಂಟಾಗುವ ಹೆಚ್ಚಳವನ್ನು ಧನಾತ್ಮಕ ಜನಸಂಖ್ಯಾ

ಬೆಳವಣಿಗೆ ಎನ್ನುತ್ತಾರೆ (Positive growth of population).

ಒಂದು ಪ್ರದೇಶದ ಜನಸಂಖ್ಯೆಯಲ್ಲಿ ಕಡಿಮೆಯಾಗುವ ಸಂದರ್ಭವೂ ಉಂಟಾಗುತ್ತದೆ. ಇದನ್ನು ಋಣಾತ್ಮಕ ಜನಸಂಖ್ಯಾ ಬೆಳವಣಿಗೆ (Negetive growth of population) ಎನ್ನುತ್ತಾರೆ.

ಜನಸಂಖ್ಯೆಯಲ್ಲಿ ಬದಲಾವಣೆಯುಂಟಾಗಲಿರುವ ಕಾರಣಗಳು ಯಾವುವು ಎಂದು ನೋಡುವ.

- ಜನನ ಪ್ರಮಾಣ
- ಮರಣ ಪ್ರಮಾಣ
- ವಲಸೆ

ಜನನ ಪ್ರಮಾಣ ಮತ್ತು ಮರಣ ಪ್ರಮಾಣಗಳು ಜನಸಂಖ್ಯೆಯ ಬದಲಾವಣೆಯ ಮೇಲೆ ಪ್ರಭಾವ ಬೀರುವ ಸ್ವಾಭಾವಿಕ ಘಟಕಗಳಾಗಿವೆ. ಹೆಚ್ಚಿನ ಜನನ ಪ್ರಮಾಣ ಹಾಗೂ ಕಡಿಮೆ ಮರಣ ಪ್ರಮಾಣವು ಜನಸಂಖ್ಯೆಯ ಹೆಚ್ಚಳಕ್ಕೆ ಕಾರಣವಾಗುತ್ತದೆ. ಮರಣ ಪ್ರಮಾಣ ಹೆಚ್ಚಾಗುವುದು ಜನಸಂಖ್ಯೆ ಕಡಿಮೆಯಾಗಲು ಕಾರಣವಾಗುತ್ತದೆ.


ಒಂದು ರಾಷ್ಟ್ರದ ಜನನ ಮತ್ತು ಮರಣ ಪ್ರಮಾಣಗಳು ಸಮಾನವಾದರೆ ಏನು ಸಂಭವಿಸಬಹುದು?



ವಲಸೆಯು ಆಧುನಿಕ ಜಗತ್ತಿನಲ್ಲಿ ಜನಸಂಖ್ಯೆಯ ಬದಲಾವಣೆಯ ಮೇಲೆ ಪ್ರಭಾವ ಬೀರುವ ನಿರ್ಣಾಯಕ ಘಟಕವಾಗಿದೆ.

## ವಲಸೆ

ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಶಾಶ್ವತವಾಗಿ ಅಥವಾ ತಾತ್ಕಾಲಿಕವಾಗಿ ಜನರು ತಮ್ಮ ವಾಸಸ್ಥಳವನ್ನು ಬದಲಾಯಿಸುವುದನ್ನು ವಲಸೆ ಎನ್ನುತ್ತಾರೆ. ವಲಸೆಯ ವಿಧಗಳನ್ನು ಫ್ಲೋಚಾರ್ಟ್‌ನಲ್ಲಿ ನೀಡಲಾಗಿದೆ.




KT-537-4/Soc. Sci. II-9 (K) Vol-2

ದೇಶದ ಗಡಿಯನ್ನು ದಾಟಿ ಹೋಗುವ ವಲಸೆಯನ್ನು ಅಂತಾರಾಷ್ಟ್ರೀಯ ವಲಸೆ (International migration) ಎನ್ನುತ್ತಾರೆ. ಒಂದು ರಾಷ್ಟ್ರಕ್ಕೆ ಜನರು ಬಂದು ಸೇರುವುದನ್ನು ದೇಶಾಂತರ ಆಗಮನ ಎಂದೂ (Immigration) ಒಂದು ರಾಷ್ಟ್ರದಿಂದ ಮತ್ತೊಂದು ರಾಷ್ಟ್ರಕ್ಕೆ ವಲಸೆ ಹೋಗುವುದನ್ನು ದೇಶಾಂತರ ನಿರ್ಗಮನ (Emigration) ಎಂದೂ ಕರೆಯುತ್ತಾರೆ.



ಚಿತ್ರ 8.3

ವಿದೇಶಗಳಲ್ಲಿ ಕೆಲಸ ಮಾಡುವ ಮಲೆಯಾಳಿಗಳು ಅಂತಾರಾಷ್ಟ್ರೀಯ ವಲಸೆಗೆ ಉತ್ತಮ ಉದಾಹರಣೆಯಾಗಿದ್ದಾರೆ.

ಕೇರಳದಲ್ಲಿ ಮೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳಿವೆ. ಈ ಸಣ್ಣ ರಾಜ್ಯಕ್ಕೆ ಇಷ್ಟೊಂದು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳಿರಲು ಕಾರಣಗಳೇನು?

ರಾಷ್ಟ್ರದ ಒಳಗಿನ ವಲಸೆಯು ಆಂತರಿಕ ವಲಸೆಯಾಗಿದೆ (Internal migration). ಉದ್ಯೋಗವು ಈ ರೀತಿಯ ವಲಸೆಗೆ ಮುಖ್ಯಕಾರಣವಾಗಿದೆ. ರಾಷ್ಟ್ರದಲ್ಲಿ ಉತ್ತಮ ವೇತನದ ಉದ್ಯೋಗ ಲಭಿಸುವ ಸ್ಥಳಗಳಿಗೆ ಜನರು ವಲಸೆ ಹೋಗುತ್ತಾರೆ.



(ಚಿತ್ರ 8.4)ಅಂತಾರಾಜ್ಯ ಕಾರ್ಮಿಕರು

ಇತ್ತೀಚೆಗಿನ ದಿನಗಳಲ್ಲಿ ಕೇರಳದ ನಿರ್ಮಾಣ ಕ್ಷೇತ್ರದಲ್ಲಿ ದುಡಿಯುತ್ತಿರುವ ಉತ್ತರಭಾರತದ ಕಾರ್ಮಿಕರು ಈ ರೀತಿಯ ವಲಸೆಗೆ ಉದಾಹರಣೆಯಾಗಿದ್ದಾರೆ (ಚಿತ್ರ 8.4).

ಇವರು ಕೇರಳಕ್ಕೆ ವಲಸೆ ಬರಲು ಕಾರಣವೇನು?

ಈ ರೀತಿಯಲ್ಲಿ ಒಂದು ರಾಜ್ಯದಿಂದ ಮತ್ತೊಂದು ರಾಜ್ಯದೆಡೆಗೆ ನಡೆಯುವ ವಲಸೆಯನ್ನು ರಾಜ್ಯಾಂತರ (Interstate Migration) ವಲಸೆ ಎನ್ನುತ್ತಾರೆ.

ವಿವಿಧ ಕಾರಣಗಳಿಂದಾಗಿ ಜನರು ರಾಜ್ಯದೊಳಗೆ ವಾಸಸ್ಥಳಗಳನ್ನು ಬದಲಾಯಿಸುವುದನ್ನು ರಾಜ್ಯದೊಳಗಿನ ವಲಸೆ (Interstate migration) ಎನ್ನುತ್ತಾರೆ. ಜಿಲ್ಲೆಯ ಗಡಿಯನ್ನು ದಾಟಿಹೋಗುವ ವಲಸೆಯನ್ನು ಜಿಲ್ಲಾಂತರ ವಲಸೆ (Inter District migration) ಎನ್ನುತ್ತಾರೆ.

20ನೇ ಶತಮಾನದ ಪೂರ್ವಾರ್ಧದಲ್ಲಿ ಮಧ್ಯತಿರುವಾಂಕೂರಿನಿಂದ ಮಲಬಾರಿಗೆ ಬೃಹತ್ ಪ್ರಮಾಣದಲ್ಲಿ ಉಂಟಾದ ಕೃಷಿಕರ ವಲಸೆಯು ಜಿಲ್ಲಾಂತರ ವಲಸೆಗೆ ಉದಾಹರಣೆಯಾಗಿದೆ. ವಿವಾಹ, ಶಿಕ್ಷಣ ಮುಂತಾದ ವಿವಿಧ ಕಾರಣಗಳಿಂದ ಜಿಲ್ಲೆಯ ಒಳಗೆ ನಡೆಯುವ ವಲಸೆಯನ್ನು ಜಿಲ್ಲಾ ಆಂತರಿಕ ವಲಸೆ (Intradistrict migration) ಎಂದು ಕರೆಯುತ್ತಾರೆ. ಮೇಲೆ ವಿವರಿಸಿದ ಎಲ್ಲ ರೀತಿಯ ವಲಸೆಗಳನ್ನು ಈ ಕೆಳಗಿನಂತೆ ವಿಂಗಡಿಸಬಹುದಾಗಿದೆ.

- ಗ್ರಾಮದಿಂದ ಗ್ರಾಮಕ್ಕಿರುವ ವಲಸೆ
- ಗ್ರಾಮದಿಂದ ನಗರಕ್ಕಿರುವ ವಲಸೆ
- ನಗರದಿಂದ ನಗರಕ್ಕಿರುವ ವಲಸೆ
- ನಗರದಿಂದ ಗ್ರಾಮಕ್ಕಿರುವ ವಲಸೆ

ವಿವಿಧ ರೀತಿಯ ವಲಸೆಗಳಿಗೆ ಇನ್ನೂ ಹೆಚ್ಚಿನ ಉದಾಹರಣೆಗಳನ್ನು ಚರ್ಚೆಯ ಮೂಲಕ ಕಂಡುಕೊಳ್ಳಿರಿ.



## ವಲಸೆ ಯಾಕೆ?

ನಮ್ಮೂರಿನಿಂದ ಉದ್ಯೋಗವನ್ನು ಅರಸಿ ಧಾರಾಳ ಜನರು ವಿದೇಶಗಳಿಗೂ ಭಾರತದ ಉಳಿದ ರಾಜ್ಯಗಳಿಗೂ ವಲಸೆ ಹೋಗುವುದನ್ನು ನೀವು ಕಂಡಿರಬಹುದಲ್ಲವೇ. ಜಗತ್ತಿನ ಅಭಿವೃದ್ಧಿ ವಲಯಗಳಲ್ಲಿ ಸೃಷ್ಟಿಸಲ್ಪಡುವ ಉದ್ಯೋಗಾವಕಾಶಗಳು ಈ ರೀತಿಯ ವಲಸೆಗಳಿಗೆ ಕಾರಣವಾಗಿವೆ. ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಪಶ್ಚಿಮ ಏಷ್ಯಾದ ದೇಶಗಳಲ್ಲಿ ನಡೆದ ವ್ಯಾಪಕವಾದ ಪೆಟ್ರೋಲಿಯಂ ಖನನವು ಸೃಷ್ಟಿಸಿದ ಉದ್ಯೋಗಾವಕಾಶವು ಕೊಲ್ಲಿ ರಾಷ್ಟ್ರಗಳ ಕಡೆಗಿನ ಈ ರೀತಿಯ ವಲಸೆಗಿರುವ ಪ್ರಧಾನ ಆಕರ್ಷಕ ಘಟಕವಾಗಿದೆ.

ಉದ್ಯೋಗಾಕಾಶವಲ್ಲದೆ ಇತರ ಯಾವೆಲ್ಲ ಆಕರ್ಷಕ ಘಟಕಗಳು (Pull factors) ವಲಸೆಯನ್ನು ಪ್ರೇರೇಪಿಸುತ್ತವೆ ಎಂದು ಕಂಡುಕೊಳ್ಳಿರಿ.



- ಉನ್ನತ ಉದ್ಯೋಗ ಅವಕಾಶಗಳು
- 

### ಯುರೋಪ್‌ನ ಕಡೆಗಿನ ನಿರಾಶ್ರಿತರ ಪ್ರವಾಹ

*ಟೆಲ್ ಅವೀವ್: 10 ಸೆಪ್ಟಂಬರ್ 2015*

ಈ ಹಿಂದೆ ಯಾವತ್ತೂ ಕಾಣಲಾಗದಷ್ಟು ನಿರಾಶ್ರಿತರ ಪ್ರವಾಹಕ್ಕೆ ಯುರೋಪ್ ಸಾಕ್ಷಿಯಾಯಿತು. ಸಾವಿರಾರು ಜನರು ಈ ಕಳೆದ ದಿನಗಳಲ್ಲಿ ನಿರಾಶ್ರಿತರಾಗಿ ಯುರೋಪ್‌ನ್ನು ತಲುಪಿದ್ದಾರೆ. ಈ ಪಲಾಯನವು ಸಿರಿಯಾದಲ್ಲಿ ತೀವ್ರಗೊಂಡ ಆಂತರಿಕ ಯುದ್ಧದಿಂದ ರಕ್ಷಣೆ ಪಡೆಯುವುದಕ್ಕಾಗಿ ನಡೆದಿದೆ.



ವಾರ್ತಾ ವರದಿಯನ್ನು ಗಮನಿಸಿದಿರಲ್ಲವೇ. ಸಿರಿಯಾದಲ್ಲಿ ಆಂತರಿಕ ಬಿಕ್ಕಟ್ಟು ತೀವ್ರಗೊಂಡ ಕಾರಣ ಸಾವಿರಾರು ಜನರು ನಿರಾಶ್ರಿತರಾಗಿ ಸಂರಕ್ಷಣೆ ಪಡೆಯಲು ಯುರೋಪಿನ ದೇಶಗಳಿಗೆ ವಲಸೆ ಬರುತ್ತಿದ್ದಾರೆ. ಇದು ಅನಿವಾರ್ಯವಾಗಿ ನಡೆಯುವ ವಲಸೆಯಾಗಿದೆ.



ವಲಸೆಗೆ ಕಾರಣವಾಗುವ ಇತರ ಅನಿವಾರ್ಯ ಘಟಕಗಳನ್ನು (Push factors) ಕಂಡುಕೊಳ್ಳಿರಿ.

- ಸಂಪನ್ಮೂಲಗಳ ಕೊರತೆ
- ನಿರುದ್ಯೋಗ
- ಅರಾಜಕತೆ
- ಪ್ರಾಕೃತಿಕ ವಿಕೋಪಗಳು
- 
- 

ಕೆಲವು ಪ್ರದೇಶಗಳಲ್ಲಿರುವ ಆಕರ್ಷಕ ಘಟಕಗಳಿಂದಾಗಿ ಜನರು ತಮ್ಮ ಸ್ವ ಆಸಕ್ತಿಯಿಂದ ನಡೆಸುವ ವಲಸೆಯನ್ನು ಆಕರ್ಷಕ ವಲಸೆ (Voluntary migration) ಎಂದು ಕರೆಯಬಹುದು. ಕೆಲವು ಪ್ರತಿಕೂಲ ಸನ್ನಿವೇಶಗಳಲ್ಲಿ ಅನಿವಾರ್ಯವಾಗಿ ನಡೆಯುವ ವಲಸೆಯನ್ನು ನಿರ್ಬಂಧಿತ ವಲಸೆ (Forced migration) ಎಂದು ಕರೆಯಬಹುದು.

### ವಲಸೆಯ ಪರಿಣಾಮಗಳು

ವಲಸೆಯಿಂದ ಮಾನವ ಸಂಪನ್ಮೂಲಗಳ ಪುನಃಸಂಘಟನೆ ಸಾಧ್ಯವಾಗುತ್ತದೆ. ಅದು ವಲಸೆ ಹೋಗುವವರಲ್ಲಿ ಮತ್ತು ವಲಸೆಗೆ ಗುರಿಯಾಗುವ ಪ್ರದೇಶಗಳಲ್ಲಿ ಸಾಮಾಜಿಕ – ಆರ್ಥಿಕ ಮತ್ತು ಸಾಂಸ್ಕೃತಿಕ ವಲಯಗಳಲ್ಲಿ ನಿರ್ಣಾಯಕ ಬದಲಾವಣೆಯನ್ನುಂಟುಮಾಡುತ್ತದೆ. ವಲಸೆಯ ಪರಿಣಾಮಗಳು ಯಾವುವು ನೋಡೋಣ.

- ಮಾನವ ಸಂಪನ್ಮೂಲಗಳ ಬದಲಾವಣೆ ಸಾಧ್ಯವಾಗುತ್ತದೆ.
- ಮಾತೃ ದೇಶಕ್ಕೆ ವಿದೇಶೀ ಹಣ ಹರಿದು ಬರುತ್ತದೆ.
- ಕೆಲವು ಪ್ರದೇಶಗಳಲ್ಲಿ ಜನಸಂಖ್ಯೆಯು ಹೆಚ್ಚುತ್ತದೆ.
- ಸಂಪನ್ಮೂಲದ ಕೊರತೆಗೆ ಕಾರಣವಾಗುತ್ತದೆ.
- ತಂತ್ರಜ್ಞಾನದ ವಿನಿಮಯ ಸಾಧ್ಯವಾಗುತ್ತದೆ.
- ಹೆಚ್ಚು ಉದ್ಯೋಗಾವಕಾಶಗಳಿಗೆ ಸಾಧ್ಯವಿದೆ.
- ಜನರ ನಡುವಿನ ಸಾಮಾಜಿಕ ಸಂಬಂಧಗಳು ಕಣ್ಮರೆಯಾಗುತ್ತವೆ.
- ಕೊಳಚೆ ಪ್ರದೇಶಗಳ ರೂಪುಗೊಳ್ಳುವಿಕೆಗೆ ಕಾರಣವಾಗುತ್ತದೆ.
- ಸಾಂಕ್ರಾಮಿಕ ರೋಗಗಳು ವ್ಯಾಪಿಸುತ್ತವೆ.
- ಉನ್ನತ ಶಿಕ್ಷಣದ ಸಾಧ್ಯತೆಗೆ ಅವಕಾಶ ಒದಗುತ್ತದೆ.
- ಜನಸಂಖ್ಯೆಯ ಸ್ತ್ರೀಪುರುಷ ಅಸಮತೋಲನವು ಕಡಿಮೆಯಾಗುತ್ತದೆ.
- ವಿದ್ಯಾವಂತರು ಮತ್ತು ಯುವಕರ ಸೇವೆಯು ದೇಶಕ್ಕೆ ನಷ್ಟವಾಗುತ್ತದೆ.
- ಸಂಪನ್ಮೂಲಗಳ ಶೋಷಣೆ ಉಂಟಾಗುತ್ತದೆ.
- ಪರಿಸರ ಮಾಲಿನ್ಯದ ತೀವ್ರತೆ ಹೆಚ್ಚುತ್ತದೆ.



ಮೇಲೆ ಹೇಳಿದ ವಾಸ್ತವಿಕತೆಯನ್ನು ತರಗತಿಯಲ್ಲಿ ಚರ್ಚಿಸಿ ವಲಸೆಯ ಗುಣದೋಷಗಳನ್ನು ವರ್ಗೀಕರಿಸಿ ಪಟ್ಟಿಮಾಡಿರಿ. ಎರಡೂ ವಿಭಾಗಗಳಲ್ಲಿ ಮತ್ತಷ್ಟು ವಿಷಯಗಳನ್ನು ಕಂಡುಕೊಂಡು ಪಟ್ಟಿ ತುಂಬಿಸುವಿರಲ್ಲವೆ.

| ಗುಣಗಳು | ದೋಷಗಳು |
|---|---|
| | ♦ |
| ♦ | ♦ |
| ♦ | ♦ |

**ವರ್ಕ್‌ಶೀಟ್**

ಪ್ರಧಾನವಾದ ವಲಸೆಗಳನ್ನು ಪಟ್ಟಿಯಲ್ಲಿ ನೀಡಲಾಗಿದೆ. ಪ್ರತಿಯೊಂದನ್ನೂ ನೀವು ಈ ಹಿಂದೆ ಕಲಿತ ಯಾವ ರೀತಿಯ ವಲಸೆ ಎಂದು ಕಂಡುಕೊಂಡು, ಸೂಕ್ತವಾದ ಕಾಲಂನಲ್ಲಿ (✓) ಮಾರ್ಕ್ ಮಾಡಿರಿ.

| ವಲಸೆ | ಅಂತಾರಾಷ್ಟ್ರೀಯ ವಲಸೆ | ಆಂತರಿಕ ವಲಸೆ | ನಿರ್ಬಂಧಿತ ವಲಸೆ | ಆಕರ್ಷಕ ವಲಸೆ |
|---|---|---|---|---|
| ♦ ಯುರೋಪ್‌ನಿಂದ ಭಾರತಕ್ಕೆ ನಡೆದ ವಲಸೆ. | ✓ | | | ✓ |
| ♦ ಮಧ್ಯತಿರುವಾಂಕೂರಿನಿಂದ ಮಲಬಾರಿನ ಕಡೆಗಿನ ಕೃಷಿಕರ ವಲಸೆ. | | | | |
| ♦ ಇತರ ಪ್ರಾಂತ್ಯಗಳಿಂದ ಕೇರಳಕ್ಕೆ ಕಾರ್ಮಿಕರ ವಲಸೆ. | | | | |
| ♦ ಶ್ರೀಲಂಕಾದ ಆಂತರಿಕ ಕಲಹದಿಂದ ಭಾರತದ ಕಡೆಗಿನ ವಲಸೆ. | | | | |
| ♦ ಕೇರಳದಿಂದ ಮಾಹಿತಿ ತಂತ್ರಜ್ಞಾನ ಪರಿಣಿತರು ಬೆಂಗಳೂರಿಗೆ ನಡೆಸಿದ ವಲಸೆ. | | | | |
| ♦ ಕೊಲ್ಲಿ ರಾಷ್ಟ್ರಗಳಿಗೆ ಮಲಯಾಳಿಗಳ ವಲಸೆ. | | | | |
| ♦ ಕೇರಳದಲ್ಲಿ ವಿವಾಹಾ ನಂತರದ ವಲಸೆ. | | | | |
| ♦ ಸಿರಿಯಾದ ಆಂತರಿಕ ಕಲಹದ ಪರಿಣಾಮವಾಗಿ ವಲಸೆ. | | | | |
| ♦ ಭಾರತದಲ್ಲಿ ಸುನಾಮಿ ಪೀಡಿತ ಪ್ರದೇಶದಿಂದ ಪುನರ್ವಸತಿ ಪ್ರದೇಶಗಳಿಗಿರುವ ವಲಸೆ. | | | | |

## ವಾಸಸ್ಥಳಗಳು (Settlements)

ಮಾನವನ ಕೃಷಿ ಸಂಸ್ಕೃತಿಗೆ 12000 ವರ್ಷಕ್ಕಿಂತಲೂ ಹೆಚ್ಚು ಪ್ರಾಚೀನತೆಯಿದೆ. ಅಗತ್ಯವಾದ ಆಹಾರ ಬೆಳೆಗಳನ್ನು ಕೃಷಿ ಮಾಡಿ ಉತ್ಪಾದಿಸಲು ಆರಂಭಿಸುವುದರೊಂದಿಗೆ ಕೃಷಿಭೂಮಿಗೆ ಹತ್ತಿರವಾಗಿ ವಾಸಸ್ಥಳಗಳು ರೂಪಿಸಲ್ಪಟ್ಟವು. ಅನಂತರ ನಡೆದ ಮಾನವನ ವಿವಿಧ ಚಟುವಟಿಕೆಗಳು ಮತ್ತು ವಲಸೆಗಳು ವಿಭಿನ್ನ ರೀತಿಯ ವಾಸಸ್ಥಳಗಳು ರೂಪುಗೊಳ್ಳಲು ಕಾರಣವಾದುವು. ತಾತ್ಕಾಲಿಕ ಅಥವಾ ಶಾಶ್ವತವಾದ ಹಾಗೂ ವಿವಿಧ ಗಾತ್ರದ ವಸತಿಗಳ ಸಮೂಹವನ್ನು ವಾಸಸ್ಥಳಗಳು (Settlement) ಎಂದು ಕರೆಯುತ್ತಾರೆ.



ಎಲ್ಲ ಪ್ರದೇಶದಲ್ಲಿಯೂ ವಾಸಸ್ಥಳಗಳ ವಿನ್ಯಾಸಗಳು ಏಕಪ್ರಕಾರವಾಗಿವೆಯೆ?

ವಾಸಸ್ಥಳಗಳ ನಿರ್ಣಯಕ್ಕೆ ಪ್ರಧಾನವಾಗಿ ಪರಿಗಣಿಸುವ ಘಟಕಗಳು ಯಾವುವು ಎಂದು ಬರೆಯಿರಿ.

- ಅನುಕೂಲಕರವಾದ ಹವಾಗುಣ
- ನೀರಿನ ಲಭ್ಯತೆ
- 
- 

ಜನಸಂಖ್ಯೆ ಮತ್ತು ಪ್ರಧಾನ ಆರ್ಥಿಕ ಚಟುವಟಿಕೆಗಳ ಆಧಾರದಲ್ಲಿ ಮಾನವನ ವಾಸಸ್ಥಳಗಳನ್ನು ಎರಡಾಗಿ ವಿಂಗಡಿಸಲಾಗಿದೆ.

- ಗ್ರಾಮೀಣ ವಾಸಸ್ಥಳಗಳು
- ನಗರ ವಾಸಸ್ಥಳಗಳು

## ಗ್ರಾಮೀಣ ವಾಸಸ್ಥಳಗಳು (Rural Settlements)

ತುಲನಾತ್ಮಕವಾಗಿ ಕಡಿಮೆ ಜನಸಂಖ್ಯೆ ಮತ್ತು ಕೃಷಿಯು ಜನರ ಮುಖ್ಯ ಕಸುಬಾಗಿರುವ ಪ್ರದೇಶಗಳಲ್ಲಿರುವ ವಾಸಸ್ಥಳಗಳನ್ನು ಗ್ರಾಮೀಣ ವಾಸಸ್ಥಳ ಎನ್ನುತ್ತಾರೆ. ಪ್ರಾದೇಶಿಕವಾಗಿ ದೊರೆಯುವ ಕಚ್ಚಾವಸ್ತುಗಳನ್ನು ಉಪಯೋಗಿಸಿಕೊಂಡು ಸಾಮಾನ್ಯವಾಗಿ ಇಲ್ಲಿ ವಸತಿಗಳನ್ನು ನಿರ್ಮಿಸಲಾಗುತ್ತದೆ.

### ವಿವಿಧ ತರದ ಗ್ರಾಮೀಣ ವಾಸಸ್ಥಳಗಳು



*ಚಿತ್ರ 8.5 ಕೇಂದ್ರೀಕೃತ ವಾಸ್ಥಳಗಳು*

ವಾಸಸ್ಥಳಗಳ ವಿನ್ಯಾಸಕ್ಕನುಗುಣವಾಗಿ ಗ್ರಾಮೀಣ ವಾಸಸ್ಥಳಗಳನ್ನು ಎರಡಾಗಿ ವಿಂಗಡಿಸಲಾಗಿದೆ.

ಚಿತ್ರವನ್ನು ಗಮನಿಸಿರಿ (ಚಿತ್ರ 8.5, 8.6). ಇಲ್ಲಿ ವಸತಿಗಳ ನಡುವಿನ ಅಂತರವು ಯಾವ ವ್ಯತ್ಯಾಸವನ್ನು ಹೊಂದಿದೆ?

ಅನುಕೂಲಕರವಾದ ಸನ್ನಿವೇಶವಿರುವ ಪ್ರದೇಶಗಳಲ್ಲಿ ಒಂದೇ ಕಡೆ ಅನೇಕ ಮನೆಗಳಿರುವುದನ್ನು ಚಿತ್ರದಲ್ಲಿ ಕಾಣಬಹುದು. ಆ ರೀತಿಯ ವಾಸಸ್ಥಳವನ್ನು ಕೇಂದ್ರೀಕೃತ ವಾಸಸ್ಥಳಗಳು (Nucliated settlements) ಎಂದು ಕರೆಯುತ್ತಾರೆ. (ಚಿತ್ರ 8.5) ಫಲವತ್ತಾದ ನದೀಸಮತಲ ಪ್ರದೇಶಗಳಲ್ಲಿ ಈ ರೀತಿಯ



ಚಿತ್ರ 8.6 ಚದುರಿದ ವಾಸಸ್ಥಳ

ವಾಸಸ್ಥಳಗಳು ನಿರ್ಮಾಣಗೊಂಡಿವೆ. ಜನರ ನಡುವೆ ಉನ್ನತವಾದ ಸಾಮಾಜಿಕ ಸಂಬಂಧ ಹಾಗೂ ಸಾಮಾನ್ಯವಾಗಿ ಸಮಾನ ಕಸುಬು ಈ ರೀತಿಯ ವಾಸ್ಥಳಗಳ ವಿಶೇಷತೆಗಳಾಗಿವೆ.

ಎರಡನೆಯ ಚಿತ್ರದಲ್ಲಿ ಕಾಣುವಂತೆ ಮನೆಗಳ ನಡುವಿನ ಅಂತರವು ಹೆಚ್ಚಾಗಿರುವ ರೀತಿಯ ವಾಸಸ್ಥಳಗಳನ್ನು ಚದುರಿದ ವಾಸಸ್ಥಳಗಳು ಎಂದು ಕರೆಯುತ್ತಾರೆ (Dispressed settlements) (ಚಿತ್ರ 8.6). ನಿಮ್ನೋನ್ನತವಾದ ಭೂಪ್ರಕೃತಿ ಮತ್ತು ಇತರ ಪ್ರತಿಕೂಲ ಸನ್ನಿವೇಶಗಳು ಈ ರೀತಿಯ ವಾಸಸ್ಥಳಗಳು ರೂಪುಗೊಳ್ಳಲು ಕಾರಣವಾಗಿವೆ. ಆರಾಧನಾಲಯಗಳು, ಮಾರುಕಟ್ಟೆಗಳು ಮೊದಲಾದ ಸಾಂಸ್ಕೃತಿಕ ವಿಶೇಷತೆಗಳು ಈ ಪ್ರದೇಶಗಳಲ್ಲಿ ಜನರನ್ನು ಪರಸ್ಪರ ಒಟ್ಟುಗೂಡಿಸುತ್ತವೆ.

ನಿಮ್ಮ ಮನೆಯು ಕೇಂದ್ರೀಕೃತ ಅಥವಾ ಚದುರಿದ ವಾಸಸ್ಥಳಗಳ ಪೈಕಿ ಯಾವ ವಾಸಸ್ಥಳ ಎಂದು ಕಂಡುಕೊಳ್ಳಿರಿ.



ಮೇಲೆ ತಿಳಿಸಿದ್ದಕ್ಕಿಂತ ಭಿನ್ನವಾಗಿ ಚದುರಿದ ಅಥವಾ ಕೇಂದ್ರೀಕೃತವಲ್ಲದ ವಾಸಸ್ಥಳಗಳೂ ಕೆಲವು ಕಡೆಯಲ್ಲಿ ಕಂಡುಬರುತ್ತವೆ. ಇವುಗಳನ್ನು ಅರ್ಧ ಕೇಂದ್ರೀಕೃತ ವಾಸಸ್ಥಳಗಳು (Semi clustered settlement) ಎಂದು ಕರೆಯುತ್ತಾರೆ.

ಹೆಚ್ಚಿನ ಜನಸಂಖ್ಯೆ ಮತ್ತು ಸ್ಥಳದ ಅಭಾವದಿಂದಾಗಿ ಕೇರಳದಲ್ಲಿ ಮೇಲೆ ಹೇಳಿದ ರೀತಿಯಲ್ಲಿ ವಾಸಸ್ಥಳಗಳನ್ನು ವರ್ಗೀಕರಿಸಲು ಸಾಧ್ಯವಿಲ್ಲ ಎಂಬುದನ್ನು ನೆನಪಿಸುವಿರಲ್ಲವೇ.

### ಗ್ರಾಮೀಣ ವಾಸಸ್ಥಳಗಳ ಮಾದರಿಗಳು

ಸಾರಿಗೆ ಸೌಕರ್ಯ ಜಲ ಲಭ್ಯತೆ ಮೊದಲಾದ ಅನುಕೂಲಕರ ಘಟಕಗಳ ಆಧಾರದಲ್ಲಿ ಕೇಂದ್ರೀಕೃತ ವಾಸಸ್ಥಳಗಳು ವಿವಿಧ ಆಕೃತಿಗಳಲ್ಲಿ ರೂಪುಗೊಳ್ಳುತ್ತವೆ. ವಾಸಸ್ಥಳಗಳ ಸಮೂಹವನ್ನು ಎತ್ತರದ ಪ್ರದೇಶಗಳಿಂದ ವೀಕ್ಷಿಸುವಾಗ ವಿವಿಧ ವಾಸಸ್ಥಳ ಆಕೃತಿಗಳನ್ನು ಕಾಣಬಹುದು. ಚಿತ್ರವನ್ನು ನಿರೀಕ್ಷಿಸಿ ಈ ರೀತಿಯ ಕೆಲವು ಆಕೃತಿಗಳನ್ನು ತಿಳಿದುಕೊಳ್ಳಿರಿ.

ಮೇಲೆ ಹೇಳಿದವುಗಳಲ್ಲದೆ ಪ್ರಾದೇಶಿಕ ಸನ್ನಿವೇಶಗಳಿಗನುಸಾರವಾಗಿ ಆಯತಾಕೃತಿ, ತ್ರಿಕೋನಾಕೃತಿ ಮೊದಲಾದ ಮಾದರಿಗಳಲ್ಲಿ ಗ್ರಾಮೀಣ ವಾಸಸ್ಥಳಗಳು ರೂಪುಗೊಳ್ಳುವುದಿದೆ.



ರೇಖೀಯ ಮಾದರಿ (Linear pattern)

- ರಸ್ತೆ, ನದಿ, ಕರಾವಳಿ ಇತ್ಯಾದಿಗಳಿಗೆ ಸಮಾನಾಂತರವಾಗಿ ಬೆಳವಣಿಗೆಯಾಗುವ ವಾಸಸ್ಥಳಗಳು.




ವೃತ್ತಾಕಾರ ಮಾದರಿ (Circular pattern)

- ಜಲಾಶಯಗಳು, ಮೇವಿನ ಬಯಲುಗಳು, ಆರಾಧನಾಲಯಗಳು ಇತ್ಯಾದಿಗಳ ಸುತ್ತಲೂ ರೂಪುಗೊಳ್ಳುವ ವಾಸಸ್ಥಳಗಳು

**ವಾಸಸ್ಥಳಗಳ ಮಾದರಿಗಳು**

(ಚಿತ್ರ 8.7)



ನಕ್ಷತ್ರ ಮಾದರಿ (Star pattern)

- ವಿವಿಧ ರಸ್ತೆಗಳು ಒಟ್ಟುಸೇರುವ ಸ್ಥಳದ ಸುತ್ತಲೂ ರೂಪುಗೊಳ್ಳುವ ವಾಸಸ್ಥಳಗಳು

## ನಗರ ವಾಸಸ್ಥಳಗಳು (Urban settlement)

ಹೆಚ್ಚು ಜನಸಂಖ್ಯೆ ಇರುವ ಪ್ರದೇಶಗಳಲ್ಲಿ ಉದ್ಯೋಗಕ್ಕೆ ಕೃಷಿಯೇತರ ವಲಯಗಳನ್ನು ಆಶ್ರಯಿಸಿಕೊಂಡಿರುವ ವಾಸಸ್ಥಳಗಳನ್ನು ನಗರ ವಾಸಸ್ಥಳಗಳು ಎನ್ನುತ್ತಾರೆ. ನಗರ ವಾಸಸ್ಥಳಗಳು

ಸಾಮಾನ್ಯವಾಗಿ ಕೇಂದ್ರೀಕೃತ ವಾಸಸ್ಥಳಗಳಾಗಿವೆ. ಗ್ರಾಮೀಣ ಪ್ರದೇಶಗಳಿಂದ ತೀರ ಭಿನ್ನವಾದ ಆರ್ಥಿಕ, ಸಾಂಸ್ಕೃತಿಕ ಸನ್ನಿವೇಶಗಳನ್ನು ನಗರ ವಾಸಸ್ಥಳಗಳಲ್ಲಿ ಕಾಣಬಹುದು.

ಗ್ರಾಮೀಣ ಕೃಷಿ ಆರ್ಥಿಕ ವ್ಯವಸ್ಥೆಯಿಂದ ನಗರ ಕೇಂದ್ರೀಕೃತವಾದ ಕೈಗಾರಿಕಾ ವಲಯಗಳ ಕಡೆಗಿರುವ ಜನಸಂಖ್ಯಾ ಬದಲಾವಣೆಯನ್ನು ನಗರೀಕರಣ (Urbanization) ಎಂದು ಕರೆಯುತ್ತಾರೆ. ನಗರೀಕರಣದಿಂದ ನಗರದ ಜನಸಂಖ್ಯೆಯು ಥಕ್ಕನೆ ವರ್ಧಿಸಲು ಆರಂಭವಾಯಿತು.

2011ರ ಜನಗಣತಿಯ ಪ್ರಕಾರ ಭಾರತದಲ್ಲಿನ ನಗರ ಜನಸಂಖ್ಯೆಯು 31.16%. ಭಾರತದ ವಿವಿಧ ರಾಜ್ಯಗಳಲ್ಲಿ ನಗರ ಜನಸಂಖ್ಯೆಯ ಅನುಪಾತವು ವಿಭಿನ್ನವಾಗಿದೆ. 62.17% ನಗರ ಜನಸಂಖ್ಯೆಯಿರುವ ಗೋವಾ ಪ್ರಥಮ ಸ್ಥಾನದಲ್ಲಿದೆ. ಹಿಮಾಚಲಪ್ರದೇಶವು ಅತ್ಯಂತ ಹಿಂದಿದೆ (10.04%). ಕೇರಳದಲ್ಲಿ ನಗರ ಜನಸಂಖ್ಯೆಯ ಪ್ರಮಾಣ 47.72%. ರಾಜಧಾನಿಯಾದ ದೆಹಲಿಯಲ್ಲಿ ನಗರ ಜನಸಂಖ್ಯೆಯ ಪ್ರಮಾಣ 97.50% ಆಗಿದೆ. ಕೇಂದ್ರಾಡಳಿತ ಪ್ರದೇಶಗಳಲ್ಲಿಯೂ ಉನ್ನತ ಪ್ರಮಾಣದ ನಗರ ಜನಸಂಖ್ಯೆಯನ್ನು ಕಾಣಬಹುದು.

ಈ ಕೆಳಗಿನ ಮಾನದಂಡಗಳನ್ನು ಅನುಸರಿಸಿ ಭಾರತದಲ್ಲಿ ವಾಸಸ್ಥಳಗಳಿಗೆ ನಗರ ಪದವಿಯನ್ನು ನೀಡುತ್ತಾರೆ.

- 5000ಕ್ಕಿಂತ ಹೆಚ್ಚು ಜನಸಂಖ್ಯೆಯಿರಬೇಕು.
- ಪ್ರತಿಯೊಂದು ಚದರ ಕಿಲೋಮೀಟರ್‌ನಲ್ಲಿ 400ಕ್ಕಿಂತಲೂ ಹೆಚ್ಚು ಜನಸಾಂದ್ರತೆಯಿರಬೇಕು.
- 75% ಕ್ಕಿಂತ ಹೆಚ್ಚು ಜನರು ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರಬೇಕು.

ಅಲ್ಲದೆ ಮುನಿಸಿಪಾಲಿಟಿ, ಕಾರ್ಪರೇಶನ್ ಮುಂತಾದ ನಗರಾಡಳಿತ ಕೇಂದ್ರ ಹಾಗೂ ಸೈನಿಕ ಕೇಂದ್ರಗಳಾಗಿದ್ದರೆ ಮಾನದಂಡಗಳನ್ನು ಪರಿಗಣಿಸದೆಯೇ ಆ ಪ್ರದೇಶವನ್ನು ನಗರ ಎಂದು ಗುರುತಿಸಬಹುದು.

## ಜನಸಂಖ್ಯೆಯ ಆಧಾರದಲ್ಲಿ ನಗರಗಳ ವರ್ಗೀಕರಣ

ಭಾರತದ ನಗರಗಳನ್ನು ಜನಸಂಖ್ಯೆಯ ಆಧಾರದಲ್ಲಿ ಆರು ವಿಭಾಗಗಳಾಗಿ ವರ್ಗೀಕರಿಸಲಾಗಿದೆ. ತಖ್ತೆಯನ್ನು ಪರಿಶೀಲಿಸಿ ಆ ವರ್ಗೀಕರಣ ಕ್ರಮವನ್ನು ತಿಳಿದುಕೊಳ್ಳಿರಿ.

| ನಗರಗಳ ಪದವಿ | ಜನಸಂಖ್ಯೆ |
|---|---|
| ದರ್ಜೆ I ನಗರ | 1 ಲಕ್ಷಕಿಂತಲೂ ಹೆಚ್ಚು |
| ದರ್ಜೆ II ನಗರ | 50000 –1 ಲಕ್ಷದವರೆಗೆ |
| ದರ್ಜೆ III ನಗರ | 20000 - 50000 |
| ದರ್ಜೆ IV ನಗರ | 10000 - 20000 |
| ದರ್ಜೆ V ನಗರ | 5000 - 10000 |
| ದರ್ಜೆ VI ನಗರ | 5000 ಕ್ಕಿಂತ ಕಡಿಮೆ |

(Census 2001)

ಜನಸಂಖ್ಯೆಯ ಆಧಾರದಲ್ಲಿ ನಗರಗಳನ್ನು ವಿವಿಧ ಹೆಸರಿನಿಂದ ಕರೆಯುತ್ತಾರೆ.

**ನಗರಗಳು**

**ಪಟ್ಟಣ (Town)**

ಒಂದು ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆಯಿರುವ ನಗರಗಳು




**ಬೃಹತ್ ನಗರ (Megacity)**

ಅನೇಕ ನಗರಗಳು ಸೇರಿ ರೂಪುಗೊಳ್ಳುವ 50 ಲಕ್ಷಕ್ಕಿಂತಲೂ ಹೆಚ್ಚು ಜನಸಂಖ್ಯೆಯಿರುವ ನಗರ ಸಮುಚ್ಚಯ



**ನಗರ (City)**

ಒಂದು ಲಕ್ಷ ಮತ್ತು ಹತ್ತು ಲಕ್ಷದ ನಡುವೆ ಜನಸಂಖ್ಯೆಯಿರುವ ನಗರಗಳು



**ಮೆಟ್ರೋಪೊಲಿಸ್ ನಗರ (Metropolis)**


ಹತ್ತುಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆಯಿರುವ ಮಹಾ ನಗರಗಳು



ಚಿತ್ರ 8.8

ಭೂಪಟವನ್ನು (ಚಿತ್ರ 8.8) ನಿರೀಕ್ಷಣೆ ಮಾಡಿ ಭಾರತದಲ್ಲಿರುವ ಮೆಟ್ರೋಪೊಲಿಟನ್ ನಗರಗಳನ್ನು ಕಂಡುಕೊಳ್ಳಿರಿ. ಇವುಗಳಲ್ಲಿ ಮೆಗಾನಗರ ಎಂಬ ಪದವಿಯನ್ನು ಯಾವ ನಗರಗಳಿಗೆ ನೀಡಬಹುದು? ಜನಸಂಖ್ಯೆಯ ಆಧಾರದಲ್ಲಿ ಮೆಗಾನಗರಗಳನ್ನು ಆರಿಸಿ ಬರೆಯಿರಿ.






ಚಿತ್ರ 8.8

## ಸೇವೆಯ ಆಧಾರದಲ್ಲಿ ನಗರಗಳ ವರ್ಗೀಕರಣ

ಸೇವೆಗಳ ಆಧಾರದಲ್ಲಿಯೂ ನಗರಗಳನ್ನು ವರ್ಗೀಕರಿಸಬಹುದು. ಭಾರತದಲ್ಲಿರುವ ವಿವಿಧ ಸೇವಾ ನಗರಗಳನ್ನು ಪಟ್ಟಿಯಿಂದ ತಿಳಿದುಕೊಂಡು ಪ್ರತಿಯೊಂದು ವಿಭಾಗಕ್ಕೆ ಇನ್ನೂ ಹೆಚ್ಚಿನ ಉದಾಹರಣೆಗಳನ್ನು ಚರ್ಚೆಯ ಮೂಲಕ ಕಂಡುಕೊಳ್ಳಿರಿ.

**ನಗರಗಳು**

↓

**ಸೇವೆಗಳ ಆಧಾರದಲ್ಲಿ**

| ಆಡಳಿತ | ಉದ್ದಿಮೆ | ಶಿಕ್ಷಣ | ಸುಖವಾಸ | ಧಾರ್ಮಿಕ/ಸಾಂಸ್ಕೃತಿಕ |
|---|---|---|---|---|
| ♦ ಗಾಂಧೀನಗರ | ♦ ಹೂಗ್ಲಿ | ♦ ಅಲೀಗಢ್ | ♦ ನೈನಿತಾಲ್ | ♦ ಹರಿದ್ವಾರ |
| ♦ ಶ್ರೀನಗರ | ♦ ಕೊಯಂಬತ್ತೂರು | ♦ | ♦ ಸಿಮ್ಲಾ | ♦ ಮಧುರೈ |
| ♦ | ♦ | ♦ | ♦ | ♦ |
| ♦ | ♦ | ♦ | ♦ | ♦ |

## ನಗರಗಳು ಎದುರಿಸುತ್ತಿರುವ ಸಮಸ್ಯೆಗಳು



ಚಿತ್ರ 8.9

ಗ್ರಾಮಗಳಿಂದ ನಗರಗಳಿಗೆ ವಲಸೆಯ ಪ್ರಮಾಣವು ಹತ್ತುಮಡಿ ಹೆಚ್ಚಾಗಿದೆ. ಬೃಹತ್ ನಗರಗಳಲ್ಲಿ ಅಲ್ಲಿ ಇರಬಹುದಾದುದಕ್ಕಿಂತಲೂ ಅಧಿಕ ಜನ ವಾಸಿಸುತ್ತಿದ್ದಾರೆ. ನಗರೀಕರಣದಿಂದ ಹಲವಾರು ಸಮಸ್ಯೆಗಳು ಉಂಟಾಗುತ್ತವೆ. ಅವುಗಳು ಯಾವುವು ಎಂದು ಕಂಡುಕೊಳ್ಳಿರಿ. ಚಿತ್ರಗಳನ್ನು ನೋಡಿರಿ (ಚಿತ್ರ 8.9). ನಗರಗಳು ಎದುರಿಸುವ ಮುಖ್ಯ ಸಮಸ್ಯೆಗಳನ್ನು ನೀವು ತಿಳಿದಿರಬಹುದು. ಈ ರೀತಿಯ ಮತ್ತಷ್ಟು ಸಮಸ್ಯೆಗಳನ್ನು ಕಂಡುಕೊಳ್ಳಿರಿ.

- ♦ ಕೊಳಚೆ ಪ್ರದೇಶ
- ♦ ಸಾರಿಗೆ ಸಮಸ್ಯೆಗಳು
- ♦ ಮಾಲಿನ್ಯ
- ♦

ಭಾರತವನ್ನೂ ಒಳಗೊಂಡಂತೆ ಅಭಿವೃದ್ಧಿಹೊಂದುತ್ತಿರುವ ದೇಶಗಳಲ್ಲಿ ನಗರೀಕರಣವು ಅತ್ಯಂತ ವೇಗದಲ್ಲಿ ನಡೆಯುತ್ತದೆ. ನಗರೀಕರಣವು ಉಂಟುಮಾಡುವ ಸಮಸ್ಯೆಗಳನ್ನು ತಿಳಿದುಕೊಂಡಿರಲ್ಲವೇ. ಪರಿಹಾರಮಾರ್ಗಗಳನ್ನು ಸೂಚಿಸಿರಿ.

- ನಗರ ಯೋಜನೆ
- ತ್ಯಾಜ್ಯ ನಿರ್ವಹಣೆ
- 

'ನಗರಗಳು ಎದುರಿಸುವ ಪ್ರಧಾನ ಸಮಸ್ಯೆಗಳನ್ನು ಸರಳಗೊಳಿಸುವ ಮಾರ್ಗಗಳು' ಎಂಬ ವಿಷಯದಲ್ಲಿ ಸೆಮಿನಾರ್ ಪ್ರಬಂಧವನ್ನು ಸಿದ್ಧಪಡಿಸಿರಿ.

ಜನಸಂಖ್ಯೆಗೆ ಸಂಬಂಧಿತ ಲೆಕ್ಕಗಳ ಪ್ರಾಧಾನ್ಯವು ಈಗ ಅರ್ಥವಾಯಿತಲ್ಲವೇ. ಪ್ರಕೃತಿ ಮತ್ತು ಮಾನವನ ನಡುವಿನ ಸಂಬಂಧದ ಸಮತೋಲನವನ್ನು ಇಟ್ಟುಕೊಂಡರೆ ಮಾತ್ರವೇ ಮಾನವನ ಅಭಿವೃದ್ಧಿ ಸಾಧ್ಯವಾಗಬಹುದು.

## ಪ್ರಧಾನ ಕಲಿಕಾ ಸಾಧನೆಗಳಲ್ಲಿ ಒಳಪಡುವವುಗಳು

- ಜನಸಂಖ್ಯಾ ಹಂಚಿಕೆಯ ಮೇಲೆ ಪ್ರಭಾವ ಬೀರುವ ಘಟಕಗಳನ್ನು ವಿಶದೀಕರಿಸುತ್ತಾರೆ.
- ಜನಸಾಂದ್ರತೆಯ ಆಧಾರದಲ್ಲಿ ರಾಜ್ಯಗಳನ್ನು ವಿಂಗಡಿಸಲು ಸಾಧ್ಯವಾಗುತ್ತದೆ.
- ಭಾರತದಲ್ಲಿ ಗ್ರಾಮೀಣ ವಾಸಸ್ಥಳಗಳು ಮತ್ತು ನಗರ ವಾಸಸ್ಥಳಗಳನ್ನು ಹೋಲಿಸಿ ವ್ಯತ್ಯಾಸವನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ.
- ವಿವಿಧ ರೀತಿಯ ವಾಸಸ್ಥಳಗಳ ಮಾದರಿಯನ್ನು ಚಿತ್ರೀಕರಿಸಲು ಸಾಧ್ಯವಾಗುತ್ತದೆ.
- ವಲಸೆಗೆ ಕಾರಣಗಳನ್ನು ಕಂಡುಕೊಂಡು, ಅವುಗಳನ್ನು ಆಕರ್ಷಕ ಮತ್ತು ಅನಿವಾರ್ಯ ವಲಸೆಗಳೆಂದು ವರ್ಗೀಕರಿಸುತ್ತಾರೆ.
- ನಗರ ವಾಸಸ್ಥಳಗಳ ಪ್ರಧಾನ ಸಮಸ್ಯೆಗಳನ್ನು ಕಂಡುಕೊಂಡು ಅವುಗಳನ್ನು ಸರಳಗೊಳಿಸಲು ಸೂಚನೆಗಳನ್ನು ನೀಡುತ್ತಾರೆ.
- ಸೇವೆಗಳ ಆಧಾರದಲ್ಲಿ ಭಾರತದಲ್ಲಿರುವ ನಗರಗಳನ್ನು ವರ್ಗೀಕರಿಸಿ ಪಟ್ಟಿಮಾಡುತ್ತಾರೆ.

## ಮೌಲ್ಯನಿರ್ಣಯ ಮಾಡುವ

- "ಭೂಪ್ರಕೃತಿಯು ಜನಸಂಖ್ಯೆಯ ಹಂಚುವಿಕೆಯ ಮೇಲೆ ಪ್ರಭಾವಬೀರುವ ಪ್ರಧಾನ ಘಟಕ" ಭಾರತದಲ್ಲಿ ಜನಸಂಖ್ಯೆಯ ಹಂಚುವಿಕೆಯ ಆಧಾರದಲ್ಲಿ ಈ ಹೇಳಿಕೆಯನ್ನು ಸ್ಪಷ್ಟಪಡಿಸಿರಿ.
- ಆಕರ್ಷಕ ವಲಸೆಗೆ ಕಾರಣಗಳನ್ನು ಉದಾಹರಣೆ ಸಹಿತವಾಗಿ ವಿವರಿಸಿರಿ.

- ಸೇವೆಗಳ ಆಧಾರದಲ್ಲಿ ಕೆಳಗೆ ನೀಡಿರುವ ನಗರಗಳನ್ನು ವರ್ಗೀಕರಿಸಿ ಪಟ್ಟಿ ತಯಾರಿಸಿರಿ.
    - ತಿರುವನಂತಪುರ
    - ವಾರಣಾಸಿ
    - ಹೂಗ್ಲಿ
    - ಮಧುರೈ
    - ಕೊಯಂಬತ್ತೂರು
    - ನವದೆಹಲಿ



## ಮುಂದುವರಿದ ಚಟುವಟಿಕೆಗಳು

- ನಗರಗಳು ಎದುರಿಸುವ ಸಮಸ್ಯೆಗಳನ್ನು ತಿಳಿಸುವ ಚಿತ್ರಪ್ರದರ್ಶನವನ್ನು ನಡೆಸಿ ಶಾಲೆಯಲ್ಲಿ ಪೋಸ್ಟರ್ ಪ್ರದರ್ಶನವೊಂದನ್ನು ಏರ್ಪಡಿಸಿರಿ.
- 2011ರ ಜನಗಣತಿಯನ್ನು ವಿಶ್ಲೇಷಿಸಿ ಜನಸಂಖ್ಯಾ ವಿವರಣೆಗಳನ್ನು ಗ್ರಾಫ್‌ಗಳು, ಭೂಪಟಗಳು, ತಖ್ತೆಗಳು ಮುಂತಾದವುಗಳ ಮೂಲಕ ಪ್ರಕಟಿಸಿರಿ.



9


# ಆರ್ಥಿಕ ವ್ಯವಸ್ಥೆಗಳು ಮತ್ತು ಆರ್ಥಿಕ ಧೋರಣೆಗಳು



ಚಿತ್ರದಲ್ಲಿ ನೀಡಿರುವ ಭೂಮಿ, ಕಾರ್ಖಾನೆಗಳು, ಸಾರಿಗೆ, ಮಾಹಿತಿ ತಂತ್ರಜ್ಞಾನ ಇತ್ಯಾದಿಗಳು ಸರಕು ಮತ್ತು ಸೇವೆಗಳನ್ನು ಉತ್ಪಾದಿಸುವ ಮತ್ತು ವಿತರಣೆ ಮಾಡುವ ಕೆಲವು ಉಪಾಧಿಗಳಾಗಿವೆ. ಇಂತಹ ಉತ್ಪಾದನ ಉಪಾಧಿಗಳ ಮಾಲಕತ್ವವು ಯಾರದ್ದೆಂದು ನೀವು ಯೋಚಿಸಿದ್ದೀರಾ?

ಉತ್ಪಾದನೆಯ ಉಪಾಧಿಗಳ ಮಾಲಕತ್ವವು ವಿವಿಧ ದೇಶಗಳಲ್ಲಿ ವಿಭಿನ್ನ ರೀತಿಯಲ್ಲಿವೆ. ಕೆಲವು ದೇಶಗಳಲ್ಲಿ ಉತ್ಪಾದನ ಘಟಕಗಳ ಮಾಲಕತ್ವವು ಪ್ರಧಾನವಾಗಿ ಖಾಸಗಿ ವ್ಯಕ್ತಿಗಳ ಕೈಯಲ್ಲಿರುತ್ತದೆ.ಆದರೆ ಇತರ ಕೆಲವು

ದೇಶಗಳಲ್ಲಿ ಇದು ಪ್ರಧಾನವಾಗಿ ಸಾರ್ವಜನಿಕ ವಲಯದಲ್ಲಿರುತ್ತದೆ. ಇನ್ನು ಕೆಲವು ದೇಶಗಳಲ್ಲಿ ಸಾರ್ವಜನಿಕ ವಲಯ ಮತ್ತು ಖಾಸಗಿ ಖಾಸಗಿ ವಲಯಕ್ಕೆ ಸಮಾನವಾದ ಸಹಭಾಗಿತ್ವವಿರುತ್ತದೆ. ಭೂಮಿ, ಬಂಡವಾಳ, ಕಚ್ಚಾವಸ್ತುಗಳು ಮುಂತಾದ ಉತ್ಪಾದನ ಉಪಾಧಿಗಳ ಮಾಲಕತ್ವದ ಆಧಾರದಲ್ಲಿ ಆರ್ಥಿಕ ವ್ಯವಸ್ಥೆಯನ್ನು ಮೂರು ವಿಧಗಳಾಗಿ ವಿಂಗಡಿಸಲಾಗಿದೆ.




ಈ ಅರ್ಥವ್ಯವಸ್ಥೆಯ ವಿಶೇಷತೆಗಳು ಯಾವುವು ಎಂದು ಪರಿಶೀಲಿಸುವ.

## ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆ

ಉತ್ಪಾದನ ಘಟಕಗಳ ಒಡೆತನವು ಖಾಸಗಿ ವ್ಯಕ್ತಿಯ ಅಧೀನದಲ್ಲಿದ್ದು ಲಾಭವು ಪ್ರಧಾನ ಉದ್ದೇಶವಾಗಿದ್ದರೆ ಅಂತಹ ಆರ್ಥಿಕ ವ್ಯವಸ್ಥೆಯನ್ನು ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆ ಎಂದು ಕರೆಯುತ್ತಾರೆ. ಈ ವ್ಯವಸ್ಥೆಯ ಇತರ ವಿಶೇಷತೆಗಳನ್ನು ಕೆಳಗೆ ನೀಡಲಾಗಿದೆ.

- ಉದ್ದಿಮೆಗಾರರಿಗೆ ಯಾವುದೇ ಉತ್ಪನ್ನಗಳನ್ನು ಉತ್ಪಾದಿಸುವ ಸ್ವಾತಂತ್ರ್ಯ.
- ಖಾಸಗಿ ಆಸ್ತಿಯ ಹಕ್ಕು.
- ಲಾಭವನ್ನು ಉದ್ದೇಶವಾಗಿಟ್ಟುಕೊಂಡಿರುವ ಚಟುವಟಿಕೆ.
- ಪರಂಪರಾಗತ ಸೊತ್ತನ್ನು ಕೈ ಬದಲಾಯಿಸುವ ವಿಧಾನ.
- ಬೆಲೆನಿಯಂತ್ರಣವಿಲ್ಲದ ಸ್ವತಂತ್ರ ಮಾರುಕಟ್ಟೆ.
- ಗ್ರಾಹಕರಿಗೆ ಪರಮಾಧಿಕಾರ.
- ಉದ್ದಿಮೆಗಾರರ ನಡುವೆ ಉತ್ಪನ್ನಗಳನ್ನು ಮಾರಾಟ ಮಾಡಲು ಪರಸ್ಪರ ಸ್ಪರ್ಧೆ.

ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯಲ್ಲಿ ಆರ್ಥಿಕ ಚಟುವಟಿಕೆಗಳಲ್ಲಿ ಸರಕಾರದ ಹಸ್ತಕ್ಷೇಪವು ಅತ್ಯಂತ ಪರಿಮಿತವಾಗಿದೆ. ಇಂತಹ ರಾಷ್ಟ್ರಗಳಲ್ಲಿ ಶಾಂತಿಪಾಲನೆ ಮತ್ತು ವಿದೇಶಿ ಆಕ್ರಮಣವನ್ನು ತಡೆಯುವುದು ಸರಕಾರದ ಪ್ರಧಾನ ಜವಾಬ್ದಾರಿಯಾಗಿದೆ. ಇಂತಹ ದೇಶಗಳನ್ನು 'ಪೊಲೀಸ್ ರಾಷ್ಟ್ರ' ಎಂದು ಕರೆಯುತ್ತಿದ್ದರು.

ಆರ್ಥಿಕ ವ್ಯವಸ್ಥೆಯ ಮೂಲಭೂತ ಸಮಸ್ಯೆಗಳ ಕುರಿತು ನೀವು ಹಿಂದಿನ ತರಗತಿಗಳಲ್ಲಿ ಕಲಿತಿರುವಿರಲ್ಲವೇ. ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯಲ್ಲಿ ಏನನ್ನು ಉತ್ಪಾದಿಸಬೇಕು, ಹೇಗೆ ಉತ್ಪಾದಿಸಬೇಕು ಮತ್ತು ಯಾರಿಗಾಗಿ ಉತ್ಪಾದಿಸಬೇಕು ಎಂಬೀ ಮೂಲಭೂತ

ಸಮಸ್ಯೆಗಳಿಗೆ ಮಾರುಕಟ್ಟೆ ವ್ಯವಸ್ಥೆಯ ಮೂಲಕ ಪರಿಹಾರವನ್ನು ಕಂಡುಕೊಳ್ಳಲಾಗುತ್ತದೆ.

ಸರಕು ಮತ್ತು ಸೇವೆಗಳ ಬೆಲೆ ಹೆಚ್ಚಾಗುವಾಗ ಉದ್ದಿಮೆಗಳು ಉತ್ಪಾದನೆಯನ್ನು ಹೆಚ್ಚಿಸಿ ಹೆಚ್ಚು ಲಾಭವನ್ನು ಗಳಿಸಲು ಪ್ರಯತ್ನಿಸುತ್ತವೆ. ಅಂದರೆ ವಸ್ತುಗಳ ಬೆಲೆ ಹೆಚ್ಚಾಗುವಾಗ ಸಾಮಾನ್ಯವಾಗಿ ಬೇಡಿಕೆಯು ಕಡಿಮೆಯಾಗುವುದರಿಂದ ಉದ್ದಿಮೆಗಳು ಉತ್ಪಾದನೆಯನ್ನು ಕಡಿಮೆ ಮಾಡುತ್ತವೆ. ಅದೇ ರೀತಿಯಲ್ಲಿ ಸರಕು ಮತ್ತು ಸೇವೆಗಳ ಬೆಲೆಯು ಕಡಿಮೆಯಾಗುವಾಗ ಉದ್ದಿಮೆಗಳು ಉತ್ಪಾದನೆಯನ್ನು ಕಡಿಮೆ ಮಾಡಲು ಪ್ರಯತ್ನಿಸುತ್ತವೆ. ಅಂದರೆ, ವಸ್ತುಗಳ ಬೆಲೆಯು ಕಡಿಮೆಯಾದಾಗ ಬೇಡಿಕೆಯು ಹೆಚ್ಚಾಗಿ ಉದ್ದಿಮೆಗಳು ಆ ವಸ್ತುಗಳ ಉತ್ಪಾದನೆಯನ್ನು ಹೆಚ್ಚಿಸುತ್ತವೆ.

ಈ ರೀತಿಯಲ್ಲಿ ಬೆಲೆಯಲ್ಲಿ ಉಂಟಾಗುವ ಏರಿಳಿತಗಳು, ಉತ್ಪಾದಕರು ಮತ್ತು ಗ್ರಾಹಕರ ಮೇಲೆ ಪ್ರಭಾವವನ್ನು ಬೀರುವ ಮೂಲಕ ಸರಕು ಮತ್ತು ಸೇವೆಗಳ ಪೂರೈಕೆಯು ನಿಯಂತ್ರಿಸಲ್ಪಡುವುದನ್ನು ಬೆಲೆ ನಿಯಂತ್ರಣ ವ್ಯವಸ್ಥೆ ಎನ್ನುತ್ತಾರೆ.

*ಉತ್ಪನ್ನಗಳ ಬೆಲೆಯು ಹೆಚ್ಚಾಗುವಾಗ ಉತ್ಪಾದಕರು ಉತ್ಪಾದನೆಯನ್ನು ಹೆಚ್ಚಿಸುವುದಕ್ಕೂ ಉತ್ಪನ್ನಗಳ ಬೆಲೆಯು ಕಡಿಮಯಾಗುವಾಗ ಉತ್ಪಾದನೆಯನ್ನು ಕಡಿಮೆ ಮಾಡುವುದಕ್ಕೂ ಉದಾಹರಣೆಗಳನ್ನು ಕಂಡುಹಿಡಿಯಿರಿ.*



ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯ ಕೆಲವು ವಿಶೇಷತೆಗಳು ಸಮಸ್ಯೆಯನ್ನು ಉಂಟುಮಾಡುತ್ತವೆ. ಉದಾಹರಣೆಗೆ ಖಾಸಗಿ ಸೊತ್ತಿನ ಹಕ್ಕು, ಪರಂಪರಾಗತ ಸೊತ್ತನ್ನು ಕೈಬದಲಾಯಿಸುವ ಹಕ್ಕು ಇತ್ಯಾದಿಗಳು ಕೆಲವೇ ವ್ಯಕ್ತಿಗಳ ಕೈಯಲ್ಲಿ ಸಂಪತ್ತು ಕೇಂದ್ರೀಕೃತವಾಗಲು ಕಾರಣವಾಗುತ್ತವೆ. ಇದು ಸಮಾಜದಲ್ಲಿ ಆರ್ಥಿಕ ಅಂತರವು ಹೆಚ್ಚಾಗಲು ಕಾರಣವಾಗುತ್ತದೆ.

*ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯ ವಿಶೇಷತೆಗಳನ್ನು ಚರ್ಚಿಸಿ, ಅದರ ಗುಣದೋಷಗಳ ಕುರಿತು ಟಿಪ್ಪಣಿ ತಯಾರಿಸಿರಿ.*



ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯಲ್ಲಿ ದೋಷಗಳಿವೆಯೆಂಬುದು ತಿಳಿಯಿತಲ್ಲವೇ. ಸಮಾಜವಾದಿ ಆರ್ಥಿಕ ವ್ಯವಸ್ಥೆಯು ಈ ದೋಷಗಳನ್ನು ಪರಿಹರಿಸಲು ರೂಪುಗೊಂಡಿವೆ.

## ಸಮಾಜವಾದಿ ಆರ್ಥಿಕ ವ್ಯವಸ್ಥೆ

ಉತ್ಪಾದನ ಘಟಕಗಳು ಸಾರ್ವಜನಿಕ ಒಡೆತನದಲ್ಲಿದ್ದು ಕೇಂದ್ರೀಕೃತ ಯೋಜನೆಯ ಆಧಾರದಲ್ಲಿ ಕಾರ್ಯನಿರ್ವಹಿಸುವ ಆರ್ಥಿಕ ವ್ಯವಸ್ಥೆಯನ್ನು ಸಮಾಜವಾದಿ ಆರ್ಥಿಕ ವ್ಯವಸ್ಥೆ ಎನ್ನುತ್ತಾರೆ. ಈ ವ್ಯವಸ್ಥೆಯ ಇತರ ವಿಶೇಷತೆಗಳನ್ನು ಪರಿಶೀಲಿಸುವ.

- ಸಮಾಜ ಕ್ಷೇಮವನ್ನು ಉದ್ದೇಶವಾಗಿಟ್ಟುಕೊಂಡಿರುವ ಚಟುವಟಿಕೆ.
- ಖಾಸಗಿ ಉದ್ದಿಮೆಗಳ ಅಭಾವ.
- ಖಾಸಗಿ ಸೊತ್ತಿನ ಹಕ್ಕು ಹಾಗೂ ಪಂಪರಾಗತ ಸೊತ್ತು ಕೈಬದಲಾವಣೆಯ ಹಕ್ಕುಗಳ ಅಭಾವ.
- ಆರ್ಥಿಕ ಸಮಾನತೆ.

ಸಮಾಜವಾದಿ ಆರ್ಥಿಕ ವ್ಯವಸ್ಥೆಯಲ್ಲಿ ಆರ್ಥಿಕ ವ್ಯವಸ್ಥೆಯ ಮೂಲಭೂತ ಸಮಸ್ಯೆಗಳು ಯೋಜನೆಯ ಮೂಲಕ ಪರಿಹರಿಸಲ್ಪಡುತ್ತವೆ. ಏನನ್ನು ಉತ್ಪಾದಿಸಬೇಕು, ಹೇಗೆ ಉತ್ಪಾದಿಸಬೇಕು, ಯಾರಿಗಾಗಿ ಉತ್ಪಾದಿಸಬೇಕು ಎಂಬುದರ ಕುರಿತು ಯೋಜನೆಯನ್ನು ತಯಾರಿಸಿ, ಸಮಾಜ ಕ್ಷೇಮದ ಉದ್ದೇಶದೊಂದಿಗೆ ಉತ್ಪಾದನೆ ಮತ್ತು ವಿತರಣೆಯನ್ನು ನಡೆಸಲಾಗುತ್ತದೆ. ದೇಶಕ್ಕೆ ಅಗತ್ಯವಿರುವ ಸರಕು ಮತ್ತು ಸೇವೆಗಳನ್ನು ಗಣನೆಮಾಡಿ ಅದಕ್ಕೆ ಅನುಗುಣವಾಗಿ ಉತ್ಪಾದನೆಯನ್ನು ನಿಯಂತ್ರಿಸಲಾಗುತ್ತದೆ. ಬೆಲೆಯನ್ನು ಮೊದಲೇ ನಿಶ್ಚೈಸುವುದರಿಂದ ಸಮಾಜವಾದಿ ಆರ್ಥಿಕ ವ್ಯವಸ್ಥೆಯಲ್ಲಿ ಬೆಲೆ ನಿಯಂತ್ರಣ ವ್ಯವಸ್ಥೆಗೆ ಪ್ರಾಧಾನ್ಯವಿಲ್ಲ.

ಸಮಾಜವಾದಿ ಆರ್ಥಿಕ ವ್ಯವಸ್ಥೆಯಲ್ಲಿಯೂ ದೋಷಗಳಿವೆ. ಸಾರ್ವಜನಿಕ ವಲಯಕ್ಕೆ ಅರ್ಥ ವ್ಯವಸ್ಥೆಯ ಎಲ್ಲ ಕ್ಷೇತ್ರಗಳಲ್ಲಿ ಬಂಡವಾಳವನ್ನು ಹೂಡುವ ಸಾಮರ್ಥ್ಯವು ಇರುವುದಿಲ್ಲ. ಇದು ಆರ್ಥಿಕ ಅಭಿವೃದ್ಧಿಯ ಮೇಲೆ ಋಣಾತ್ಮಕ ಪರಿಣಾಮವನ್ನು ಬೀರುತ್ತದೆ. ಖಾಸಗಿ ಆಸ್ತಿಯ ಹಕ್ಕು, ಪರಂಪರಾಗತ ಸೊತ್ತನ್ನು ಕೈಬದಲಾಯಿಸುವ ಹಕ್ಕು ಇಲ್ಲದಿರುವುದರಿಂದ ಜನರು ಹೆಚ್ಚು ಶ್ರಮವಹಿಸಲು ಆಸಕ್ತಿ ತೋರಿಸಬೇಕೆಂದಿಲ್ಲ. ಮಾರುಕಟ್ಟೆಯಲ್ಲಿ ಗ್ರಾಹಕರಿಗೆ ವಸ್ತುಗಳನ್ನು ಆಯ್ಕೆ ಮಾಡುವ ಸ್ವಾತಂತ್ರ್ಯವು ಕಡಿಮೆಯಾಗಿರುತ್ತದೆ.



*ಬಂಡವಾಳಶಾಹಿ ಮತ್ತು ಸಮಾಜವಾದಿ ಆರ್ಥಿಕ ವ್ಯವಸ್ಥೆಯ ವಿಶೇಷತೆಗಳನ್ನು ಹೋಲಿಸಿ ಟಿಪ್ಪಣಿ ತಯಾರಿಸಿರಿ.*

## ಮಿಶ್ರ ಆರ್ಥಿಕ ವ್ಯವಸ್ಥೆ

ಮಿಶ್ರ ಆರ್ಥಿಕ ವ್ಯವಸ್ಥೆಯು ಬಂಡವಾಳಶಾಹಿ ಮತ್ತು ಸಮಾಜವಾದಿ ಆರ್ಥಿಕ ವ್ಯವಸ್ಥೆಗಳ ಕೆಲವು ವಿಶೇಷತೆಗಳು ಸೇರಿಕೊಂಡಿರುವ ಆರ್ಥಿಕ ವ್ಯವಸ್ಥೆಯಾಗಿದೆ. ಭಾರತದಲ್ಲಿ ಮಿಶ್ರ ಆರ್ಥಿಕ ವ್ಯವಸ್ಥೆಯು ಅಸ್ತಿತ್ವದಲ್ಲಿದೆ. ಈ ವ್ಯವಸ್ಥೆಯ ವಿಶೇಷತೆಗಳನ್ನು ಕೆಳಗೆ ನೀಡಲಾಗಿದೆ.

- ಸಾರ್ವಜನಿಕ ಮತ್ತು ಖಾಸಗಿ ವಲಯದ ಇರುವಿಕೆ.
- ಯೋಜನೆ ಆಧಾರಿತವಾದ ಕಾರ್ಯನಿರ್ವಹಣೆ.
- ಕ್ಷೇಮ ಚಟುವಟಿಕೆಗಳಿಗೆ ಹೆಚ್ಚಿನ ಪರಿಗಣನೆ.
- ಖಾಸಗಿ ಆಸ್ತಿಯ ಹಕ್ಕು ಮತ್ತು ಆರ್ಥಿಕ ನಿಯಂತ್ರಣವು ಒಂದೇ ರೀತಿಯಲ್ಲಿರುತ್ತದೆ.



*'ಬಂಡವಾಳಶಾಹಿ ಮತ್ತು ಸಮಾಜವಾದಿ ಆರ್ಥಿಕ ವ್ಯವಸ್ಥೆಯ ವಿಶೇಷತೆಗಳು ಮಿಶ್ರ ಆರ್ಥಿಕವ್ಯವಸ್ಥೆಯಲ್ಲಿ ಸೇರಿಕೊಂಡಿವೆ' ಎಂಬ ಹೇಳಿಕೆಯನ್ನು ಸ್ಪಷ್ಟಪಡಿಸಿರಿ.*

ಆಧುನಿಕ ಜಗತ್ತಿನಲ್ಲಿ ಬಂಡವಾಳಶಾಹಿ ಮತ್ತು ಸಮಾಜವಾದಿ ಆರ್ಥಿಕ ವ್ಯವಸ್ಥೆಯನ್ನು ಪೂರ್ಣಾರ್ಥದಲ್ಲಿ ಕಾಣಲು ಸಾಧ್ಯವಿಲ್ಲ. ಅಮೇರಿಕಾ, ಇಂಗ್ಲೆಂಡ್‌ನಂತಹ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯ ದೇಶಗಳು ಸರಕಾರದ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುತ್ತವೆ. ಸಮಾಜವಾದಿ ಆರ್ಥಿಕ ವ್ಯವಸ್ಥೆಯಿರುವ ದೇಶಗಳೆಂದು ಪರಿಗಣಿಸುವ ಕ್ಯೂಬ ಮತ್ತು

ಚೀನಾದಲ್ಲಿ ಖಾಸಗಿ ಮಾಲಕತ್ವದ ಹಕ್ಕು, ಸ್ವತಂತ್ರ ಮಾರುಕಟ್ಟೆ ವ್ಯವಸ್ಥೆಯನ್ನು ಅಂಗೀಕರಿಸಲಾಗಿದೆ. ಅಂದರೆ ಪ್ರತಿಯೊಂದು ದೇಶಗಳ ಆರ್ಥಿಕ ಧೋರಣೆಯಲ್ಲಿ ವಿವಿಧ ರೀತಿಯ ಬದಲಾವಣೆಗಳು ಸಂಭವಿಸುತ್ತಲೇ ಇರುತ್ತದೆ.

## ಬದಲಾಗುತ್ತಿರುವ ಆರ್ಥಿಕ ಧೋರಣೆಗಳು

ಆರ್ಥಿಕ ಅಭಿವೃದ್ಧಿಯ ಉದ್ದೇಶದಿಂದ ಸಾಮಾನ್ಯವಾಗಿ ಹೆಚ್ಚಿನ ದೇಶಗಳು ಖಾಸಗಿ ಉದ್ದಿಮೆಗಳನ್ನು ಪ್ರೋತ್ಸಾಹಿಸುವುದನ್ನು ನಾವಿಂದು ಕಾಣುತ್ತಿದ್ದೇವೆ. ಖಾಸಗಿ ಉದ್ದಿಮೆಗಾರರನ್ನು ಆಹ್ವಾನಿಸಲು ಮತ್ತು ವಿದೇಶಿ ಬಂಡವಾಳವನ್ನು ಆಕರ್ಷಿಸಲು ಸರಕಾರಗಳು ತಯಾರಾಗುತ್ತಿವೆ. ಈ ರೀತಿಯ ಆರ್ಥಿಕ ಧೋರಣೆಗಳ ಪರಿಣಾಮವಾಗಿ ಮೂಲಧನ, ಸರಕು ಮತ್ತು ಸೇವೆಗಳು, ತಾಂತ್ರಿಕತೆ, ನೈಪುಣ್ಯ ಇತ್ಯಾದಿಗಳು ದೇಶಗಳ ಮೇರೆಗಳನ್ನು ದಾಟಿ ಪ್ರವಹಿಸುತ್ತಿವೆ. ನವೀನ ಮತ್ತು ವೈವಿಧ್ಯಮಯವಾದ ಉತ್ಪನ್ನಗಳನ್ನು ನಾವಿಂದು ಮಾರುಕಟ್ಟೆಯಲ್ಲಿ ಧಾರಾಳವಾಗಿ ಕಾಣುತ್ತೇವೆ. ಉದಾಹರಣೆಗೆ ಕೇವಲ ಕೆಲವೇ ಮಾದರಿಯ ಕಾರುಗಳು ಮಾತ್ರವಿದ್ದ ಭಾರತದ ಕಾರು ಮಾರುಕಟ್ಟೆಯಲ್ಲಿ ಇಂದು ಅನೇಕ ಕಂಪನಿಗಳ ವಿವಿಧ ಮಾದರಿಗಳ ಕಾರುಗಳನ್ನು ನೋಡಲು ಸಾಧ್ಯವಿದೆ. ಚರ್ಚೆಯ ಮೂಲಕ ಇತರ ಉದಾಹರಣೆಗಳನ್ನು ಕಂಡುಕೊಳ್ಳುವಿರಲ್ಲವೇ?



ವಿವಿಧ ರೀತಿಯ ದೂರವಾಣಿಗಳು

ಪ್ರಬಲವಾದ ಸಾರ್ವಜನಿಕ ವಲಯ, ನಿಯಂತ್ರಿತ ವಿದೇಶ ವ್ಯಾಪಾರವು ಜಾರಿಯಲ್ಲಿದ್ದ ಭಾರತದಲ್ಲಿಯೂ ಆರ್ಥಿಕ ಧೋರಣೆಗಳಲ್ಲಿ ಬದಲಾವಣೆ ಉಂಟಾಗಿದೆ. ಹೆಚ್ಚಿನ ವಿದೇಶಿ ಬಂಡವಾಳವನ್ನು ಆಕರ್ಷಿಸಲು ಹಾಗೂ ವಿದೇಶೀ ವ್ಯಾಪಾರವನ್ನು ಬಲಪಡಿಸಲು ಪ್ರಯತ್ನಗಳುಂಟಾದುವು. ಉದಾರೀಕರಣ (Liberalization), ಖಾಸಗೀಕರಣ (Privatization) ಮತ್ತು ಜಾಗತೀಕರಣ (Globalization) ಎಂಬುದು 1991ರಲ್ಲಿ ಆರಂಭವಾದ ಧೋರಣೆಯಲ್ಲುಂಟಾದ ಬದಲಾವಣೆಯ ತಿರುಳಾಗಿದೆ. ಇವುಗಳಲ್ಲಿ ಪ್ರತಿಯೊಂದನ್ನೂ ಸಂಕ್ಷಿಪ್ತವಾಗಿ ಪರಿಶೀಲಿಸೋಣ.

## ಉದಾರೀಕರಣ

ದೇಶದ ಆರ್ಥಿಕ ಚಟುವಟಿಕೆಗಳ ಮೇಲಿರುವ ಸರಕಾರದ ನಿಯಂತ್ರಣ ಮತ್ತು ಪ್ರಭಾವವನ್ನು ಪರಿಮಿತಗೊಳಿಸುವುದು ಉದಾರೀಕರಣದ ಉದ್ದೇಶವಾಗಿದೆ. ಉದಾರೀಕರಣ ಕ್ರಮವು ಭಾರತದಲ್ಲಿ 1985ರಲ್ಲಿ ಆರಂಭಗೊಂಡಿತು. ಉದಾರೀಕರಣದ ಪರಿಣಾಮವಾಗಿ ಅರ್ಥವ್ಯವಸ್ಥೆಯಲ್ಲಿ ಈ ಕೆಳಗಿನ ಬದಲಾವಣೆಗಳು ಉಂಟಾದುವು.

- ಕೈಗಾರಿಕೆಗಳನ್ನು ಆರಂಭಿಸುವುದಕ್ಕೆ ಜಾರಿಯಲ್ಲಿದ್ದ ನಿಯಂತ್ರಣಗಳನ್ನು ಸರಳಗೊಳಿಸಲಾಯಿತು.

### ವಿದೇಶೀ ನಾಣ್ಯ ಮುಗ್ಗಟ್ಟು

ಪ್ರತಿಯೊಂದು ದೇಶಕ್ಕೂ ವಿದೇಶೀ ನಾಣ್ಯದ ಭದ್ರತಾ ನಿಕ್ಷೇಪವಿದೆ. ಅಂತಾರಾಷ್ಟ್ರೀಯ ವ್ಯಾಪಾರಕ್ಕೆ ಉಪಯೋಗಿಸಲು ಅಮೇರಿಕಾದ ಡಾಲರ್, ಯೂರೋ, ಪೌಂಡ್ ಮೊದಲಾದ ನಾಣ್ಯಗಳನ್ನು ಪ್ರಧಾನವಾಗಿ ಭದ್ರತಾ ನಿಕ್ಷೇಪವು ಒಳಗೊಂಡಿರುತ್ತದೆ. ಸಾಮಾನ್ಯವಾಗಿ ಹತ್ತರಿಂದ ಹನ್ನೆರಡು ವಾರಗಳವರೆಗಿನ ವಿದೇಶಿ ವ್ಯಾಪಾರಕ್ಕೆ ಅಗತ್ಯವಾದ ವಿದೇಶಿ ನಾಣ್ಯದ ಭದ್ರತಾ ನಿಕ್ಷೇಪವು ಇರಬೇಕು. ಆದರೆ 1991ರಲ್ಲಿ ಕೇವಲ ಎರಡು ವಾರಗಳವರೆಗಿನ ವಿದೇಶಿ ವ್ಯಾಪಾರಕ್ಕೆ ಅಗತ್ಯವಾದ ವಿದೇಶಿ ನಾಣ್ಯಗಳ ಭದ್ರತಾ ನಿಕ್ಷೇಪ ಮಾತ್ರವೇ ಭಾರತದ ಬಳಿಯಿತ್ತು. ಹೆಚ್ಚಿನ ವಿದೇಶಿ ಸಾಲವನ್ನು ಪಡೆಯುವುದು, ವಿದೇಶಿ ಬಂಡವಾಳವನ್ನು ಆಕರ್ಷಿಸುವುದು, ವಿದೇಶಿ ವ್ಯಾಪಾರವನ್ನು ಬಲಪಡಿಸುವುದು ಮೊದಲಾದ ಕಾರ್ಯಚಟುವಟಿಕೆಗಳ ಮೂಲಕ ಈ ಸಂದಿಗ್ಧತೆಯಿಂದ ಪಾರಾಗಲು ಸರಕಾರವು ಪ್ರಯತ್ನಿಸಿತು.

- ಆಮದಿನ ಮೇಲಿನ ಸುಂಕವನ್ನು ಕಡಿಮೆ ಮಾಡಲಾಯಿತು.
- ವಿದೇಶಿ ವಿನಿಮಯ ನಿಯಮಗಳಲ್ಲಿ ಬದಲಾವಣೆಯನ್ನು ಮಾಡಲಾಯಿತು.
- ಮಾರುಕಟ್ಟೆ ನಿಯಂತ್ರಣವನ್ನು ಹಿಂತೆಗೆಯಲಾಯಿತು.
- ಆರ್ಥಿಕತೆಯ ಹೆಚ್ಚಿನ ವಲಯಗಳಲ್ಲಿ ವಿದೇಶಿ ನಿಕ್ಷೇಪಕ್ಕೆ ಅನುಮತಿ ನೀಡಲಾಯಿತು.
- ಮೂಲಭೂತ ಸೌಕರ್ಯಗಳು, ಅಭಿವೃದ್ಧಿ ಮತ್ತು ಮೂಲಭೂತ ಉದ್ದಿಮೆರಂಗದಲ್ಲಿದ್ದ ಸರಕಾರದ ಪಾಲುಗಾರಿಕೆಯು ಕಡಿಮೆಯಾಯಿತು.

ಅಲ್ಲದೆ ಉದಾರೀಕರಣದ ಭಾಗವಾಗಿ ಕೆಲವೊಂದು ವಲಯಗಳಲ್ಲಿ ಸರಕಾರದ ಹಸ್ತಕ್ಷೇಪವು ಕಡಿಮೆಯಾಯಿತು. ಇದರೊಂದಿಗೆ ಖಾಸಗಿ ವಲಯದ ಪ್ರಾಧಾನ್ಯವು ಹೆಚ್ಚಾಯಿತು.

## ಖಾಸಗೀಕರಣ

ಭಾರತದಲ್ಲಿ 1991ರ ನಂತರ ಅನೇಕ ಸಾರ್ವಜನಿಕ ಸಂಸ್ಥೆಗಳನ್ನು ಖಾಸಗೀಕರಣಗೊಳಿಸಲಾಯಿತು. ಮಾರುತಿ ಉದ್ಯೋಗ್ ಲಿಮಿಟೆಡ್, ಮೋಡರ್ನ್ ಫುಡ್ ಇಂಡಸ್ಟ್ರೀಸ್ ಲಿಮಿಟೆಡ್ ಇತ್ಯಾದಿಗಳು ಖಾಸಗೀಕರಣಗೊಂಡ ಸಂಸ್ಥೆಗಳಿಗೆ ಉದಾಹರಣೆಗಳಾಗಿವೆ. ಹಲವು ಸಾರ್ವಜನಿಕ ಸಂಸ್ಥೆಗಳ ಷೇರುಗಳನ್ನು ಮಾರಾಟ ಮಾಡಲಾಯಿತು. ಕೇಂದ್ರ ಸರಕಾರದ ವಿತ್ತ ಸಚಿವಾಲಯದ ಅಧೀನದಲ್ಲಿರುವ ಡಿಪಾರ್ಟ್‌ಮೆಂಟ್ ಆಫ್ ಡಿಸ್ ಇನ್‌ವೆಸ್ಟ್‌ಮೆಂಟ್ ಎಂಬ ಇಲಾಖೆಯು ಸಾರ್ವಜನಿಕ ಸಂಸ್ಥೆಗಳ ಖಾಸಗೀಕರಣ ಮತ್ತು ಅವುಗಳ ಷೇರುಗಳ ಮಾರಾಟವನ್ನು ನಿರ್ವಹಿಸುತ್ತದೆ.

ಸರಕಾರದ ಪಾಲ್ಗೊಳ್ಳುವಿಕೆ ಮಾತ್ರವಿದ್ದ ಹಲವು ಕ್ಷೇತ್ರಗಳಲ್ಲಿ ಖಾಸಗಿ ವಲಯಕ್ಕೂ ಅನುಮತಿಯನ್ನು ನೀಡಲಾಗಿದೆ. ಸಾರಿಗೆ, ವಿದ್ಯುತ್, ವಾರ್ತಾವಿನಿಮಯ, ಮೂಲಭೂತ ಉದ್ದಿಮೆಗಳಲ್ಲಿಯೂ ಇಂದು ಖಾಸಗೀಕರಣವು ಸಕ್ರಿಯವಾಗಿದೆ. BOT, PPP ಎಂಬೀ ರೀತಿಗಳಲ್ಲಿ ಖಾಸಗಿ ವಲಯದ ಕಾರ್ಯಚಟುವಟಿಕೆಗಳನ್ನು ಕಾಣಬಹುದು. ಹಲವು ನವೀನ ವಲಯಗಳು ಮಾರುಕಟ್ಟೆಯನ್ನು ಪ್ರವೇಶಿಸುವುದರೊಂದಿಗೆ, ಖಾಸಗೀಕರಣವು ಹೆಚ್ಚು ಬಲಗೊಂಡಿತು. ಪ್ರಧಾನ ರಸ್ತೆಗಳ ಮೂಲಕ ಸಂಚರಿಸುವ ವಾಹನಗಳಿಂದ ಟೋಲ್ ತೆರಿಗೆ

### BOT (Build Operate and Transfer)

ರಸ್ತೆ, ಸೇತುವೆಯಂತಹ ಕೆಲಸಗಳನ್ನು ಖಾಸಗಿ ವಲಯಗಳು ನಿರ್ಮಿಸಿ, ಅದರ ಖರ್ಚನ್ನು ಟೋಲ್ ತೆರಿಗೆಯ ಮೂಲಕ ಸ್ವೀಕರಿಸಿ, ನಂತರದಲ್ಲಿ ಅದನ್ನು ಸರಕಾರಕ್ಕೆ ವರ್ಗಾಯಿಸುವುದನ್ನು BOT ಎಂದು ಕರೆಯುತ್ತಾರೆ.

### PPP (Public Private Partnership)

ಕೆಲವೊಂದು ಉದ್ದಿಮೆಗಳನ್ನು ಖಾಸಗಿ ವ್ಯಕ್ತಿಗಳು ಮತ್ತು ಸರಕಾರವು ಸಂಯುಕ್ತವಾಗಿ ಆರಂಭಿಸುತ್ತವೆ. ಹೂಡಿದ ಬಂಡವಾಳಕ್ಕನುಸಾರವಾಗಿ ಲಾಭವನ್ನು ಹಂಚಿಕೊಳ್ಳುತ್ತಾರೆ. ಕೊಚ್ಚಿಯ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು (CIAC) ಇದಕ್ಕೆ ಉದಾಹರಣೆಯಾಗಿದೆ.

ಸಂಗ್ರಹಿಸುವುದನ್ನು ಕಂಡಿರುವಿರಲ್ಲವೇ. ಅದನ್ನು ಸಂಗ್ರಹಿಸುವವರು ಯಾರು? ಈ ತೆರಿಗೆಯನ್ನು ಯಾಕೆ ಸಂಗ್ರಹಿಸುತ್ತಾರೆ?



ರಾಷ್ಟ್ರೀಯ ಹೆದ್ದಾರಿಯಲ್ಲಿ ಟೋಲ್‌ಬೂತ್

## ಜಾಗತೀಕರಣ

ಉದಾರೀಕರಣದ ಅಂಗವಾಗಿ ವಿದೇಶೀ ಬಂಡವಾಳ ಹೂಡಿಕೆಗಿರುವ ನಿಯಂತ್ರಣದಲ್ಲಿ ಬದಲಾವಣೆ ಮಾಡಿದ ಪರಿಣಾಮವಾಗಿ ಹೆಚ್ಚಿನ ಪ್ರಮಾಣದಲ್ಲಿ ಬಂಡವಾಳ ಹೂಡಲು ವಿದೇಶಿ ಕಂಪೆನಿಗಳು ತಯಾರಾದವು. ಇದರಿಂದಾಗಿ ಜಾಗತಿಕ ಮಟ್ಟದಲ್ಲಿ ಬಂಡವಾಳದ ಪ್ರವಹಿಸುವಿಕೆಯು ಹೆಚ್ಚಾಯಿತು. ದೇಶಗಳು ತಾವು ಮಾಡಿಕೊಂಡ ಸ್ವತಂತ್ರ ಮಾರುಕಟ್ಟೆ ಒಪ್ಪಂದಗಳ ಮೂಲಕ ಆಮದು ಸುಂಕ ಮತ್ತು ತೆರಿಗೆಯನ್ನು ಕಡಿತಗೊಳಿಸಿ ಆಮದು ಮತ್ತು ರಫ್ತನ್ನು ಸುಗಮಗೊಳಿಸಿದವು. ಜಾಗತಿಕ ಮಟ್ಟದಲ್ಲಿ ಕಾರ್ಮಿಕರ ಪ್ರವಾಹ ಹಾಗೂ ತಂತ್ರಜ್ಞಾನದ ವಿನಿಮಯವು ಹೆಚ್ಚಾಯಿತು. ಇದರೊಂದಿಗೆ ಎಲ್ಲ ದೇಶಗಳ ಉತ್ಪನ್ನಗಳು ಮತ್ತು ಸೇವೆಗಳು ಜಾಗತಿಕ ಮಾರುಕಟ್ಟೆಯಲ್ಲಿ ಲಭ್ಯವಾದುವು. ಇದರಿಂದಾಗಿ ಜಗತ್ತು ಒಂದೇ ಮಾರುಕಟ್ಟೆಯಾಗಿ ಬದಲಾಗುವ ಸ್ಥಿತಿಗೆ ತಲುಪಿತು. ಮಾರುಕಟ್ಟೆ ಸೌಹಾರ್ದ ಆರ್ಥಿಕ ಧೋರಣೆಗಳು ದೇಶಗಳ ನಡುವಿನ ಸಂಬಂಧವು ಉತ್ತಮಗೊಳ್ಳಲು ಕಾರಣವಾದುವು.


ಕೊಚ್ಚಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ

ದೇಶಗಳ ಮೇರೆಗಳನ್ನು ದಾಟಿ ಹೋಗುವ ಬಂಡವಾಳದ ಪ್ರವಾಹ, ಕಾರ್ಮಿಕರ ಪ್ರವಹಿಸುವಿಕೆ, ತಂತ್ರಜ್ಞಾನ ವಿನಿಮಯ, ಸರಕು ಮತ್ತು ಸೇವೆಗಳ ಪ್ರವಾಹ ಇತ್ಯಾದಿಗಳ ಮೂಲಕ ದೇಶಗಳ ನಡುವೆ ಪರಸ್ಪರ ಉಂಟಾದ ಆರ್ಥಿಕ ಏಕೀಕರಣ ಮತ್ತು ಆಶ್ರಯತ್ವವನ್ನು ಜಾಗತೀಕರಣ ಎಂದು ಕರೆಯುತ್ತಾರೆ.

ಇಪ್ಪತ್ತನೇ ಶತಮಾನದ ಕೊನೆಯ ದಶಕದಲ್ಲಿ ಕಂಪ್ಯೂಟರ್, ಅಂತರ್ಜಾಲ, ಮೊಬೈಲ್ ಫೋನ್ ಎಂಬೀ ಕ್ಷೇತ್ರಗಳಲ್ಲುಂಟಾದ ಬೆಳವಣಿಗೆಯು ವಾರ್ತಾವಿನಿಮಯವನ್ನು ಸರಳಗೊಳಿಸಿತು. ಕಂಟೈನರ್ ಹಡಗುಗಳು, ವಿಮಾನಗಳು, ಬುಲ್ಲೆಟ್ ಟ್ರೈನುಗಳು, ಸಾರಿಗೆ ವಲಯದಲ್ಲಿನ ಕ್ಷಿಪ್ರ ಪ್ರಗತಿಗೆ ಕಾರಣವಾದುವು. ಈ ಬದಲಾವಣೆಯು ಜಾಗತೀಕರಣಕ್ಕೆ ಸಹಾಯಕವಾಯಿತು.

**ವಿದೇಶಿ ಬಂಡವಾಳ ನಿಕ್ಷೇಪ**

ಒಂದು ದೇಶವು ಮತ್ತೊಂದು ದೇಶದ ಉದ್ದಿಮೆ, ಭೂಮಿ, ಷೇರುಗಳು, ಬಾಂಡ್‌ಗಳು, ಬ್ಯಾಂಕ್ ನಿಕ್ಷೇಪಗಳು ಇತ್ಯಾದಿಗಳಲ್ಲಿ ಬಂಡವಾಳ ನಿಕ್ಷೇಪಿಸುವುದನ್ನು ವಿದೇಶಿ ಬಂಡವಾಳ ನಿಕ್ಷೇಪ ಎನ್ನುತ್ತಾರೆ.



ಜಾಗತೀಕರಣವು ಬಲಗೊಂಡಾಗ ಬಂಡವಾಳ ಮತ್ತು ತಂತ್ರಜ್ಞಾನವು ತುಲನಾತ್ಮಕವಾಗಿ ಕಡಿಮೆಯಿರುವ ಕೆಲವು ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಜಾಗತೀಕರಣದ ಪ್ರಯೋಜನವನ್ನು ಪಡೆಯಲು ಸಾಧ್ಯವಾಗಲಿಲ್ಲ. ಆದ್ದರಿಂದ ಇಂತಹ ದೇಶಗಳು ವಿದೇಶಿ ಬಂಡವಾಳವನ್ನು ಆಕರ್ಷಿಸಲು ಸರಕಾರದ ನಿಯಂತ್ರಣಗಳನ್ನು ಗರಿಷ್ಠ ಪ್ರಮಾಣದಲ್ಲಿ ಕಡಿತಗೊಳಿಸಲು ತಯಾರಾದವು. ಸರಕಾರದ ನಿಯಂತ್ರಣಗಳನ್ನು ಸಂಪೂರ್ಣವಾಗಿ ನಿರಾಕರಿಸುವ ಹೊಸ ಆರ್ಥಿಕ ಧೋರಣೆಯನ್ನು ನವೀನ ಉದಾರೀಕರಣ (Neo Liberelization)ಎನ್ನುತ್ತಾರೆ. ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಗಳಾದ ವಿಶ್ವಬ್ಯಾಂಕ್ (World Bank) ಮತ್ತು ಅಂತಾರಾಷ್ಟ್ರೀಯ ಹಣಕಾಸು ನಿಧಿ (IMF) ಎಂಬಿವುಗಳು ಜಾಗತೀಕರಣದ ಧೋರಣೆಗಳನ್ನು ಜಾರಿಗೊಳಿಸುವಲ್ಲಿ ಪ್ರಧಾನ ಪಾತ್ರವನ್ನು ವಹಿಸುತ್ತವೆ. ಜಾಗತಿಕ ವ್ಯಾಪಾರ ಸಂಘಟನೆಯ ರೂಪೀಕರಣ ಮತ್ತು ಬಹುರಾಷ್ಟ್ರ ಕಂಪೆನಿಗಳ ಬೆಳವಣಿಗೆಯು ಜಾಗತೀಕರಣವನ್ನು ತ್ವರಿತಗೊಳಿಸಿತು.

## ಜಾಗತಿಕ ವ್ಯಾಪಾರ ಸಂಘಟನೆ

ಜಾಗತಿಕ ದೇಶಗಳ ಚರ್ಚೆಯಲ್ಲಿ ಜಾಗತಿಕ ವ್ಯಾಪಾರ ವಲಯದಲ್ಲಿರುವ ನಿಯಂತ್ರಣಗಳನ್ನು ಗರಿಷ್ಠ ಪ್ರಮಾಣದಲ್ಲಿ ಕಡಿಮೆಗೊಳಿಸುವ ಪ್ರಯತ್ನಗಳು ನಡೆಯುತ್ತಿತ್ತು. 1995 ಜನವರಿ 1 ರಂದು ಜಿನೇವಾವನ್ನು ಕೇಂದ್ರವಾಗಿರಿಸಿ ಜಾಗತಿಕ ವ್ಯಾಪಾರ ಸಂಘಟನೆಯು (World Trade Organization) ರೂಪುಗೊಳ್ಳುವುದರೊಂದಿಗೆ ಈ ಪ್ರಯತ್ನವು ತೀವ್ರಗೊಂಡಿತು. ಭಾರತವು ಈ ಸಂಘಟನೆಯ ಸ್ಥಾಪಕ ಸದಸ್ಯ ದೇಶವಾಗಿದೆ. 2015 ಎಪ್ರಿಲ್‌ನಲ್ಲಿ ನಡೆಸಿದ ಲೆಕ್ಕಾಚಾರದ ಪ್ರಕಾರ ಜಗತ್ತಿನ 161 ದೇಶಗಳು ಈ ಸಂಘಟನೆಯ ಸದಸ್ಯರಾಗಿದ್ದಾರೆ.

WORLD TRADE ORGANIZATION

*ಜಾಗತಿಕ ವ್ಯಾಪಾರ ಸಂಘಟನೆಯ ಚಿಹ್ನೆ*

ಜಾಗತಿಕ ವ್ಯಾಪಾರ ಸಂಘಟನೆಯು ರೂಪುಗೊಳ್ಳುವುದರೊಂದಿಗೆ ಜಾಗತಿಕ ವ್ಯಾಪಾರ ರಂಗದಲ್ಲಿರುವ ನಿಯಂತ್ರಣಗಳು ಇಲ್ಲವಾದುವು. ಈ ಸಂಘಟನೆಯೊಂದಿಗೆ ರೂಪುಗೊಂಡ ಸ್ವತಂತ್ರ ವ್ಯಾಪಾರ ಕರಾರುಗಳ ಪ್ರಧಾನ ನಿರ್ದೇಶಗಳನ್ನು ಕೆಳಗೆ ನೀಡಲಾಗಿದೆ.

- ಆಮದು ತೆರಿಗೆಯನ್ನು ಹಂತಹಂತವಾಗಿ ಕಡಿತಗೊಳಿಸುವುದು.
- ಸಬ್ಸಿಡಿಯನ್ನು ಕಡಿತಗೊಳಿಸುವುದು.
- ಪೇಟೆಂಟ್ ನಿಯಮಗಳನ್ನು ಪರಿಷ್ಕರಿಸುವುದು.
- ಸೇವಾ ವಲಯಗಳಾದ ಮಾಧ್ಯಮಗಳು, ಟೆಲಿಕಾಂ, ಬ್ಯಾಂಕಿಂಗ್, ಇನ್ಶ್ಯೂರೆನ್ಸ್ ಮುಂತಾದ ಕ್ಷೇತ್ರಗಳಲ್ಲಿ ವಿದೇಶಿ ಬಂಡವಾಳ ಹೂಡಿಕೆಗೆ ಅನುಮತಿಯನ್ನು ನೀಡುವುದು.
- ಆಂತರಿಕ ನಿಕ್ಷೇಪಗಳಿಗೆ ನೀಡುವಷ್ಟೇ ಪ್ರಾಧಾನ್ಯವನ್ನು ವಿದೇಶಿ ನಿಕ್ಷೇಪಗಳಿಗೂ ನೀಡುವುದು.

ಈ ಧೋರಣೆಗಳೆಲ್ಲವೂ ಉದಾರೀಕರಣವನ್ನು ಮತ್ತು ಜಾಗತೀಕರಣವನ್ನು ಬಲಿಷ್ಠಗೊಳಿಸಿದುವು.

**ಜಾಗತಿಕ ಬ್ಯಾಂಕ್ ಮತ್ತು ಅಂತಾರಾಷ್ಟ್ರೀಯ ಹಣಕಾಸು ನಿಧಿ**

1944ರ ಬ್ರಿಟನ್‌ವುಡ್ಸ್ (ಅಮೇರಿಕಾ) ಸಮ್ಮೇಳನದ ತೀರ್ಮಾನದಂತೆ ಜಾಗತಿಕ ಬ್ಯಾಂಕ್ ಮತ್ತು ಅಂತಾರಾಷ್ಟ್ರೀಯ ಹಣಕಾಸು ನಿಧಿಯು ರೂಪುಗೊಂಡಿತು. ಅಮೇರಿಕಾದ ವಾಷಿಂಗ್ಟನ್‌ನಲ್ಲಿ ಇದರ ಕೇಂದ್ರ ಕಛೇರಿಯಿದೆ. ಸಾಮಾನ್ಯವಾಗಿ ಆರ್ಥಿಕ ಸಂದಿಗ್ಧತೆಯಿರುವ ದೇಶಗಳು ಸಹಾಯಕ್ಕಾಗಿ ಈ ಸಂಸ್ಥೆಗಳನ್ನು ಸಮೀಪಿಸುತ್ತವೆ. ಸಾಲವು ಲಭಿಸಬೇಕಿದ್ದರೆ ಈ ಸಂಸ್ಥೆಗಳು ನಿರ್ದೇಶಿಸುವ ಉಪಾಧಿಗಳನ್ನು ದೇಶಗಳು ಅಂಗೀಕರಿಸಿ ಜಾರಿಗೊಳಿಸಬೇಕಾಗುತ್ತದೆ. ಈ ಎಲ್ಲ ಉಪಾಧಿಗಳು ಜಾಗತೀಕರಣವನ್ನು ಬಲಪಡಿಸಲು ಕಾರಣವಾಗುವುದು.

**ಪೇಟೆಂಟ್**

ಹೊಸ ತಂತ್ರಜ್ಞಾನ, ಉತ್ಪನ್ನ, ಉತ್ಪಾದನಾ ರೀತಿಯನ್ನು ಕಂಡುಹಿಡಿಯುವವರಿಗೆ ನಿಶ್ಚಿತ ಕಾಲದ ವರೆಗೆ ಅವರಿಗೆ ಇದರ ಮೇಲಿನ ಹಕ್ಕನ್ನು ಸಂರಕ್ಷಿಸುವುದಕ್ಕಾಗಿ ನೀಡುವ ಅನುಮತಿಯೇ ಪೇಟೆಂಟ್ ಆಗಿದೆ.

## ಬಹುರಾಷ್ಟ್ರೀಯ ಕಂಪೆನಿಗಳು

ಒಂದು ದೇಶದಲ್ಲಿ ನೋಂದಾವಣೆಗೊಂಡು ಅನೇಕ ದೇಶಗಳಲ್ಲಿ ಕಾರ್ಯನಿರ್ವಹಿಸುವ ಕಂಪೆನಿಗಳನ್ನು ಬಹುರಾಷ್ಟ್ರೀಯ ಕಂಪೆನಿಗಳೆಂದು ಕರೆಯುತ್ತಾರೆ. ಅಧಿಕ ಮೊತ್ತದ ಬಂಡವಾಳ ಮತ್ತು ಉನ್ನತ ಮಟ್ಟದ ತಂತ್ರಜ್ಞಾನವನ್ನು ಹೊಂದಿರುವ ಈ ರೀತಿಯ ಕಂಪೆನಿಗಳು ನವೀನ ಉದಾರೀಕರಣ ನೀತಿಯನ್ನು ಒಂದು ಸಂದರ್ಭವನ್ನಾಗಿ ಉಪಯೋಗಿಸಿದವು. ಉತ್ಪನ್ನಗಳನ್ನು ಒಂದು ದೇಶದಲ್ಲಿ ಉತ್ಪಾದಿಸಿ ಮತ್ತೊಂದು ದೇಶಕ್ಕೆ ರಫ್ತು ಮಾಡುವ ಬದಲು ಆ ದೇಶದಲ್ಲಿಯೇ ಬಂಡವಾಳವನ್ನು ಹೂಡಿ ಆ ದೇಶದ ಕಚ್ಚಾವಸ್ತುಗಳನ್ನು, ಮಾನವ ಸಂಪನ್ಮೂಲವನ್ನು ಹಾಗೂ ಮಾರುಕಟ್ಟೆಯನ್ನು ತಮಗೆ ಅನುಕೂಲವಾಗುವಂತೆ ಉಪಯೋಗಿಸಲು ಈ ಕಂಪನಿಗಳಿಗೆ ಸಾಧ್ಯವಾಯಿತು.

ಕೆಲವು ಬಹುರಾಷ್ಟ್ರೀಯ ಕಂಪೆನಿಗಳ ಆದಾಯವು ಕೆಲವು ಅಭಿವೃದ್ಧಿಹೊಂದುತ್ತಿರುವ ದೇಶದ ರಾಷ್ಟ್ರೀಯ ಆದಾಯಕ್ಕಿಂತಲೂ ಅಧಿಕವಾಗಿರುತ್ತದೆ. ಹೆಚ್ಚಿನ ಸಂದರ್ಭಗಳಲ್ಲಿ ದೇಶಗಳ ಆಂತರಿಕ ಧೋರಣೆಗಳಲ್ಲಿ ಹಾಗೂ ನಿಯಮಗಳಲ್ಲಿ ತಮಗೆ ಅನುಕೂಲಕರವಾಗುವಂತಹ ಬದಲಾವಣೆಗಳನ್ನು ಜಾರಿಗೆ ತರಲು ಬಹುರಾಷ್ಟ್ರೀಯ ಕಂಪೆನಿಗಳಿಗೆ ಸಾಧ್ಯವಾಗುತ್ತದೆ.

*ಬಹುರಾಷ್ಟ್ರೀಯ ಕಂಪೆನಿಗಳು ಇತರ ಕಂಪೆನಿಗಳಿಗಿಂತ ಹೇಗೆ ಭಿನ್ನವಾಗಿವೆ? ಚರ್ಚೆ ನಡೆಸಿ ಟಿಪ್ಪಣಿ ತಯಾರಿಸಿರಿ.*

ಬಹುರಾಷ್ಟ್ರೀಯ ಕಂಪೆನಿಗಳು ಹೆಚ್ಚಿನ ಸಂದರ್ಭಗಳಲ್ಲಿ ಪ್ರಾದೇಶಿಕ ಕಂಪೆನಿಗಳೊಂದಿಗೆ ಸೇರಿ ಅಥವಾ ಆ ಕಂಪೆನಿಗಳನ್ನು ಖರೀದಿಸಿ ಉತ್ಪಾದನೆಯನ್ನು ಆರಂಭಿಸುತ್ತವೆ. ಆ ಮೂಲಕ ಪ್ರಾದೇಶಿಕ ಕಂಪೆನಿಗಳ ಉತ್ಪಾದನೆ ಹಾಗೂ ವಿತರಣೆ ವ್ಯವಸ್ಥೆಯನ್ನು ಉಪಯೋಗಿಸಿ ವೇಗವಾಗಿ ಉತ್ಪನ್ನಗಳನ್ನು ಮಾರುಕಟ್ಟೆಗಳಿಗೆ ತಲುಪಿಸಲು ಈ ಕಂಪೆನಿಗಳಿಗೆ ಸಾಧ್ಯವಾಗುತ್ತದೆ.

ಅಲ್ಲದೆ ಈ ಮೂಲಕ ಪ್ರಾದೇಶಿಕ ಕಂಪೆನಿಗಳಿಗೆ ಬೇಕಾದ ಹೆಚ್ಚುವರಿ ಬಂಡವಾಳ ಮತ್ತು ಉನ್ನತ ತಂತ್ರಜ್ಞಾನವು ಲಭಿಸುವಂತೆ ಮಾಡುತ್ತದೆ. ಇನ್ನೊಂದು ರೀತಿಯಲ್ಲಿ ಬಹುರಾಷ್ಟ್ರೀಯ ಕಂಪೆನಿಗಳು ಉತ್ಪಾದನೆಯನ್ನು ನಿಯಂತ್ರಿಸುತ್ತವೆ. ಉತ್ಪಾದನೆಯ ಜವಾಬ್ದಾರಿಯನ್ನು ಪ್ರಾದೇಶಿಕ ಕಂಪೆನಿಗಳಿಗೆ ನೀಡಿ ಅವರಿಂದ ಸಿಗುವ ಉತ್ಪನ್ನಗಳನ್ನು ಸ್ವಂತ ಬ್ರಾಂಡ್ ಹೆಸರಿನಲ್ಲಿ ಮಾರುಕಟ್ಟೆಗೆ ಬಿಡುಗಡೆಗೊಳಿಸುತ್ತವೆ. ವಸ್ತ್ರ, ಚಪ್ಪಲಿ, ಕ್ರೀಡಾ ಉಪಕರಣ ಇತ್ಯಾದಿಗಳ ನಿರ್ಮಾಣವು ಇದಕ್ಕೆ ಉದಾಹರಣೆಯಾಗಿದೆ. ಜಗತ್ತಿನ ಬೇರೆ ಬೇರೆ ದೇಶಗಳಲ್ಲಿ ನಿರ್ಮಾಣವಾಗುವ ಬಿಡಿಭಾಗಗಳನ್ನು ಯಾವುದಾದರೂ ಒಂದು ದೇಶದಲ್ಲಿ ಸಂಯೋಜಿಸುವ ಪ್ರಕ್ರಿಯೆಯನ್ನು ಇವರು ಕೈಗೊಳ್ಳುತ್ತಾರೆ. ವಾಹನ ನಿರ್ಮಾಣವು ಇದಕ್ಕೊಂದು ಉದಾಹರಣೆಯಾಗಿದೆ.



| Made in Thailand | Made in China | Made in India |
|---|---|---|

*ಉತ್ಪನ್ನಗಳನ್ನು ಕೊಂಡುಕೊಳ್ಳುವಾಗ ಅವುಗಳಲ್ಲಿ ಈ ಮೇಲಿನಂತೆ ಟಾಗ್‌ಗಳನ್ನು ನೋಡಿರುವಿರಲ್ಲವೇ. ವಾಸ್ತವವಾಗಿ ಈ ಉತ್ಪನ್ನಗಳು ಪೂರ್ಣವಾಗಿ ಈ ದೇಶದಲ್ಲಿ ಉತ್ಪಾದಿಲ್ಪಟ್ಟವೆಯೆ? ಕೆಳಗೆ ನೀಡಿರುವ ಸೂಚನೆಗಳ ಆಧಾರದಲ್ಲಿ ಚರ್ಚಿಸಿ ಟಿಪ್ಪಣಿ ತಯಾರಿಸಿರಿ.*

*♦ ಬಂಡವಾಳ ♦ ಕಚ್ಚಾ ವಸ್ತುಗಳು ♦ ತಂತ್ರಜ್ಞಾನ ♦ ಉತ್ಪನ್ನಗಳ ಬಿಡಿ ಭಾಗಗಳನ್ನು ಸಂಯೋಜಿಸುವುದು. ♦ ಸಂಘಟಕ.*

ನವೀನ ಉದಾರೀಕರಣದ ಆಶಯಗಳು ವ್ಯಾಪಾರೀಕರಣದ ಆವಿರ್ಭಾವಕ್ಕೆ ಕಾರಣವಾಯಿತು.

## ವ್ಯಾಪಾರೀಕರಣ

ಹೊಸ ಆರ್ಥಿಕ ಧೋರಣೆಯ ಪರಿಣಾಮವಾಗಿ ಮಾರುಕಟ್ಟೆಯು ಇಂದು ಸ್ವತಂತ್ರ, ವ್ಯಾಪಕ ಹಾಗೂ ಪ್ರಬಲವಾಗಿ ಬದಲಾಯಿತು. ಮಾರುಕಟ್ಟೆಯ ಮೇಲಿನ ಸರಕಾರದ ನಿಯಂತ್ರಣವು ಇಂದು ಬಹುತೇಕ ಇಲ್ಲವಾಗಿದೆ. ಮೂಲಭೂತ ಸೌಕರ್ಯಗಳ ಅಭಿವೃದ್ಧಿ, ಮೂಲಭೂತ ಉದ್ದಿಮೆಗಳು, ಬ್ಯಾಂಕಿಂಗ್, ಇನ್ಶ್ಯೂರೆನ್ಸ್ ಎಂಬೀ ಹೊಸ ವಲಯಗಳೂ ಇಂದು ಮಾರುಕಟ್ಟೆಯ ಪರಿಧಿಯಲ್ಲಿ ಬರುತ್ತವೆ. ಸರಕಾರದ ಮಾಲಕತ್ವದಲ್ಲಿರುವ ಬಹುಪಾಲು ಸಂಸ್ಥೆಗಳು ಇಂದು ಖಾಸಗೀಕರಣಗೊಂಡು ಮಾರುಕಟ್ಟೆಯ ಭಾಗವಾದುವು. 'ಎಲ್ಲವೂ ಇಂದು ಮಾರುಕಟ್ಟೆಯಲ್ಲಿ ಲಭ್ಯವಿದೆ ಅಥವಾ ಮಾರುಕಟ್ಟೆಯ ಮೂಲಕ ಲಭ್ಯವಾಗಿಸಬೇಕು.' ಎಂಬ ವ್ಯವಸ್ಥೆಯ ಕಡೆಗೆ ಬದಲಾಯಿತು. ಈ ಒಲವನ್ನು ವ್ಯಾಪಾರೀಕರಣ ಎಂದು ಕರೆಯುತ್ತಾರೆ. ಲಾಭವು ವ್ಯಾಪಾರೀಕರಣದ ಪರಮೋನ್ನತ ಉದ್ದೇಶವಾಗಿದೆ.

### ಹೊಸ ಆರ್ಥಿಕ ಧೋರಣೆಗಳಿಗೆ ಅನುಕೂಲ ಮತ್ತು ಪ್ರತಿಕೂಲ ವಾದಗಳು

ಹೊಸ ಆರ್ಥಿಕ ಧೋರಣೆಯ ಕುರಿತಾಗಿ ಅನೇಕ ಅನುಕೂಲ ಮತ್ತು ಪ್ರತಿಕೂಲ ವಾದಗಳು ಹುಟ್ಟಿಕೊಂಡಿವೆ. ಅವುಗಳು ಯಾವುವೆಂದು ಪರಿಶೀಲಿಸುವ.

ಅನುಕೂಲ ವಾದಗಳು

- ವೈವಿಧ್ಯಮಯವಾದ ಉತ್ಪನ್ನಗಳು ಮಾರುಕಟ್ಟೆಯಲ್ಲಿ ಲಭಿಸುತ್ತವೆ.
- ಉನ್ನತ ತಾಂತ್ರಿಕತೆಯನ್ನು ಉಪಯೋಗಿಸಲು ಸಾಧ್ಯವಾಗುತ್ತದೆ.
- ಸ್ಪರ್ಧೆಯ ಹೆಚ್ಚಳವು ಬೆಲೆ ಕಡಿಮೆಯಾಗಲು ಕಾರಣವಾಗುತ್ತದೆ.
- ರಫ್ತು ಹೆಚ್ಚುತ್ತದೆ.
- ಕಂಪನಿಗಳಿಗೆ ವಿದೇಶಿ ಮಾರುಕಟ್ಟೆಗಳನ್ನು ಪ್ರವೇಶಿಸಲು ಸಾಧ್ಯವಾಗುತ್ತದೆ.
- ಉದ್ದಿಮೆಗಳು ಹೆಚ್ಚಾದಂತೆ ಉದ್ಯೋಗ ಸೃಷ್ಟಿಯೂ ಹೆಚ್ಚುತ್ತದೆ.
- ರಾಷ್ಟ್ರೀಯ ಆದಾಯ ಹೆಚ್ಚುತ್ತದೆ.

ಪ್ರತಿಕೂಲ ವಾದಗಳು

- ಆರ್ಥಿಕ ಅಸಮಾನತೆ ಹೆಚ್ಚುತ್ತದೆ.
- ಪ್ರಾಕೃತಿಕ ಸಂಪನ್ಮೂಲಗಳ ಅಮಿತವಾದ ಶೋಷಣೆಯಾಗುತ್ತದೆ.
- ಆಮದಿನಿಂದಾಗಿ ಪ್ರಾದೇಶಿಕ ಉತ್ಪನ್ನಗಳ ಬೆಲೆ ಕುಸಿಯುತ್ತದೆ.
- ಆರ್ಥಿಕ ವ್ಯವಸ್ಥೆಯನ್ನು ನಿಯಂತ್ರಿಸುವ ಸರಕಾರದ ಸಾಮರ್ಥ್ಯವು ಕಡಿಮೆಯಾಗುತ್ತದೆ.
- ಉದ್ಯೋಗ ಸಂರಕ್ಷಣೆಯು ಕಡಿಮೆಯಾಗುತ್ತದೆ.
- ಸಾರ್ವಜನಿಕ ಸಂಸ್ಥೆಗಳು ಖಾಸಗೀಕರಣಗೊಳ್ಳುವುದರಿಂದ ಭವಿಷ್ಯದಲ್ಲಿ ಸರಕಾರದ ಆದಾಯವು ಕಡಿಮೆಯಾಗಬಹುದು.

*"ಮಾರುಕಟ್ಟೆ ಅಂದು ಇಂದು" ಎಂಬ ವಿಷಯವನ್ನು ಹಿರಿಯರೊಂದಿಗೆ ಚರ್ಚಿಸಿ ಟಿಪ್ಪಣಿ ತಯಾರಿಸಿರಿ. ಸೂಚಕಗಳು - ಬೇಡಿಕೆಗಳು, ಉತ್ಪನ್ನಗಳಲ್ಲಿ ವೈವಿಧ್ಯ, ಮಾರುಕಟ್ಟೆ ದರ, ವಿದೇಶಿ ಉತ್ಪನ್ನಗಳು.*

## ಪ್ರಧಾನ ಕಲಿಕಾ ಸಾಧನೆಗಳಲ್ಲಿ ಒಳಪಡುವವುಗಳು

- ಉತ್ಪಾದನ ಘಟಕಗಳ ಮಾಲಕತ್ವದ ಆಧಾರದಲ್ಲಿ ಆರ್ಥಿಕ ವ್ಯವಸ್ಥೆಯನ್ನು ವರ್ಗೀಕರಿಸುವರು.
- ಬಂಡವಾಳಶಾಹಿ, ಸಮಾಜವಾದಿ, ಮಿಶ್ರ ಆರ್ಥಿಕ ವ್ಯವಸ್ಥೆಯ ವಿಶೇಷತೆಗಳನ್ನು ತಿಳಿದುಕೊಂಡು ಪಟ್ಟಿ ಮಾಡುವರು.
- ಉದಾರೀಕರಣದ ಭಾಗವಾಗಿ ಭಾರತವು ಸ್ವೀಕರಿಸಿದ ಕ್ರಮಗಳನ್ನು ವಿವರಿಸುವರು.
- ಜಾಗತೀಕರಣ ಎಂದರೇನೆಂದು ತಿಳಿದುಕೊಂಡು ವಿವರಿಸುವರು.
- ಜಾಗತಿಕ ವ್ಯಾಪಾರ ಸಂಘಟನೆಯ ರೂಪೀಕರಣವು ಉದಾರೀಕರಣಕ್ಕೆ ಹೇಗೆ ಸಹಾಯ ಮಾಡಿತು ಎಂದು ವಿವರಿಸುವರು.
- ಬಹುರಾಷ್ಟ್ರೀಯ ಕಂಪೆನಿಗಳ ಕಾರ್ಯಚಟುವಟಿಕೆಗಳನ್ನು ವಿಶ್ಲೇಷಿಸುವರು.

- ಜಾಗತೀಕರಣದ ಗುಣ ಮತ್ತು ದೋಷಗಳನ್ನು ಹೋಲಿಸುವರು.
- ವ್ಯಾಪಾರೀಕರಣದ ವ್ಯಾಪ್ತಿಯನ್ನು ತಿಳಿದುಕೊಳ್ಳುವರು.



## ಮೌಲ್ಯನಿರ್ಣಯ ಮಾಡುವ

- ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯನ್ನು ಮಾರುಕಟ್ಟೆ ಆರ್ಥಿಕ ವ್ಯವಸ್ಥೆ ಎಂದು ಕರೆಯಲು ಕಾರಣವೇನು?
- ಯೋಜನೆಯು ಸಮಾಜವಾದದ ಪ್ರಧಾನ ವಿಶೇಷತೆಯಾಗಿದೆ ಎಂಬುದನ್ನು ಸ್ಪಷ್ಟಪಡಿಸಿರಿ.
- ಆಧುನಿಕ ಜಗತ್ತಿನಲ್ಲಿ ಬಂಡವಾಳಶಾಹಿ ಮತ್ತು ಸಮಾಜವಾದಿ ಆರ್ಥಿಕ ವ್ಯವಸ್ಥೆಯನ್ನು ಪೂರ್ಣಪ್ರಮಾಣದಲ್ಲಿ ನೋಡಲು ಸಾಧ್ಯವಿಲ್ಲ. ಈ ಹೇಳಿಕೆಯನ್ನು ಸ್ಪಷ್ಟಪಡಿಸಿರಿ.
- ಭಾರತದಲ್ಲಿ ಉದಾರೀಕರಣದ ಭಾಗವಾಗಿ ಸರಕಾರವು ಸ್ವೀಕರಿಸಿದ ಕ್ರಮಗಳನ್ನು ಪಟ್ಟಿ ಮಾಡಿರಿ.
- ಬಹುರಾಷ್ಟ್ರೀಯ ಕಂಪೆನಿಗಳ ಕಾರ್ಯನಿರ್ವಹಣೆಯ ಕುರಿತು ಟಿಪ್ಪಣಿ ತಯಾರಿಸಿರಿ.
- ಜಾಗತೀಕರಣದ ಧೋರಣೆಗಳನ್ನು ನೀವು ಬೆಂಬಲಿಸುವಿರಾ? ಸ್ಪಷ್ಟಪಡಿಸಿರಿ.



## ಮುಂದುವರಿದ ಚಟುವಟಿಕೆಗಳು

- ಉದಾರೀಕರಣದ ಧೋರಣೆಗಳನ್ನು ಗಾಂಧೀಜಿಯ ಅರ್ಥಶಾಸ್ತ್ರ ಚಿಂತನೆಗಳೊಂದಿಗೆ ಹೋಲಿಸಿ ಟಿಪ್ಪಣಿ ತಯಾರಿಸಿರಿ.
- ಬಹುರಾಷ್ಟ್ರೀಯ ಕಂಪೆನಿಯಾಗಿ ಬದಲಾದ ಯಾವುದಾದರೂ ಭಾರತೀಯ ಕಂಪೆನಿಗಳಿವೆಯೆ? ಅಂತರ್ಜಾಲದ ಸಹಾಯದಿಂದ ಮಾಹಿತಿಗಳನ್ನು ಕಲೆಹಾಕಿ ತಿಳಿದುಕೊಳ್ಳಿರಿ.

# ಟಿಪ್ಪಣಿ

# ಟಿಪ್ಪಣಿ

# ಟಿಪ್ಪಣಿ

## ಟಿಪ್ಪಣಿ

# ಟಿಪ್ಪಣಿ

# ಟಿಪ್ಪಣಿ